ಪ್ರಕರಣ 1

ಮಾಡಬೇಕಾದ ಮತ್ತು ಮಾಡಬಾರದ ಕಾರ್ಯಗಳು

...ವಸ್ಥಾನ ಈ ಪದದ ನಿಜವಾದ ಅರ್ಥವೆಂದರೆ "ಶರೀರ"[1] ಆದ್ದರಿಂದ ದ...ಯದ ಗರ್ಭ ಗುಡಿಯೊಳಗಿನ ದೇವರೇ ಆತ್ಮ, ಅಂದರೆ ಅಜರಾಮರ ...ರ ಆತ್ಮ, ಪ್ರತಿಯೊಬ್ಬನೂ ತನ್ನ ಆತ್ಮ, ಸ್ವಚ್ಛ, ಮತ್ತು ಪವಿತ್ರವಾಗಿರುವಂತೆ ನೋಡಿಕೊಳ್ಳತಕ್ಕದ್ದು, ಆತ್ಮವು ಸ್ವಚ್ಛ ಮತ್ತು ಪವಿತ್ರವಾಗಿರಬೇಕಾದರೆ ಅದರ ದೇವಾಲಯುವಾದ ಶರೀರವೂ ನಿರ್ಮಲವಾಗಿರಬೇಕು. ದೇವಾಲಯದೊಳಗಿನ ಮೂರ್ತಿಯ ಚೈತನ್ಯವನ್ನು[2] ಕುಗ್ಗಿಸಕೂಡದು, ಅದಕ್ಕಾಗಿ ಇಡೀ ದೇವಾಲಯುವನ್ನು ಸದಾ ಸ್ವಚ್ಛ, ಪವಿತ್ರ, ಮತ್ತು ಶುದ್ಧಿಯಾಗಿಟ್ಟಿರಬೇಕು. ಹೀಗಾಗಿ ದೇವಾಲಯದ ಪವಿತ್ರ ವಾತಾವರಣವು, ತಮ್ಮ ಯಾವುದೇ ಮಾತು ಅಥವಾ ಕೃತಿಯಿಂದ ಯಾವದೇ ರೀತಿಯಲ್ಲಿ ಪರಿಣಾಮ ಹೊಂದವಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಭಕ್ತನ ಆದ್ಯ ಕರ್ತವ್ಯವಾಗಿದೆ. ಕಾರಣ ಎಲ್ಲಾ ಭಕ್ತಾದಿಗಳು, ಮನಸ್ಸು ಮತ್ತು ಶರೀರದಿಂದ ಅತ್ಯಂತ ನಿರ್ಮಲರಾಗಿ ದೇವಾಲಯುವನ್ನು ಪ್ರವೇಶಿಸಬೇಕು. ದೇವಾಲಯದ ಪವಿತ್ರ ವಾತಾವರಣವನ್ನು, ಭಕ್ತಾದಿಗಳ ಸಕ್ರಿಯ, ಹೃದಯಪೂರ್ವಕ ಸಹಕಾರ

---

1. इदम् शरीरम् कैन्तेय
क्षेत्रमित्यभिधीयते-Bagavat Geetha
2. Chaitanya ಚೈತನ್ಯ ದೇವತ್ವ

ದಿಂದಲೇ ಕಾಯ್ದಿಡುವುದು ಸಾಧ್ಯವಿದೆ. ಕೆಲವೊಂದು ಸೂಚನೆಗಳನ್ನು ಭಕ್ತಾದಿಗಳ ಮಾರ್ಗದರ್ಶನಕ್ಕಾಗಿ ಇಲ್ಲಿ ಕೊಟ್ಟಿದೆ :

1. ಪವಿತ್ರವಾದ ರುದ್ರತೀರ್ಥದಲ್ಲಿ ಸ್ನಾನ ಮುಗಿಸಿದ ನಂತರವೇ ದೇವಾಲಯವನ್ನು ಪ್ರವೇಶಿಸಿ (ದೇವಾಲಯದ ಉತ್ತರದ ಕೆರೆ) ದೇವಾಲಯವನ್ನು ಪವಿತ್ರ ಸ್ನಾನದ ನಂತರ ಅದರಲ್ಲೂ ಒದ್ದೆ ಬಟ್ಟೆಯಿಂದಲೇ ಪ್ರವೇಶಿಸುವುದು ಹೆಚ್ಚು ಉಚಿತವಾದುದು.

2. ದೇವಾಲಯದೊಳಗೆ ಎಲ್ಲಾ ಭಕ್ತಾದಿಗಳು ದೇವಾಲಯದ ರೀತಿಗಳನ್ನು, ನಿಯಮಗಳನ್ನು ಪಾಲಿಸಲೇಬೇಕು. ಇದರಿಂದ ಎಲ್ಲರಿಗೆ ಶಾಂತಮಯ ದರ್ಶನವು ಲಭ್ಯವಾಗುತ್ತದೆ.

3. ದೇವಾಲಯದೊಳಗೆ, ಸಮವಸ್ತ್ರ ಧರಿಸಿದ ದೇವಾಲಯದ ಕರ್ಮಚಾರಿಗಳು ಭಕ್ತಾದಿಗಳಿಗೆ ಸಹಾಯ ಸಲ್ಲಿಸಲು ಇರುತ್ತಾರೆ.

4. ದೇವಾಲಯದೊಳಗೆ ಶರ್ಟು, ಅಂಗಿ, ಪ್ಯಾಂಟ್, ಪೈಜಾಮ, ಲುಂಗಿ, ಚಪ್ಪಲಿ, ಬೂಟು ಇತ್ಯಾದಿಗಳಿಗೆ ಪ್ರವೇಶವಿಲ್ಲ. ಚಪ್ಪಲಿ ಇತ್ಯಾದಿಗಳನ್ನು ಹೊರಗೆ ಕಾಯ್ದಿಡುವ ವ್ಯವಸ್ಥೆ ಮಾಡಿದೆ.

5. ಗರ್ಭ ಗುಡಿಯಲ್ಲಿ ಕ್ಯಾಮರಾ, ರೇಡಿಯೋ ಇತ್ಯಾದಿಗಳನ್ನು ತರಕೂಡದು.

6. ದರ್ಶನಕ್ಕಾಗಿ ಭಕ್ತರು ಬಾಲಿಕಲ್ಲನ್ನು[1] ಹತ್ತಕೂಡದು.

7. ದೇವರ ಎದುರಿಗೆ ಆಗತಾನೇ ವಿವಾಹ ಮಾಡಿಕೊಂಡ ವಧು-ವರರು ಗರ್ಭಗುಡಿಯನ್ನು ಪ್ರವೇಶಿಸಬಾರದು.

8. ದೇವಾಲಯದೊಳಗೆ ಯಾರೂ ಉಗಿಯಬಾರದು.

9. ಗರ್ಭ ಗುಡಿಯಲ್ಲಿ ಹಸುಗೂಸುಗಳನ್ನು ಬಹಳ ಹೊತ್ತಿನವರೆಗೆ

---

1. ಭಗವಂತನ ದಿವ್ಯ ಸೇವಕ - ದೇವಾಲಯದ ರಕ್ಷಕ 'ಕ್ಷೇತ್ರಪಾಲಕ'

ತರಕೂಡದು ಏಕೆಂದರೆ ಅವು ಮೂತ್ರ ವಿಸರ್ಜನೆ ಇತ್ಯಾದಿ ಗೈದು ದೇವಾಲಯುವನ್ನು ಅಪವಿತ್ರಗೊಳಿಸಬಹುದು. ಹೀಗಾದಲ್ಲಿ ದೇವಾಲಯುವನ್ನು ಶುದ್ಧೀಗೊಳಿಸಲು ತಗಲುವ ವೆಚ್ಚವನ್ನು ಕೂಸಿನ ತಂದೆ ತಾಯಿ/ಹಿರಿಯುರಿಂದ ವಸೂಲಿ ಮಾಡಲಾಗುವುದು.

10. ಪೂರ್ವ ಗೋಪುರದಲ್ಲಿಯ ದೇವಸ್ಥಾನದ ಕಚೇರಿಯಿಂದ ಪೂಜೆಗೆ ಸಂಬಂಧಿಸಿದ ಎಲ್ಲಾ ಮಾಹಿತಿಯೂ ದೊರೆಯುತ್ತದೆ.

11. ಎಲ್ಲ ಪೂಜೆಗಳನ್ನು ಬುಕ್ ಮಾಡಬಹುದು, ದೇವಾಲಯುದೊಳಗಿನ ಕಚೇರಿಯಿಂದ ರಸೀದಿಗಳನ್ನು ಪಡೆಯುಬೇಕು. ಪೂಜೆಗಳನ್ನು ಬುಕಿಂಗ್ ಕೌಂಟರಿನಿಂದಲೇ ಮಾಡಿಸತಕ್ಕದ್ದು.

12. ಬಡವರಿಗೆ ನೈವೇದ್ಯ ಇತ್ಯಾದಿ ರೂಪದಲ್ಲಿ ಸಹಾಯ ಸೇವೆ ಸಲ್ಲಿಸಲು ಇಚ್ಛಿಸುವ ಭಕ್ತರು, ಬುಕಿಂಗ್ ಕೌಂಟರಿನ ಎದುರಿಗೆ ಈ ಉದ್ದೇಶಕ್ಕಾಗಿ ಇಟ್ಟ ಪೆಟ್ಟಿಗೆಯಲ್ಲಿ ರಸೀದಿಗಳನ್ನು ಹಾಕಬೇಕು.

13. ಪೂಜೆ ಮಾಡಿಸಲು ಭಕ್ತರಿಗೆ ಬೇಕಾಗುವ ಎಲ್ಲಾ ಸಣ್ಣ ಪ್ರತಿಮೆ ದೇವಾಲಯುದೊಳಗೇ ದೊರೆಯುತ್ತವೆ. ಮಂಟಪದ ಬಳಿಯಲ್ಲಿ ಸಮವಸ್ತ್ರದಲ್ಲಿರುವ ದೇವಾಲಯುದ ನೌಕರರು ಅವಶ್ಯವಾದ ವಿಗ್ರಹಗಳನ್ನು ಕೊಡುವರು ಇದಕ್ಕಾಗಿ ನಿಗದಿ ಮಾಡಿದ ಹಣವನ್ನು, ತ್ರಿಪಾದದ ಮೇಲೆ ವಿಗ್ರಹಗಳನ್ನು ಇಟ್ಟ ನಂತರ, ಹುಂಡಿಯಲ್ಲಿ ಹಾಕಬೇಕು. ದೇವಾಲಯುದ ಹೊರಗೆ ವಿಗ್ರಹಗಳನ್ನು ಪಡೆಯುಕೂಡದು, ಏಕೆಂದರೆ ಅವು ಅಪ್ಪಟವಾದವುಗಳಲ್ಲ.

14. ಉದಯಾಸ್ತಮಾನ ಪೂಜೆ, ನಮಸ್ಕಾರ, ಕೃಷ್ಣಾಟ್ಟಂ ಇತ್ಯಾದಿಗಳ ಸೇವೆಗಳನ್ನು, ಸಾಕಷ್ಟು ಮುಂದಾಗಿಯೇ ಬುಕ್ ಮಾಡಿಸಬೇಕು.

15. ಸ್ವಾಮಿಗೆ ಅರ್ಪಿಸಲು ಆಭರಣ ಮತ್ತು ಇಂತಹದೇ ಅಮೂಲ್ಯಗಳನ್ನು ತಂದ ಭಕ್ತಾದಿಗಳು ಭಗವಂತನಿಗೇ ಅವು ಸಂದಾಯುವಾಗುವಂತೆ ಯೋಗ್ಯ ರಸೀದಿಗಳನ್ನು ಪಡೆಯುತಕ್ಕದ್ದು.

16. ಭಗವಾನ್ ಗುರುವಾಯೂರಪ್ಪನನ್ನು ಪೂರ್ತಿ ಮನಸಾ ನೆನೆ

ಯುತ್ತ ದೇವಾಲಯವನ್ನು ಪ್ರವೇಶಿಸಿ. ಇತರ ಭಕ್ತಾದಿಗಳ ಮಾನಸಿಕ ಶಾಂತಿಯು ತಮ್ಮ ಮಾತು ಅಥವಾ ಇತರ ಕಾರ್ಯದಿಂದ ಕೆಡದಂತೆ ಎಲ್ಲರೂ ನಡೆದುಕೊಳ್ಳಬೇಕು.

ಭಕ್ತಾದಿಗಳ ಮಾರ್ಗದರ್ಶನಕ್ಕಾಗಿ, ಇಲ್ಲಿ ಸಾಮಾನ್ಯ ನಿಯಮಗಳನ್ನು ಕೊಟ್ಟಿದೆ. ಮಾನಸಿಕ ಶಾಂತಿ ಮತ್ತು ಭಕ್ತಿ ಮಾನವನ ಬಾಹ್ಯ ಪ್ರಪಂಚದಿಂದ ಅಲ್ಲ. ತನ್ನ ಅಂತಃರಂಗದೊಳಗೆ ಉಂಟಾಗುವಂಥವುಗಳೆಂಬುದನ್ನು ಸರ್ವರೂ ಜ್ಞಾಪಕದಲ್ಲಿಡಿ. ಈ ನಿಯಮಗಳ ಪಾಲನೆಯು ಒಳಗೂ ಮತ್ತು ಹೊರಗೂ ಇರುವ ವಾತಾವರಣವನ್ನು ಶುದ್ಧಿಗೊಳಿಸುತ್ತದೆ. ಕಾರಣ ಭಕ್ತಾದಿಗಳು ಹರುಷಿತ ಮನದಿಂದ, ತಮ್ಮ ಆತ್ಮಕ್ಕೆ ಮೆರಗು ಪಡೆದು, ಗುರುವಾಯೂರನ್ನು ಬಿಟ್ಟು ತೆರಳಬಹುದು.

ಪ್ರಕರಣ 2

ಗುರುವಾಯೂರಿನ ಮಹಾತ್ಮೆ

ಪುರಾತನ ಮತ್ತು ಚಾರಿತ್ರಿಕವಾಗಿ ಐತಿಹಾಸಿಕವಾಗಿರುವುದರಿಂದ ಕಾಶಿಯಲ್ಲಿರುವಂತೆ ಕೆಲವು ದೇವಾಲಯಗಳು ಪ್ರಸಿದ್ಧಿ ಪಡೆಯುತ್ತವೆ. ಕೆಲವು ದೇವಸ್ಥಾನಗಳ ಮಹಾತ್ಮೆಯು[1] ಭೌಗೋಳಿಕ ಮತ್ತು ಸ್ಥಾನದ ಮಹತ್ವದಿಂದ ಆಗಿರುತ್ತದೆ. ಇನ್ನು ಕೆಲವು ಕೊನಾರ್ಕ ಮತ್ತು ಖಜುರಾಹೋದಲ್ಲಿರುವಂತೆ ಅಮೂಲ್ಯವಾದ ಮತ್ತು ಸೌಂದರ್ಯಮಯ ಶಿಲ್ಪ ಕಲೆಗಾಗಿ ಪ್ರಸಿದ್ಧಿ ಪಡೆಯುತ್ತವೆ. ಇನ್ನು ಕೆಲವು ಪ್ರತಿಸ್ಥಾಪನೆಯಿಂದ[2] ಮಹತ್ವ ಪಡೆದಿರುತ್ತವೆ.

ಆದರೆ ಗುರುವಾಯೂರು ಇವೆಲ್ಲಕ್ಕಿಂತ ಭಿನ್ನವಾಗಿದೆ. ಗುರುವಾಯೂರು ತನ್ನ ಮಹಾತ್ಮೆಯನ್ನು, ಸ್ಥಾನದ ಪವಿತ್ರತೆಯಿಂದ, ವಿಗ್ರಹ ಮತ್ತು ವಿಗ್ರಹ ಸ್ಥಾಪನೆಯಿಂದಲೂ ಪಡೆದಿದೆ.

ಸ್ಥಾನದ ಮಹಾತ್ಮೆ

ರುದ್ರತೀರ್ಥದಲ್ಲಿ[3] ಸಹಸ್ರಾರು ವರ್ಷಗಳವರೆಗೆ ನಡೆದ ತಪಸ್ಸಿನಿಂದ ಗುರುವಾಯೂರು ಪವಿತ್ರತೆ ಪಡೆದಿದೆ. ಈಗ ಇದು ರುದ್ರತೀರ್ಥವು ಗುರುವಾಯೂರಪ್ಪನ ಅರಕ್ಕುಲಮ್[4] ಆಗಿದೆ. ಶಿವ ಮತ್ತು ಪ್ರಚೇತರು[5] ಇಲ್ಲಿ ತಪಸ್ಸುಗೈದರು. ರುದ್ರತೀರ್ಥದ ನೀರಿನ ಅಡಿಯಲ್ಲಿ ಶಿವನು ಮಹಾವಿಷ್ಣುವಿ

---

1. ವೈಭವ
2. ಸ್ಥಾಪನೆ : ಪೂಜಾಮೂರ್ತಿಯನ್ನು ಸ್ಥಾಪಿಸುವ ಕಾರ್ಯ ಮತ್ತು ಸ್ಥಾಪನೆ
3. ರುದ್ರತೀರ್ಥವು ದೇವಾಲಯದ ಪವಿತ್ರವಾದ ಕೆರೆ
4. ಅರಕ್ಕುಲಮ್ ಹಬ್ಬದ ಕೊನೆಯ ದಿನದಂದು ಸಂಭ್ರಮದಿಂದ ವಿಗ್ರಹವನ್ನು ವಿಸರ್ಜಿಸುವ ಸ್ಥಳ.
5. ಪ್ರಚೇತರು : ಇಂದ್ರನ ಮಕ್ಕಳು

ನನ್ನು ಪೂಜಿಸುತ್ತಿದ್ದನು. ಪ್ರಚೇನ ಭಾರಹೀಯ[1] ತನ್ನ ಮಕ್ಕಳಿಗೆ "ಮುನ್ನಡೆಯಿರಿ ನಂತರ ಮದುವೆ ಮಾಡಿಕೊಳ್ಳಿ" ಆದೇಶಿಸಲು ಅವರು—ಎಂದು ಪ್ರಚೇತರು ಇಲ್ಲಿಗೆ ಬಂದರು. ಪ್ರಚೇತರ ಉದ್ದಿಶ್ಯವನ್ನು ತಿಳಿದ ಶಿವನು ರುದ್ರತೀರ್ಥದ ನೀರಿನ ಆಳದಿಂದ ಮೇಲೆದ್ದು ಬಂದು ಮಹಾವಿಷ್ಣುವಿನ ಸ್ತುತಿಯಾದ ರುದ್ರ ಗೀತೆಯನ್ನು ಬೋಧಿಸಿದನು. "ಮಹಾವಿಷ್ಣುವಿನನ್ನು ನೀವು ಪೂಜಿಸಿ, ರುದ್ರ ಗೀತೆಯನ್ನು ಪುನರುಚ್ಚರಿಸಿ" ಎಂದು ಶಿವನು ಹೇಳಿ ತಪಸ್ಸು ಮಾಡಲು ತೀರ್ಥದಲ್ಲಿ ಮಾಯವಾದನು. ರುದ್ರತೀರ್ಥದಲ್ಲಿ ನಿಂತುಕೊಂಡು ಪ್ರಚೇತರು ಹತ್ತು ಸಾವಿರ ವರ್ಷಗಳವರೆಗೆ ಮಹಾವಿಷ್ಣುವಿನ ತಪಸ್ಸಿನಲ್ಲಿ ನಿಂತರು, ಅಂತ್ಯದಲ್ಲಿ ಮಹಾವಿಷ್ಣು ಪ್ರತ್ಯಕ್ಷನಾಗಿ ಕುಲಪುತ್ರನನ್ನು ದಯಪಾಲಿಸಿ ಆಶೀರ್ವದಿಸಿದನು. ಆತನೇ ದಕ್ಷಪ್ರಜಾಪತಿ.

ಮೂರ್ತಿಯ ಮಹಾತ್ಮೆ

ಸಾಮಾನ್ಯವಾಗಿ ದೇವಾಲಯಗಳ ಮೂರ್ತಿಗಳನ್ನು ಶಿಲೆಗಳಿಂದ ಮಾಡಿರುತ್ತಾರೆ. ಆದರೆ ಗುರುವಾಯೂರಿನ ಮೂರ್ತಿಯು ಅತ್ಯಂತ ಅಪರೂಪದ "ಪಠಲಾಂಜನ ಶಿಲೆ" ಯಿಂದ ಮಾಡಲ್ಪಟ್ಟಿದೆ, ಆದ್ದರಿಂದ ಅತ್ಯಂತ ಪವಿತ್ರದ್ದಾಗಿದೆ. ಈ ಶ್ರೀಕೃಷ್ಣನ ವಿಗ್ರಹವನ್ನು ಸ್ವತಃ ವಿಷ್ಣು ವೈಕುಂಠದಲ್ಲಿ[2] ಪೂಜಿಸುತ್ತಿದ್ದನು. ನಂತರ ಬ್ರಹ್ಮನಿಗೆ ಕೊಟ್ಟನು ಬ್ರಹ್ಮನು ಸೂತಮಹಾಮುನಿಗಳಿಗೆ, ಅವರು ಕಶ್ಯಪ ಪ್ರಜಾಪತಿಗೆ ಕೊಟ್ಟರು. ಕಶ್ಯಪರು ಶ್ರೀಕೃಷ್ಣನ ತಂದೆಯಾದ ವಾಸುದೇವನಿಗೆ, ಹೀಗಾಗಿ ಶ್ರೀಕೃಷ್ಣನಿಗೇ ವಾಪಸ್ಸಾಯಿತು. ಕೃಷ್ಣನು ಅದನ್ನು ದ್ವಾರಕೆಯಲ್ಲಿಟ್ಟು[3] ಪೂಜಿಸಿದನು. ಸ್ವರ್ಗಾರೋಹಣದ ತನ್ನ ಕಾಲದಲ್ಲಿ ದೇವರ ಗುರುವಾದ ಬೃಹಸ್ಪತಿಯು ಇದನ್ನು ಪಡೆಯತಕ್ಕದ್ದೆಂದು ಉದ್ಧವನಿಗೆ ನಿರ್ದೇಶಿಸಿದನು—ದ್ವಾರಕೆಯು ನೀರಿನಲ್ಲಿ ಮುಳುಗಿದಾಗ್ಗೆ ಮೂರ್ತಿಯನ್ನು ಯೋಗ್ಯವಾದ ಸ್ಥಳದಲ್ಲಿ ಸ್ಥಾಪಿಸಬೇಕು, ಕಲಿಯುಗದಲ್ಲಿ ಜನತೆ ಪೂಜಿಸಿ, ಮೋಕ್ಷ ಪಡೆಯಲಿ ಎಂದು ಹೇಳಿದನು.

---

1. ಇಂದ್ರ
2. ವೈಕುಂಠ : ಮಹಾವಿಷ್ಣುವಿನ ವಾಸ ಸ್ಥಾನ
3. ದ್ವಾರಕೆ : ಶ್ರೀಕೃಷ್ಣನ ಸ್ಥಾನ

ಪ್ರತಿಸ್ಥಾಪನೆಯ ಮಹಾತ್ಮೆ

ಬೃಹಸ್ಪತಿಯು ವಾಯುದೇವರನ್ನೊಳಗೊಂಡು[1] ಅತ್ಯಂತ ಪವಿತ್ರವಾದ ಮತ್ತು ಯೋಗ್ಯ ಸ್ಥಳದ ಅನ್ವೇಷಣೆಗಾಗಿ ಪ್ರಪಂಚವನ್ನೆಲ್ಲ ಸುತ್ತಿದ ಪರಶುರಾಮರ ಆಹ್ವಾನದಂತೆ ಅವರು ಕೇರಳಕ್ಕೆ ಬಂದರು. ಶಿವನು ತಪಸ್ಸು ಮಾಡುತ್ತಿದ್ದ ರುದ್ರತೀರ್ಥವನ್ನು ತಲುಪಿದರು. ಆಗ್ಗೆ ಗುರು ಮತ್ತು ವಾಯುವಿನ ಉದ್ದಿಶ್ಯವನ್ನು ತಿಳಿದು, ನೀರಿನಿಂದ ಮೇಲಕ್ಕೆದ್ದು ಬಂದು ಅವರನ್ನು ಆದರಿಸಿ ಹೀಗೆ ಹೇಳಿದ, "ನೀವು ಹುಡುಕುತ್ತಿರುವ ಅತ್ಯಂತ ಪವಿತ್ರವಾದ ಸ್ಥಳವೇ ಇದು. ಅನೇಕ ಯುಗಗಳವರೆಗೆ ನಾನಿಲ್ಲಿ ತಪಸ್ಸುಗೈದಿದ್ದೇನೆ. ಪ್ರಚೇತರು ತಪಸ್ಸುಗೈದ ಸ್ಥಳವೂ ಇದೇ. ಅವರಿಗೆ ನಾನು ರುದ್ರಗೀತೆಯನ್ನು ಉಪದೇಶಿಸಿದ್ದು ಇಲ್ಲಿಯೇ. ಸ್ವತಃ ನಾರಾಯಣನಿಂದ ಪೂಜಿಸಲ್ಪಟ್ಟ ನಾರಾಯಣನ ವಿಗ್ರಹಕ್ಕಾಗಿಯೇ ಅನೇಕ ವರ್ಷಗಳಿಂದ ಕಾಯ್ದುಕೊಂಡಿರುವ ಸ್ಥಳವೇ ಇದು. ಕಾರಣ ನಾನು ಅತ್ಯಂತ ಆನಂದದಿಂದ ಈ ಸ್ಥಳವನ್ನು ಬಿಟ್ಟು, ಪಾರ್ವತಿಯೊಡನೆ ಆ ಬದಿಯ ಮಮ್ಮಿಯೂರಿಯ ಮೇಲೆ ವಾಸಿಸುತ್ತೇನೆ."

ಶಿವನು, ಗುರು ಮತ್ತು ವಾಯುವಿಗೆ ಮೂರ್ತಿ ಪ್ರತಿಷ್ಠಾಪನೆ ಮಾಡಲು ಹೇಳಿದ, ಪರಶುರಾಮರೂ ಹಾಜರಿದ್ದರು. ಮೂರ್ತಿಯನ್ನು ಪೂಜಿಸಿದ ನಂತರ ಅವರನ್ನು ಆಶೀರ್ವದಿಸಿ ಹೀಗೆ ಹೇಳಿದ. "ನೀವು ಅತ್ಯಂತ ಪೂಜಾರ್ಹರು. ಈ ದಿನದಿಂದ ಈ ಸ್ಥಳವನ್ನು ನಿಮ್ಮಿಬ್ಬರ ಹೆಸರಿನಿಂದ 'ಗುರುವಾಯೂರು' ಎಂದು ಕರೆಯಲಿ"

ವಿಗ್ರಹವನ್ನು ಪುನಃ ಪೂಜಿಸಿ, ಗುರು ಮತ್ತು ವಾಯು ಇವರನ್ನು ಹರಿಸಿ ಶಿವನು ಮಮ್ಮಿಯೂರಿಗೆ ಹೊರಟು ಹೋದನು. ಪರಶುರಾಮನು ಪೂಜಿಸಿ ಅಲ್ಲಿಂದ ಹೊರಟರು. ಈ ಕಾರಣಕ್ಕಾಗಿಯೇ ಗುರುವಾಯೂರಿನ ಪೂಜೆಯು ಮುಮ್ಮಿಯೂರ ಶಿವನ ಪೂಜೆಯು ನಂತರವೇ ಪೂರ್ತಿಯಾಗುತ್ತದೆ.

ಮೂರ್ತಿ ಪ್ರತಿಷ್ಠಾಪನೆಯು ಕುಂಭ[2] ಮಾಸದಲ್ಲಿ ಜರುಗಿತು. ಧಾರ್ಮಿಕ

---

1. ವಾಯು : ಗಾಳಿಯ ಒಡೆಯ, ವಾಯುದೇವ
2. ಕುಂಭ : ಫೆಬ್ರವರಿ – ಮಾರ್ಚಿ

ಕ್ರಿಯೆಗಳು ಪುಷ್ಯದಿಂದ[1] ಆರಂಭಗೊಂಡು ಅನುರಾಧದಂದು[2] ಕೊನೆಗೊಂಡವು. ಪ್ರತಿಷ್ಠಾಪನೆ ಮುಗಿದ ಬಳಿಕ ಗುರು ಮತ್ತು ವಾಯು ದೇವತೆಗಳ ಶಿಲ್ಪಿಯಾದ ವಿಶ್ವಕರ್ಮನನ್ನು[3] ದೇವಾಲಯ ಕಟ್ಟಲು ಆಹ್ವಾನಿಸಿದರು. ಸೂರ್ಯನು ವಿಷ್ಣು ದಿನದಂದು ತನ್ನ ಕಿರಣಾವಳಿಗಳಿಂದ **ಭಗವಂತನ** ಪಾದ ಮುಟ್ಟುವಂತೆ ದೇವಾಲಯವನ್ನು ರೂಪಿಸಿ ರಚಿಸಿದನು.

ವೈಕುಂಠದಲ್ಲಿ ಸ್ವತಃ ಮಹಾವಿಷ್ಣುವಿನಿಂದಲೇ ಪೂಜಿಸಲ್ಪಡುತ್ತಿದ್ದ ವಿಗ್ರಹವು ತನ್ನ ಎಲ್ಲ ಚೈತನ್ಯದೊಂದಿಗೆ ಈಗ ಇಲ್ಲಿದೆ. ಗುರುವಾಯೂರು "ಭೂಲೋಕ ವೈಕುಂಠ" ಭೂಮಿಯ ಮೇಲಿರುವ ಸ್ವರ್ಗಗಳ ಸ್ವರ್ಗ !

---

1. ಪುಷ್ಯ : ಎಂಟನೆಯ ಚಂದ್ರಮಾಸ
2. ಅನುರಾಧ : ಹದಿನೇಳನೆಯ ನಕ್ಷತ್ರ
3. ವಿಶ್ವಕರ್ಮ: ದೇವಶಿಲ್ಪಿ

ಪ್ರಕರಣ 3

ಬ್ರಹ್ಮ ಚೈತನ್ಯ

ದಿವ್ಯ ಕಿಶೋರ ರೂಪ[1]

ಗರ್ಭಗುಡಿಯ ಬಾಗಿಲು ತೆರೆದಿದೆ. ಭಕ್ತ ಸಾಕ್ಷಾತ್ **ವೈಕುಂಠದಲ್ಲಿಯೇ** ಇದ್ದಾನೆ! ಈ ಅರ್ಥದ ಮೊದಲ ಪಂಕ್ತಿಗಳನ್ನು '**ಅಗ್ರೇಪಶ್ಯಾಮಿ**'[2] ಎಂಬುದಾಗಿ ಮೆಲ್ಪಥುರ್ ತಮ್ಮ ಕಾವ್ಯ "ನಾರಾಯಣೀಯಮ್"ದಲ್ಲಿ ಹಾಡಿದ್ದಾರೆ. ನಿಷ್ಕಪಟ ಅದೇ ದೈವಿಕ ಶಿಶುವನ್ನು 'ದಿವ್ಯ ಕಿಶೋರ ವೇಷ'ದಲ್ಲಿ ತಮ್ಮೆದುರು "**ಪಿಯೂಶ**" ದಲ್ಲಿ ಮುಳುಗಿದ ಅನುಭವವನ್ನು ಅನುಭವಿಸುತ್ತಿದ್ದಾರೆ. ಪಿಯೂಶ ಅಂದರೆ ಅಮೃತ ಅಂದರೆ ಗರ್ಭಗುಡಿಯಲ್ಲಿ ನಿಂತಾಗ ಅಮೃತವೆಂದರೆ ಮರಣವಿಲ್ಲದ್ದೆಂದರ್ಥ ಆ ಅನುಭವವನ್ನು ಭಕ್ತನು ಪಡೆಯುತ್ತಾನೆ. ಕೇಂದ್ರದಲ್ಲಿ ದಿವ್ಯ ಚೈತನ್ಯವು ರಾರಾಜಿಸುತ್ತ, ಎಲ್ಲವನ್ನೂ ತನ್ನತ್ತ ಆಕರ್ಷಿಸುತ್ತದೆ! ಚಿಕ್ಕ, ದೊಡ್ಡ, ಹೆಚ್ಚು ಕಡಿಮೆಯೆಂಬ ಯಾವ ಬೇಧ ಭಾವವಿಲ್ಲದೆ ಸರ್ವರೂ ಈ ಚೈತನ್ಯದ ಮುಂದೆ ಮುಗ್ಧರಾಗಿ ಅತ್ಯಂತ ವಿನೀತರಾಗಿ ನಿಲ್ಲುತ್ತಾರೆ. ಹೆಣ್ಣು, ಗಂಡು, ಮುದುಕ ತರುಣ ಹೀಗೆ ಎಲ್ಲರೂ ದರ್ಶನಾಪೇಕ್ಷೆಯಿಂದ ದಿವ್ಯ ಕಿಶೋರನನ್ನು ಕಾಣಲು ಹಾತೊರೆಯುತ್ತಾರೆ.

ಸರಿಸಾಟಿಯಿಲ್ಲದ ಈ ಬ್ರಹ್ಮ ಚೈತನ್ಯವು ಬಾಲಕೃಷ್ಣನ ರೂಪದ ಗ್ರಹಿಕೆಯ ಫಲವಾಗಿದೆ. ನಮ್ರ ಭಕ್ತಿಯಿಂದ ಕೂಡಿದ ಭಕ್ತನಲ್ಲಿ ಮಾತ್ರ

---

1. ದಿವ್ಯ ದೇವನ ಬಾಲಕ ರೂಪ
2. ಎದುರಿಗೆ ಕಾಣುತ್ತಿದ್ದೇನೆ

अग्रेपश्यामि ನಾರಾಯಣೀಯಮ್ ದಶಕ 100, ಶ್ಲೋಕ 1.

ಪಿತೃವಿನ ವಾತ್ಸಲ್ಯದ ಭಾವನೆ ಉಕ್ಕುತ್ತದೆ ! ಈ ಗ್ರಹಿಕೆಯ ಹಿಂದಿರುವ ಮಾನಸಿಕ ಭಾವನೆ ಏನೆಂದರೆ ಅಮಾಯಕತೆಯೇ ಸ್ವತಃ ದೇವರು, ಮಗುವಿನ ನಿರ್ಮಲ ಮತ್ತು ಮುಗ್ಧ ಭಾವ ಎಲ್ಲೆಲ್ಲೂ ದುಷ್ಟ ಮನೋಭಾವನೆಯನ್ನು ಹೊಡೆದೋಡಿಸುತ್ತದೆ.

ವೈಯಕ್ತಿಕ ಸ್ವಚ್ಛತೆ

ದೇವರ ಸಾಕ್ಷಾತ್ಕಾರ ಶರೀರದಲ್ಲಷ್ಟೇ ಅಲ್ಲದೆ ಮನವನ್ನೂ ನಿರ್ಮಲ ಗೊಳಿಸಿದವರಿಗೆ ಮಾತ್ರ ಸಾಧ್ಯವಾಗುತ್ತದೆ. ದೇವಾಲಯವನ್ನು ಸಂದರ್ಶಿಸು ವಲ್ಲಿ ಶಾಸ್ತ್ರಗಳು[1] ಕೆಲವು ನಿಯಮಗಳನ್ನು ರೂಪಿಸಿವೆ. ಇಂಥ ಎಲ್ಲಾ ನಿಯಮ ಗಳನ್ನು ಗುರುವಾಯೂರಿನಲ್ಲಿ ಕಡ್ಡಾಯವಾಗಿ ಪಾಲಿಸಲಾಗುವುದು. ರುದ್ರ ತೀರ್ಥದಲ್ಲಿ ಸ್ನಾನ ಮಾಡಿದ ನಂತರವೇ ಭಕ್ತರು ದೇವಾಲಯವನ್ನು ಪ್ರವೇಶಿಸ ಬೇಕು. ಪವಿತ್ರ ದರ್ಶನವಾಗುವವರೆಗೂ ಒದ್ದೆ ಬಟ್ಟೆಯಲ್ಲಿಯೇ ಇರುವುದು. ವಿಹಿತ, ಯಾರೇ ಆಗಲಿ ಶರ್ಟುಗಳನ್ನು, ಪ್ಯಾಂಟುಗಳನ್ನು ಅಥವಾ ಚಪ್ಪಲಿ ಗಳನ್ನು ಧರಿಸಕೂಡದು. ಮನಸ್ಸು ಕಲ್ಮಶ ಅಥವಾ ಪೂರ್ವಾಗ್ರಹವಾದುದಲ್ಲ. ನಿರ್ಮಲತೆಯೇ ದೇವತ್ವವಿದ್ದಂತೆ, ಭಗವಂತನ ಸಾಕ್ಷಾತ್ಕಾರವನ್ನು ಇಂಥ ನಿರ್ಮಲ ಹೃದಯದಿಂದಲೇ ಪಡೆಯಬಹುದು. ನಿಷ್ಕಳಂಕ ಮತ್ತು ಶುದ್ಧ ವಾದ ಕನ್ನಡಿಯಲ್ಲಿ ತಾನೇ ಅಚ್ಚುಕಟ್ಟಾದ ಪ್ರತಿಬಿಂಬ ತೋರಿಬರುವುದು ?

ಅರ್ಚಕರ ಬ್ರಹ್ಮಚರ್ಯ

ಹಿಂದು ಶಾಸ್ತ್ರಗಳ ಅಭಿಮತದಂತೆ ಆಧ್ಯಾತ್ಮಿಕ ಜೀವನಕ್ಕೆ ಕಠಿಣ ವಾದ ಬ್ರಹ್ಮಚರ್ಯವನ್ನು ಆಚರಿಸಬೇಕಾಗಿದೆ, ಲೈಂಗಿಕತೆಯು ಆಧಾತ್ಮಿಕ ಜೀವನದ ಮರಣವೇ ಸರಿ. ಇತರ ದೇವಾಲಯಗಳಲ್ಲಿಯಂತೆ. ಗುರು ವಾಯೂರು ದೇವಾಲಯದಲ್ಲಿಯೂ ಅರ್ಚಕರು[1] ತಮ್ಮ ಅವಧಿಯಲ್ಲಿ ಪೂರ್ಣ ಬ್ರಹ್ಮಚರ್ಯವನ್ನು ಪಾಲಿಸಬೇಕಾಗಿದೆ. ಇದನ್ನು ನಡಿಸಿಕೊಳ್ಳುವುದಕ್ಕಾಗಿ

---

1. ಅರ್ಚಕ : ದೇವಾಲಯದಲ್ಲಿಯ ಪೂಜಾರಿ
ಶಾಸ್ತ್ರಗಳು : ವೇದದ ಆಧಾರದ ತತ್ತ್ವಗಳು

ಒಂದು ಬಾರಿಗೆ ಮುಖ್ಯ ಅರ್ಚಕನನ್ನು ಆರು ತಿಂಗಳ ಅವಧಿಗೆ ಮಾತ್ರ ನಿಯಮಿಸಲಾಗುತ್ತದೆ, ದೇವಾಲಯದ ಆವರಣ ಬಿಟ್ಟು ಆತನು ಕದಲ ಕೂಡದೆಂದು ನಿರೀಕ್ಷಿಸಲಾಗಿದೆ. ಸಾಮಾನ್ಯವಾಗಿ ಅವಧಿಯನ್ನು ವಿಸ್ತರಿಸಲಾಗುವುದಿಲ್ಲ, ಒಂದಿಷ್ಟು ದಿನಗಳೆದ ನಂತರ ಪುನಃ ಸೇವೆಗಾಗಿ ನಿಯಮಿಸಬಹುದು.

ನಿತ್ಯೋತ್ಸವ[1]

ಗುರುವಾಯೂರು, ನಿತ್ಯೋತ್ಸವದ ಪವಿತ್ರ ಕ್ಷೇತ್ರವೆಂದು ವರ್ಣಿಸಲ್ಪಟ್ಟಿದೆ. ನಿತ್ಯದ ಅರ್ಚನೆಗಳು ಅಷ್ಟು ವೈವಿದ್ಯಮಯ ಮತ್ತು ಸವಿಸ್ತಾರವಾದವುಗಳು. ಯಾತ್ರಿಕರು[2] ಅರ್ಚನೆಯಲ್ಲಿ ನೇರವಾಗಿ ಭಾಗವಹಿಸುವುದಿಲ್ಲ. ಮೂರ್ತಿಯ ಮೇಲಾಗಲಿ ಪಾದದಡಿಯಲ್ಲಿ ಆಗಲಿ ಹೂಗಳನ್ನು ಅರ್ಪಿಸಲಾರರು. ಕೇರಳದ ಎಲ್ಲಾ ದೇವಾಲಯಗಳಲ್ಲಿ ಅರ್ಚಕರಿಂದಲೇ ಪೂಜೆಗಳು ನಡೆಯುತ್ತವೆ. ತಂತ್ರಿಯು[3] ಎಲ್ಲಾ ನಮೂನೆಯ ಪೂಜೆಗಳ ನಿರ್ದೇಶಕನು, ಆತನು ಮುಖ್ಯ ಅರ್ಚಕ ಮತ್ತು ಕಲಿಸುವ ಬ್ರಾಹ್ಮಣರಿಗೆ ಉಪದೇಶಿಸುತ್ತಾನೆ. ಇಲ್ಲಿ ಎಲ್ಲಾ ಪೂಜೆಗಳು ನಾಲ್ವರು ಓತಿಕನ್ಸ[4] ಒಬ್ಬ ಮುಖ್ಯ ಅರ್ಚಕ, ಮತ್ತು ಒಬ್ಬ ತಂತ್ರಿಯವರಿಂದ ನಡೆಯುತ್ತವೆ. ಕೆಜಾಸಾಂಟಿಸ್—ಉಪ ಅರ್ಚಕರು ಮೂಲ ವಿಗ್ರಹವನ್ನೂ ಕೂಡ ಮುಟ್ಟುವಂತಿಲ್ಲ.

ದೇವಾಲಯವು ಬೆಳಗಿನ 3 ಗಂಟೆಗೆ ತೆರೆದು ರಾತ್ರಿ 9-15ಕ್ಕೆ ಮುಚ್ಚುತ್ತದೆ. ಮದ್ಯದಲ್ಲಿ ಪೂಜಾರಿಗಳಿಗೆ ಮತ್ತು ಇತರರಿಗೆ ವಿಶ್ರಾಂತಿಗಾಗಿ ಒಂದಿಷ್ಟು ಕಾಲಮುಚ್ಚಿರುತ್ತದೆ. ಸಾಮಾನ್ಯ ದಿನಗಳಲ್ಲಿ ಕೇವಲ ಐದು ಪೂಜೆಗಳಿರುತ್ತವೆ. ಕೆಲವು ದಿನಗಳಲ್ಲಿ ದೇವಾಲಯ ಮಧ್ಯರಾತ್ರಿಗೆ ಮುಚ್ಚುತ್ತದೆ.

ಸಾಮಾನ್ಯ ದಿನಗಳಲ್ಲಿಯ ಪೂಜಾ ವಿಧಾನವು ಕೆಳಗಿನಂತಿದೆ :

1 ಬೆಳಿಗ್ಗೆ 3 ಗಂಟೆಗೆ ದೇವಾಲಯವು ತೆರೆಯುತ್ತದೆ. ನಿರ್ಮಲದರ್ಶನ

---

1. ನಿತ್ಯೋತ್ಸವ : ಪ್ರತಿದಿನದ ಪೂಜೆ
2. ಯಾತ್ರಿಕರು : ದೇವಾಲಯಕ್ಕೆ ಬರುವ ಭಕ್ತ. ಕೆಜಾಸಾಂತಿಸ್ : ಉಪ ಅರ್ಚಕರು
3. ತಂತ್ರಿ : ತಂತ್ರಗಳಲ್ಲಿರುವ ಪರಿಣಿತ.
4. ಓತಿಕನ್ಸ : ಕಲಿಸುವ ಬ್ರಾಹ್ಮಣರು.

2 ಎಣ್ಣೆ ಅಭಿಷೇಕ, ವಕಚರ್ತು ಮತ್ತು ಶಂಖಾಭಿಷೇಕ(ಶಂಖುವಿನಿಂದ ಅಭಿಷೇಕ) ಮತ್ತು ಮಾಲಾರ ನೈವೇದ್ಯ.

3 ಉಷಾ ಪೂಜೆ

4 ಸೂರ್ಯೋದಯ ಪೂಜೆ-ಸರಿಯಾಗಿ ಸೂರ್ಯೋದಯಕ್ಕೆ

5 ಶೀವೆಲಿ

6 ಪಂಚಾಮೃತ ಪೂಜಾ (ಹಾಲು, ನವಕಮ್‌ದಿಂದ ಅಭಿಷೇಕ)

7 ಮಧ್ಯಾಹ್ನ ಪೂಜಾ (ಈ ಪೂಜೆಯು ನಂತರ ದೇವಾಲಯವು ಸುಮಾರು 12-30ಕ್ಕೆ ಮುಚ್ಚುತ್ತದೆ.)

8 ಸುಮಾರು 4-45 ಕ್ಕೆ ತೆರೆಯುತ್ತದೆ ಮತ್ತು ಮಧ್ಯಾಹ್ನದ ಶೀವೆಲಿ

9 ಸೂರ್ಯಾಸ್ತಕ್ಕೆ ದೀಪಾರಾಧನೆ

10 ಅಥಜ ಪೂಜೆ-ಸಾಯಂಕಾಲದ ಪೂಜೆ

11 ಶೀವೆಲಿ ತ್ರಿಪ್ಪುಕ ಮತ್ತು '**ಓಲಾಯನ**' (ಲೆಕ್ಕಾಧಿಕಾರಿಯು ದೇವರ ಮುಂದೆ ದಿನದ ಲೆಕ್ಕವನ್ನು ಓದುತ್ತಾನೆ) ವಿಲಕ್ಕು-ದೀಪಾಲಂಕಾರದ ದಿನವಾದರೆ ತಿಪ್ಪುಕವು ದೀಪಾರಾದನೆಯು ನಂತರ ನಡೆಯುತ್ತದೆ. ಗರ್ಭಗುಡಿಯು ಸಾಮಾನ್ಯವಾಗಿ ರಾತ್ರಿ 9-15ಕ್ಕೆ ಮುಚ್ಚುತ್ತದೆ.

[ಅಥಜ ಪೂಜೆಯ ನಂತರ ಗರ್ಭಗುಡಿಯು ಮುಚ್ಚಿದ ನಂತರ ಮಂಗಳ ವಾರವನ್ನು ಹೊರ್ತುಪಡಿಸಿ ಉಳಿದ ದಿನಗಳಲ್ಲಿ ಭಕ್ತಾದಿಗಳ ಕಾಣಿಕೆಯಾಗಿ ಕೃಷ್ಣನಾಟ್ಟಂ ನಡೆಯುತ್ತದೆ.]

ಟಿಪ್ಪಣಿ : ಉದಯಾಸ್ತಮಾನ[1] ಪೂಜೆ, ಅತ್ಯಂತ ಮಹತ್ವದ ಸೇವೆಗಳಲ್ಲಿ ಒಂದು–ಇರುವ ದಿನಗಳಲ್ಲಿ ಬೆಳಗಿನ ಪೂಜೆಗಳಲ್ಲಿ ಉಚಪೂಜೆಯುವರೆಗೆ ಇರುವಂಥವುಗಳ ಕಾಲದಲ್ಲಿ ಅತ್ಯಲ್ಪ ಬದಲಾವಣೆಯಾಗಬಹುದು.

---

1. ಸೂರ್ಯೋದಯದಿಂದ ಸೂರ್ಯಾಸ್ತದವರೆಗೆ ಪೂಜೆ

ನಿರ್ಮಾಲ ದರ್ಶನ

ದರ್ಶನಗಳಲ್ಲಿ ಮೊದಲನೆಯದು ನಿರ್ಮಾಲ ದರ್ಶನ, ಇದು ಬಹಳ ಪವಿತ್ರವಾದುದೆಂದು ಪರಿಗಣಿಸಲಾಗಿದೆ. ಇದು ಹಿಂದಿನ ರಾತ್ರಿ ಭಗವಂತನು ಧರಿಸಿದ ಹೂ, ಪುಷ್ಪಹಾರ ಮತ್ತು ಆಭರಣಗಳೊಂದಿಗೆ ಭಗವಂತನ ದರ್ಶನ ವಾಗಿದೆ. ಅತ್ಯಂತ ಅಮೂಲ್ಯವಾದ ಈ ದರ್ಶನವನ್ನು ಭಕ್ತನು ಕಳೆದುಕೊಳ್ಳ ಲಾರನು.

ವಕಲೇಪನ

ಭಗವಂತನ ದಿನ ವಕಚರ್ತುವಿನೊಂದಿಗೆ ಪ್ರಾರಂಭವಾಗುತ್ತದೆ. ಪವಿತ್ರ ಸ್ನಾನದ ತಯಾರಿಕೆ ಇದು. ಕಳೆದ ದಿನದ ಹೂಗಳನ್ನು ಹಾರಗಳನ್ನು ನಿರ್ಮಾಲ ದರ್ಶನದ ನಂತರ ಕಳಚಲಾಗುತ್ತದೆ. ಮೂರ್ತಿಯ ಮೇಲೆ ಎಣ್ಣೆಯನ್ನು ಎರೆಯಲಾಗುತ್ತದೆ.

ನಂತರ ಕಲೆಹಾಕಿದ ಈ ಎಣ್ಣೆಯು ಅತ್ಯಅಮೂಲ್ಯವಾದುದೆಂದು ಭಾವಿಸ ಲಾಗಿದೆ. ಔಷಧೀಯ ಮತ್ತು ಅಲೌಕಿಕ ಗುಣಗಳನ್ನು ಈ ಎಣ್ಣೆಯು ಹೊಂದು ತ್ತದೆಂದು ನಂಬಲಾಗಿದೆ. ಮೂರ್ತಿಯ ಮೇಲೆ ಉಳಿದಿರುವ ಎಣ್ಣೆಯನ್ನು ವಕ ಪುಡಿಯಿಂದ ಹೋಗಲಾಡಿಸುತ್ತದೆ. ನಂತರ ಶಂಖಾಭಿಷೇಕ ಮತ್ತು ಸ್ವರ್ಣಕಳಸಗಳನ್ನು ಅರ್ಪಿಸಲಾಗುತ್ತದೆ. ಮೂರ್ತಿಯು ಉದಯಿಸುವ ಸೂರ್ಯನಂತೆ ಲಕಲಕನೆ ಹೊಳೆಯುತ್ತದೆ, ಭಕ್ತನಿಗೆ ಭಾವಾವೇಷವಾಗುತ್ತದೆ.

ಪೂಜೆಗಳು

ವಕಚರ್ತು, ಶಂಖಾಭಿಷೇಕ ಮತ್ತು ಸ್ವರ್ಣಕಲಶಗಳ ನಂತರ ಮಾಲಾರ ನೈವೇದ್ಯ ನಡೆಯುತ್ತದೆ. ನಂತರ ಉಷಾಪೂಜೆಯು ನಡೆಯುತ್ತದೆ. ಮೊದಲನೆ ಮತ್ತು ಎರಡನೆ ಪೂಜೆಗಳಿಗಿಂತ ಮೂರನೆಯ, ನಾಲ್ಕನೆಯ ಮತ್ತು ಐದನೆಯ ಪೂಜೆಯು ಮಹತ್ವದ್ದಾಗಿವೆ. ಈ ಪೂಜೆಗಳು ನಡೆದಾಗ್ಗೆ ಗರ್ಭಗುಡಿಯು ಮುಚ್ಚಿರುತ್ತದೆ, ಭಕ್ತಾದಿಗಳು ಹೊರಗೆ ಶಾಂತರಾಗಿ ಮೌನ ಪೂಜೆಯಲ್ಲಿ ನಿರತರಾಗಿರುತ್ತಾರೆ. ಜಯದೇವನ ಗೀತಗೋವಿಂದದ ಅಪೂರ್ವ ಸಂಗೀತದಿಂದ

ಇಡೀ ವಾತಾವರಣವೇ ಸ್ನಿಗ್ಧಮಯವಾಗುತ್ತದೆ. ಪರಿಸರದಲ್ಲಿಯು ದಿವ್ಯ ಚೈತನ್ನವು ಭಕ್ತಾದಿಗಳ ಹೃದಯವನ್ನು ಮೀಟುತ್ತದೆ, ಗರ್ಭಗುಡಿಯು, ಗಂಟೆಗಳು ಬಾರಿಸುತ್ತಿರಲು, ಸುತ್ತಲೂ ಭಗವಂತನ ಕೀರ್ತನೆಗಳು ಜೋರಾಗಿ ಹಾಡುತ್ತಿರಲು ಒಮ್ಮೆಲೇ ತೆರೆಯಲು, ಪ್ರತಿಯೊಬ್ಬನೂ ಪರಮಸುಖರ ಸಾಸ್ವಾರೋಮಾಚ್ಚಿತಾಂಗೆ[1] ಕಂಡುಕೊಳ್ಳುತ್ತಾನೆ, ವರ್ಣಿಸಲು ಸಾಧ್ಯವಿಲ್ಲದ ಅತ್ಯಾನಂದ ಸಾಮ್ರಾಜ್ಯವನ್ನು ತಲುಪುತ್ತಾನೆ.

ಮೂರು ಶೀವೆಲೆಗಳು

ದಿನಕ್ಕೆ ಮೂರು ಬಾರಿ ಸ್ವತಃ ವಿಗ್ರಹದಿಂದ ಭಗವಂತನು ಹೊರ ಬಂದು ತನ್ನ ಸ್ವರ್ಗೀಯ ಸೇವಕರಿಗೆ ಸಲ್ಲಿಸುವ ಸೇವೆಯನ್ನು ನೋಡುತ್ತಾನೆ. ಮೊದಲು ಗರ್ಭಗುಡಿಯ ಸುತ್ತಲೂ ಇರುವ ದೇವ ಸೇವಕರಿಗೆ ಪೂಜೆ ಸಲ್ಲಿಸಲಾಗುತ್ತದೆ. ಮುಖ್ಯ ಅರ್ಚಕ ಹೂಗಳನ್ನು ಮತ್ತು ನೈವೇದ್ಯ ಅರ್ಪಿಸುತ್ತಾ ಮುಂದೆ ಮುಂದೆ ಹೋಗುತ್ತಾನೆ, ಉತ್ಸವ ವಿಗ್ರಹವನ್ನು ಹೊತ್ತ ಉಪ ಅರ್ಚಕನು ಆತನನ್ನು ಹಿಂಬಾಲಿಸುತ್ತಾನೆ. ಅವರು ನಂತರ ಹೊರ ಬಂದು ಪೂರ್ತಿಯಾಗಿ ಶೃಂಗಾರ ಹೊಂದಿದ ಆನೆಯನ್ನು ಉಪ ಅರ್ಚಕನು ಉತ್ಸವ ವಿಗ್ರಹದೊಂದಿಗೆ ಮೇಲೇರುತ್ತಾನೆ. ಸ್ವರ್ಗೀಯ ಸೇವಕರು ಸುತ್ತಲೂ ಇರುವಂಥವರು ಆತನ ಗಮನವನ್ನು ಈಗ ಸೆಳೆಯುತ್ತಾರೆ. ಆನೆಯ ಮೇಲೆ ಭಗವಂತನ ವಿಗ್ರಹ, ಎಡಬಲದಲ್ಲಿ ಆರು ದೀವಿಟಿಗೆಗಳು ತಾಳ. (ಶಹನಾಯಿ) ಹಲಿಗೆಗಳ, ಸಂಗೀತ ಮೇಳದಿಂದ ಮೆರವಣಿಗೆ, ಮುಖ್ಯ ಅರ್ಚಕನು ಅಷ್ಟ ದಿಕ್ಪಾಲಕರಿಗೆ ಪೂಜಿಸುತ್ತಾ ನಡೆಯುತ್ತಾನೆ.

ಕೇರಳದ ಬಹಳಷ್ಟು ದೇವಾಲಯಗಳಲ್ಲಿ ಆನೆಯ ಮೇಲೆ ಉತ್ಸವ ಮೂರ್ತಿಯನ್ನಿಟ್ಟು ಹೊರಡುವ ಮೆರವಣಿಗೆ ವಾರ್ಷಿಕ ಹಬ್ಬಹರಿದಿನಗಳಂದು ಮಾತ್ರ ನಡೆದರೆ, ಇಲ್ಲಿ ಪ್ರತಿನಿತ್ಯದ ಕಾರ್ಯಕ್ರಮವಾಗಿದೆ ಇದು. ಹಬ್ಬ ಹರಿದಿನಗಳೆಂದು ಮೂರು ಅಥವಾ ಐದು ಆನೆಗಳ ವೈಭವಪೂರ್ಣ ಮೆರವಣಿಗೆ ದೀಪಾಲಂಕಾರವೆಲ್ಲ ರಾತ್ರಿಯ ಸೇವೆಗೆ ಸವಿಸ್ತಾರವಾಗಿ ವಿಜೃಂಬಿಸುತ್ತವೆ. ಈ ನೋಟ ಅಸದೃಸ್ಯವಾದುದು.

---

1. **स्वदरोमचिताङ्गैपरमसुखरसा** : ನಾರಾಯಣೀಯಮ್ ದಶಕಂ 100 ಶ್ಲೋಕ

ದೀಪಾರಧನೆ

ರಾತ್ರಿಯಲ್ಲಿ ದೀಪಗಳಿಂದ ಪೂಜಿಸುವುದೇ ದೀಪಾರಾಧನೆ ದೀಪೋತ್ಸವ. ಒಂದು, ಐದು ಮತ್ತು ಏಳು ಸಾಲು-ನಾಗಫನ ಬತ್ತಿಗಳನ್ನು ಹೊತ್ತ ನೀಲಾಂಜನೆಗಳನ್ನು ಭಗವಂತನ ಅಡಿಯಿಂದ ಮುಡಿಯುವರೆಗೆ ಅನೇಕ ಬಾರಿ ಬೆಳಗಲಾಗುತ್ತದೆ. ನಂತರ ಇದೇ ಮಾದರಿಯಲ್ಲಿ ಕರ್ಪೂರದ ಆರತಿಗಳನ್ನು ಬೆಳಗಲಾಗುತ್ತದೆ. ಗರ್ಭಗುಡಿಯುನ್ನು ದೀಪದಿಂದ ಅಲಂಕರಿಸಲು ಇಡೀ ವಾತಾವರಣವು ಮಧುರ ವಾಸನೆಯಿಂದೆ ಆಹ್ಲಾದವನ್ನುಂಟು ಮಾಡುತ್ತದೆ. ದೀಪಾರಧನೆಯಲ್ಲಿ ಭಗವಂತನ ದರ್ಶನವು ವರ್ಣನಾತೀತವಾಗಿದೆ.

ತ್ರಿಪ್ಪುಕ್

ಕಾರ್ಯಕ್ರಮದ ಕೊನೆಯ ಕಾರ್ಯ ತ್ರಿಪ್ಪುಕ್ ಎಂಟು ವಿವಿಧ ಔಷಧೀಯ ಧೂಪ, ಹಾಲುಮಡ್ಡಿ ಇತ್ಯಾದಿಗಳನ್ನು ಉರಿಸಿ, ಬೆಳಗಲಾಗುತ್ತದೆ. ಇದರಿಂದ ಉಂಟಾದ ಧೂಮವು ಇಡೀ ದೇವಾಲಯಗಳಲ್ಲಿಯ ರೋಗಾಣುಗಳನ್ನು ಹೊಡೆದೋಡಿಸುತ್ತದೆ. ಇದನ್ನು ಉಸಿರಾಡಿದವರು ಎಲ್ಲಾ ಕಾಯಿಲೆಗಳಿಗೆ ರಾಹಿತ್ಯ ಹೊಂದುತ್ತಾರೆಂದು ತಿಳಿದು ಬಂದಿದೆ.

ನಾಮಜಪ ಮತ್ತು ಪುರಾಣಪಾರಾಯಣ

ಕೀರ್ತನ ಸ್ಥಳಗಳಲ್ಲಿ ಎಲ್ಲಾ ದಿನಗಳಲ್ಲೂ '**ನಾಮಜಪ**' ಇರುತ್ತದೆ ಪೂಜೆಗಳ ಮಧ್ಯದಲ್ಲಿ ಅವಕಾಶ ದೊರೆಯಲು, ಯಾತ್ರಿಕರು **ನಾಮಜಪ**ದಲ್ಲಿ ಭಾಗವಹಿಸುತ್ತಾರೆ. **ನಾಮಜಪ**ವನ್ನು ಪೂತನವ್ ಮತ್ತು ಕುರೂರಮ್ಮ ಜನಪ್ರಿಯಗೊಳಿಸಿದರು. ಮಧ್ಯಾಹ್ನ ಬಿಡುವಿನ ವೇಳೆಯಲ್ಲಿ ಯಾತ್ರಿಕರು **ಪುರಾಣಪಾರಾಯಣ**ವನ್ನು ಕೇಳಲು ಒಂದೆಡೆ ಸೇರತ್ತಾರೆ. ಇದನ್ನು ಜನಪ್ರಿಯಗೊಳಿಸಿದವರು ಕುಂಜಿಕ್ಕವು ನಂಬೂದಿರಿ, ವಜಕ್ಕುನ್ನವ್ ವಾಸುದೇವನ್ ನಂಬೂದಿರಿ ಮತ್ತು ಮೆಕ್ಕಟ ನೀಲಕಂಠನ್ ನಂಬೂದಿರಿ. ಭಾಗವತವನ್ನು ಕೆಲವು ಸಲ ನಾರಾಯಣೀಯವ್, ಇದನ್ನು ಪಾರಾಯಣಕ್ಕೆ ಉಪಯೋಗಿಸುತ್ತಾರೆ. ಕೆಲವು ಸಲ ಹದಿನೈದರಿಂದ ಐವತ್ತರವರೆಗೆ ಪಂಡಿತರು ಪಾರಾಯಣಕ್ಕೆ ಸೇರುವರು ಮತ್ತು ನಾರಾಯಣೀಯವ್ ಇದನ್ನು ಹಾಡುತ್ತಾರೆ.

ವಾರ್ಷಿಕ ಉತ್ಸವ

ಒಂದು ದೇವಾಲಯದ ದಿವ್ಯ ಚೇತನ್ಯವು ಯಾವುದೋ ಒಂದು ಕಾರಣ ದಿಂದ ಕ್ಷೀಣಿಸಬಹುದು. ಇದನ್ನು ಪ್ರತಿವರ್ಷ ಬಲಪಡಿಸಬೇಕಾಗುತ್ತದೆ. ವಾರ್ಷಿಕ ಉತ್ಸವವು ದಿವ್ಯಚೈತನ್ಯದ ಬಲಪಡಿಸವುದಾಗಿದೆ. ಆದ್ದರಿಂದ ಪ್ರತಿದೇವಾ ಲಯಕ್ಕೂ ವಾರ್ಷಿಕ ಉತ್ಸವ ಅತ್ಯವಶ್ಯ. ಉತ್ಸವವು ವರ್ಷದಲ್ಲಿ ಕನಿಷ್ಠ ಪಕ್ಷ ಒಂದು ಬಾರಿಯಾದರೂ ಭಕ್ತಾದಿಗಳು ಸೇರುವುದರಿಂದ ಅದರಲ್ಲಿಯ ನಂಬು ಗೆಯು ಸತ್ಸಂಗದಿಂದ[1] ಹೆಚ್ಚುವುದು. ಎಲ್ಲೆಲ್ಲಿ ಐದು ಜನ ಭಕ್ತರು ಸೇರುವರೋ ಅಲ್ಲಲ್ಲಿ ಭಗವಂತನ ಸಾಕ್ಷಾತ್ಕಾರವಾಗುತ್ತದೆಂದು ನಂಬಲಾಗಿದೆ. ಕಾರಣ ಪ್ರತಿ ಐದು ಭಕ್ತರಿಗೆ ದಿವ್ಯ ಚೈತನ್ಯವು ಇಮ್ಮಡಿಗೊಳ್ಳುತ್ತದೆ ದೇವಾಲಯದ ಆಧ್ಯಾ ತ್ಮಿಕ ಮಹತಿಯು ಹೆಚ್ಚುತ್ತದೆ.

ಶಾಸ್ತ್ರದಲ್ಲಿ ಹೇಳಿದ ಪ್ರತಿ ಅಕ್ಷರದಂತೆ ಇಲ್ಲಿ ನಿತ್ಯದ ಪೂಜೆಗಳು ಜರಗು ತ್ತವೆ. ಅತ್ಯಂತ ಶುದ್ಧಿ[2] ಮತ್ತು ಭಕ್ತಿಯಿಂದ ಪೂಜೆಗಳು ನಡೆಯುತ್ತವೆ. ವಾರ್ಷಿಕ ಉತ್ಸವವು ಅತ್ಯಂತ ಸವಿಸ್ತಾರವಾಗಿ ನಡೆಯುವುದರಿಂದ ದಿವ್ಯ ಚೈತನ್ಯವು ಬಲಗೊಳ್ಳುವುದಷ್ಟೇ ಅಲ್ಲದೆ, ಸದಾ ವೃದ್ಧಿಸುತ್ತದೆ. ಗುರು ವಾಯೂರು ದೇವಾಲಯವು ಸತತ ಭಕ್ತಾದಿಗಳನ್ನು ಆಕರ್ಷಿಸುವ ಕೇಂದ್ರವಾಗು ವುದು ಆಶ್ಚರ್ಯಕರವಲ್ಲ, ಪ್ರತಿ ದಿನ ಭಕ್ತರ ಸಂಖ್ಯೆ ಹೆಚ್ಚುತ್ತಲೇ ಇದೆ !

ಉಪದೇವತೆಗಳು

1 ಗಣಪತಿ

ಕೇರಳದ ಬಹುಶಃ ಎಲ್ಲಾ ದೇವಾಲಯಗಳಲ್ಲಿ ಮುಖ್ಯ ಪ್ರತಿಷ್ಠಿತ ದೇವರ ಉಪದೇವತೆಗಳಲ್ಲಿ ಗಣೇಶನಿಗೆ ಒಂದು ಸ್ಥಾನ ಇದ್ದೇ ಇದೆ. ಇಲ್ಲಿಯೂ ಸಹ ಗಣಪತಿ ವಿಗ್ರಹವಿದೆ ಗಣಪತಿಯ ಸ್ಥಾನವು **ನಲಮ್‌ಪಲಮ್**‌ದ ಒಳಗೇ ಗುಡಿಯ ಒಳಾವರಣದೊಳಗೇ ನೈಋತ್ಯ ದಿಕ್ಕಿನಲ್ಲಿದೆ. ಮೊದಲು ಈ ಪೀಠವು ಭಕ್ತರು ಪ್ರದಕ್ಷಿಣೆ[3] ಮಾಡಲಾರದಂತಿತ್ತು, ಆದರೆ ಇತ್ತೀಚೆಗೆ ದೇವಾಲಯವನ್ನು

---

1. ಸತ್ಪುರುಷರೊಡನೆ ಬೆರೆಯುವುದು
2. ಪರಿಶುದ್ಧತೆ
3. ವಿಗ್ರಹದ ಸುತ್ತ ಸುತ್ತುವುದು

ಜೀರ್ಣೋದ್ಧಾರಗೊಳಿಸಿದ ಸಮಯದಲ್ಲಿ ಈ ಪೀಠದ ಸುತ್ತಲೂ ಸಾಕಷ್ಟು ಸ್ಥಳಾವಕಾಶವನ್ನು ಬಿಟ್ಟಿದೆ.

2 ಸಸ್ತ

ಇಲ್ಲಿ ಸಸ್ತ ಪ್ರತಿಷ್ಠಾಪನೆಯೂ ಇದ್ದು ಇದು ನಲಮ್‌ಪಲಮ್‌ದ-ಒಳಾವರಣದಲ್ಲಿ ಇರುತ್ತದೆ. ಬಯಂಕಣದ ಹೊರಗೆ ಆಗ್ನೇಯ ದಿಕ್ಕಿನಲ್ಲಿದೆ. ಇದು ಪ್ರದಕ್ಷಿಣದ ಒಳಬದಿಯಲ್ಲಿದೆ. ಪೀಠದ ಎದುರು ಚಿಕ್ಕ ದೀಪಸ್ತಂಭವಿದೆ.

3 ಉಡತ್ತರಿಕತ್ತು ಭಗವತಿ

ಉಪದೇವತೆಗಳ ನಂತರ ಎಡತ್ತರಿಕತ್ತು ಭಗವತಿ ಬರುತ್ತಾಳೆ. ಮುಖ್ಯ ದೇವಾಲಯದ ಭಯಂಕಣದ ಹೊರಗೆ ಈಶಾನ್ಯಕ್ಕೆ-ರುದ್ರತೀರ್ಥದ ದಡದಲ್ಲಿದೆ. ಪೀಠದ ಸುತ್ತಲೂ ಪ್ರದಕ್ಷಿಣೆಗೋಸ್ಕರ ಸ್ಥಳವಿದೆ, ಮುಖ್ಯ ದೇವಾಲಯದ ಭಯಂಕಣದಿಂದ ಭಕ್ತಾದಿಗಳು ಈ ಪ್ರದಕ್ಷಣಾ ಆವರಣದ ಆಗ್ನೇಯ ಮೂಲೆಯಲ್ಲಿ ಹೊರಗಿನಿಂದ ಬರುವ ಪ್ರವೇಶದ್ವಾರವಿದೆ. ಈ ಪೀಠವನ್ನು ಇತ್ತೀಚೆಗೆ ಸಪೂರಗೊಳಿಸಿದ ಮತ್ತು ಮೆರುಗುಗೊಳಿಸಿದ ಗ್ರೆನೈಟ್ ಕಲ್ಲುಗಳಿಂದ ಪುನಃ ಕಟ್ಟಿದೆ.

ಅರ್ಝಲ್ ಒಂದು ಮಹತ್ವದ ಮುಡುಪು ಆಗಿದೆ. ಇತರ ದೇವಿ ಗುಡಿಗಳಲ್ಲಿಯಂತೆ ಇಲ್ಲಿಯೂ ಶಾಶ್ವತ-ದಿವ್ಯವಾಣಿ ಇದೆ. ಥಲಪ್ಪೊಲಿ ಒಂದು ಮಹತ್ವದ ಹಬ್ಬ ಮತ್ತು ಪ್ರಾಯಶಃ ಮದುವೆಯಾಗದ ಹುಡುಗಿಯರೇ ತಾಳವನ್ನು ತೆಗೆದುಕೊಳ್ಳುತ್ತಾರೆ. ಈ ಹಬ್ಬವನ್ನು ಧನುರ್ಮಾಸದಲ್ಲಿ[1] ಆಚರಿಸಲಾಗುವುದು. ಮಂಡಲ[2] ಋತುವಿನ ಕೊನೆಯ ಹತ್ತುದಿನಗಳು ಇಲ್ಲಿ ಅತ್ಯಂತ ಪವಿತ್ರ ದಿನಗಳೆಂದು ಪರಿಗಣಿಸಲ್ಪಡುತ್ತವೆ. ಕಲಮ್‌ಪಟ್ಟು[3] ನಡೆಯುತ್ತದೆ. ಈ ದೇವಿಯನ್ನು ಹಾಡಿನಿಂದ ಆರಾಧಿಸುವ ಹಕ್ಕು ಸಂಪ್ರದಾಯಕವಾಗಿ ಕಲ್ಲತ್ತು ಕುರುಪರಿಗೆ ಸೇರಿದೆ.

---

1. ಡಿಶಂಬರ—ಜನವರಿ
2. ನವ್ಹಂಬರ—ಡಿಶಂಬರ
3. ಕಲಮ್‌ಪಟ್ಟು : ದೇವಿಯ ಮಹಿಮೆಯನ್ನು ಕೊಂಡಾಡುವ ಹಾಡು, ಚಿತ್ರವನ್ನು ಬಣ್ಣದ ಹುಡಿಯಿಂದ ನೆಲದಮೇಲೆ ಬಿಡಿಸುವರು.

ಪ್ರಕರಣ 4

ದೇವಾಲಯ ವಿಸ್ಮಯಗಳ ಆಗರ

ಅಲೌಕಿಕ ಮತ್ತುನಿಗೂಢ ಘಟನೆಗಳು ಯಾವದೇ ದೇವಾಲಯವನ್ನು ಪ್ರಸಿದ್ಧಮಾಡುತ್ತವೆ. ನಂಬುವವರಿಗೆ ಆಶ್ರಯಸ್ಥಾನಗಳನ್ನಾಗಿ ಮಾಡುತ್ತವೆ. ಗುರುವಾಯೂರಿನ ಚರಿತ್ರೆಯ ದಾಖಲೆಯಲ್ಲಿ ಇಂಥ ಘಟನೆ ಮೊದಲ ಬಾರಿಗೆ 1586ರಲ್ಲಿ ಘಟಿಸಿತು. ಅಮೋಘ ಪಂಡಿತನಾದ ಮೆಲ್ಪಥುರ ನಾರಾಯಣ ಭಟ್ಟಾತ್ತಿರಿ ಓರ್ವ ವಿಚಾರವಾದಿ ಮತ್ತು ನಾಸ್ತಿಕ. ಸಂದಿವಾತದ ತೀವ್ರತರ ಆಘಾತದಿಂದ ಆತನು ಸಂಪೂರ್ಣವಾಗಿ ಪರತಂತ್ರನಾದನು ಮತ್ತು ನಿರಾಶೆ ಹೊಂದಿದನು. ಆತನ ಶಾರೀರಕ ದುರ್ಬಲತೆ ಮತ್ತು ನಾಸ್ತಿಕತೆ ಎರಡೂ ಅತ್ಯಂತ ಆಶ್ಚರ್ಯಕರವಾಗಿ, ಗುರುವಾಯೂರಿನಲ್ಲಿ **ಭಜನೆ**[1]ಯನ್ನು ನಡೆಸಿದ ನಂತರ ನಿಗೂಢ ರೀತಿಯಲ್ಲಿ ಮಾಯವಾದವು. ಅಂದಿನಿಂದ ಇಂದಿನವರೆಗೆ ಪ್ರತಿನಿತ್ಯ ನಿಗೂಡ ಘಟನೆಗಳು ನಡದೇ ನಡೆಯುತ್ತವೆ. ಆಧುನಿಕ ಔಷಧಿ ಗಳಿಂದ ಗುಣವಾಗದ ಕಾಯಿಲೆ ಗುಣವಾಯಿತು, ದಾರಿತೋಚದಂತಹ ಸಮಸ್ಯೆ ಪರಿಹಾರವಾಯಿತು ಎಂಬ ಭಕ್ತರ ಉದ್ಗಾರಗಳು ಪ್ರತಿನಿತ್ಯ ಇದ್ದದ್ದೇ. ವಿಸ್ಮಯಕರ ಸಂಗತಿಗಳು ಇಲ್ಲಿಯ ದೈನಂದಿಕ ಘಟನೆ ಎನ್ನುವಮಟ್ಟಿಗೆ ರೂಢಿ ಯಾಗಿವೆ. ಈ ವಿಸ್ಮಯಕಾರಕ ಘಟನೆಗಳು ವಿಜ್ಞಾನದ ಇಂದಿನ ದಿನಗಳಲ್ಲಿ ಇನ್ನು ಸೋಜಿಗವಾಗಿ ಕಂಡುಬರುತ್ತವೆ. ಅನೇಕ ವಿಸ್ಮಯ ಘಟನೆಗಳು ವ್ಯಕ್ತಿಗೆ ಸಂಬಂಧಿಸಿದ ವೈಯಕ್ತಿಕ ವಿಷಯಗಳಾಗಿರುವುದರಿಂದ ಪ್ರಚಾರಕ್ಕೆ ಬಾರದೇ ಹೋಗುತ್ತವೆ. ಭಗವಂತನಿಗೆ ಯಾವುದೂ ಅತ್ಯಂತ ದೊಡ್ಡದಲ್ಲ, ಯಾವುದೂ

---

1. ಭಕ್ತಿಗೀತೆಗಳನ್ನು ಹಾಡುವುದು.

ಕ್ಷುಲ್ಲಕವಲ್ಲ. ನಮ್ರತೆಯಿಂದ, ನಿಷ್ಕಪಟತನದಿಂದ ವಿಶ್ವಾಸದಿಂದ ನೀವು ಬೇಡಿಕೊಂಡರೆ ಸಾಕು, ಪೂರೈಸಲು ಭಗವಂತನು ಸದಾ ಸಿದ್ಧನಾಗಿಯೇ ಇದ್ದಾನೆ. ನೀವು ಕೇಳಿಕೊಂಡರೆ ಸಾಕು, ಕೇಳಿದಷ್ಟೇ ಅಲ್ಲ, ಇನ್ನೂ ಹೆಚ್ಚಿಗೇನೇ ನಿಮಗೆ ಪ್ರಾಪ್ತಿಯಾಗುತ್ತದೆ. ಪ್ರತಿನಿತ್ಯದ ಯಾತ್ರಿಕರ ಸಂಖ್ಯೆ ದಿನದಿನಕ್ಕೂ ಅಗಣಿತವಾಗಿ ಹೆಚ್ಚುತ್ತಲೇ ಇದೆ. ಇನ್ನೊಂದು ಆಶ್ಚರ್ಯಕರ ಸಂಗತಿಯಂದರೆ ಭಗವಂತನಿಗೆ ಹಿಂದುಗಳಿಲ್ಲದೆ, ಇತರ ಜನಾಂಗಕ್ಕೆ[1] ಸೇರಿದವರೂ ದೇವಾಲಯ ನಿಯಮಗಳಿಗನುಸರಿಸಿ ಕಾಣಿಕೆಗಳನ್ನು, ಹರಿಕೆಗಳನ್ನು ಸಲ್ಲಿಸಿದ್ದಾರೆ. ಯಾಂತ್ರಿಕರ ಇಂದಿನ ಹೆಚ್ಚಳವು ಕೇಂದ್ರ ಸರ್ಕಾರವು ಗುರುವಾಯೂರನ್ನು ನೇರವಾಗಿ ರೈಲು ಸಂಪರ್ಕ ಹೊಂದುವಂತೆ ಮಾಡಲು ವಿಚಾರಿಸುವಂತೆ ಮಾಡಿದೆ.

ಇಲ್ಲಿ ಭಗವಂತನನ್ನು ಅನಂತ, ನಿರಾಕಾರ ನಿರ್ಗುಣ ಸ್ವರೂಪಿಯಾಗಿಯೂ ಸರ್ವಶಕ್ತ, ಸರ್ವವ್ಯಾಪಿ ಸರ್ವಜ್ಞನೆಂದೂ ಪೂಜಿಸಲಾಗಿದೆ. ಮೂರ್ತಿ ಕೇವಲ ಸಂಕೇತ. ಕಾರಣ ಭಕ್ತಾದಿಗಳು ತಮ್ಮ ಮನಸ್ಸಿಗೆ ಬಂದ ರೂಪದಲ್ಲಿ ದೇವನನ್ನು ಇಲ್ಲಿ ಕಾಣಬಹುದು. ಮೆಲ್ಪಥುರ ಮತ್ತು ಭಕ್ತಿಶಿರೋಮಣಿ ವಾಸುದೇವನ್ ನಂಬೂದಿರಿಯಂತಹ ಯತಿಗಳು ಇಲ್ಲಿಯ ದೇವನನ್ನು ಮಹಾವಿಷ್ಣುವಿನಂತೆಯೂ, ಪೂತನಮ್, ವಿಲ್ವಮಂಗಲಂ II, ರಾಜಕುಮರ ಮಾನವೇದನ್ (ನಂತರ ಜೊಮರಿನ್ ಆದವನು) ಮತ್ತು ಕುರೂರಮ್ಮ ದೇವನನ್ನು ಬಾಲಕೃಷ್ಣನಂತೆ ಕಂಡಿದ್ದಾರೆ. ವಿಲ್ವಮಂಗಲಮ್ II ಇವರ ಸೇವಕ ತನ್ನ ಯಜಮಾನನ ಉಪಹಾಸ್ಯದ ಹೇಳಿಕೆಯಂತೆ ಭಗವಂತನನ್ನು ಎಮ್ಮೆಯ ರೂಪದಲ್ಲೂ ಕಂಡಿದ್ದಾನೆ! ವೈಷ್ಣವ ಪರಂಪರೆಯ ಪ್ರಕಾರ ಭಾವಾವೇಶ ಅಥವಾ ಶೈವ ಸಂಪ್ರದಾಯ ಆರಾಧನ ಪದ್ಧತಿ ಅಥವಾ ಶಕ್ತಿ ಸಂಪ್ರದಾಯದ ಕಷ್ಟತರವಾದ ಕಟ್ಟುಪಾಡುಗಳನ್ನು ನಾವು ಇಲ್ಲಿ ಕಾಣುವುದಿಲ್ಲ. ಭಕ್ತನು ತನ್ನ ಶಾರೀರಕ ಮತ್ತು ಮಾನಸಿಕ ಸ್ಥಿತಿಗಳಿಗೆ ತಕ್ಕಂತೆ ತನ್ನ ಆಯ್ಕೆ ವಿಧಾನವನ್ನೇ

---

1. 1916 ರಿಂದ 1928ರವರೆಗೆ ದೇವಾಲಯವು "ನ್ಯಾಯಾಲಯದ" ವಶದಲ್ಲಿತ್ತು, ಸಾರ್ K. A. ಥೋರ್ನೆ ICS ಆಡಳಿತದ ಮುಖ್ಯಾಧಿಕಾರಿಯಾಗಿದ್ದರು. ಸಾರ್ ಥೋರ್ನೆ ಫಾರಿನ್ ಸಕ್ರೆಟರಿ ಆಫ್ ಬ್ರಿಟಿಶ್ ಇಂಡಿಯಾ–ಆಗಿ ನಿವೃತ್ತರಾದರು. ಆತನ ಕಾಲದಲ್ಲಿ ದೇವಾಲಯದಲ್ಲಿ ಅನೇಕ ಜೀರ್ಣೋದ್ಧಾರ ಕಾರ್ಯಗಳು ನಡೆದವು. ತನ್ನ ಮಗಳು ಜೋನ-ಳ ಹೆಸರಿನಲ್ಲಿ ಇವರು ಕಾಣಿಕೆ ಅರ್ಪಿಸಿದ್ದಾರೆ.

ಅನುಸರಿಸಬಹುದು. ಭಜನೆಗಳಲ್ಲಿ ಇತರ ಕಾರ್ಯಕ್ರಮಗಳಲ್ಲಿ ದೇವಾಲಯದ ನಿಯಮಗಳಿಗನುಸಾರವಾಗಿ ತನ್ನ ಸಾಧನೆಯನ್ನು ಪೂರೈಸಬಹುದು.

ತಂದೆತಾಯಿಗಳು ತಮ್ಮ ಮಕ್ಕಳ ಹೆಂಡತಿ ಗಂಡನ ಪರವಾಗಿ, ಹೀಗೆ ಯಾರು ಬೇಕಾದರೂ ಇನ್ನೊಬ್ಬರ ಪರವಾಗಿ ಭಜನೆಯನ್ನು ಮಾಡಬಹುದು. ನೋಟಕ್ಕೆ ಭಗವಂತನು ಗಂಭೀರನಾದ ಶಿವನಂತಾಗಲಿ ಭಯಂಕರವಾದ ಕಾಳಿ ಯಂತಾಗಲಿ ಇಲ್ಲ. ಸರ್ವಾಭರಣ ಭೂಷಿತನಾಗಿ ಪುಷ್ಪಾಲಂಕಾರ ಹೊಂದಿದ ನಾನಾ ನಮೂನೆಯ ದೀಪಗಳಿಂದ ಶೋಭಿತವಾದಾಗ್ಗೆ ಭಗವಂತನು ಸದಾ ಹಸನ್ಮುಖಿ, ಮೋಹಕ ಮತ್ತು ದಿವ್ಯ ಪ್ರತಿಭೆಯಿಂದ ಕೂಡಿದವನಾಗಿದ್ದಾನೆ.

ಭಗವಂತನು ನಮ್ಮಿಂದ ಕೇಳುವುದು ಅತ್ಯಲ್ಪ, ಅತಿ ಕಠಿಣ ಹೃದಯದ ಯಜಮಾನನಲ್ಲ. ಚೆರಮನ್ ಪೆರುಮಾಳ್ ನಾಯನಾರ್ ಸ್ವತಃ ಖಡ್ಗ ಹಿಡಿದು ಆತ್ಮ ಬಲಿದಾನಕ್ಕೆ ತಯಾರಾದಾಗಲೇ ಶಿವನು ಆತನನ್ನು ಅನುಗ್ರಹಿಸಿದನು, ರಾಮಕೃಷ್ಣ ಪರಮಹಂಸರು ಕಾಳಿಕಾದೇವಿಯ ಕೈಯಿಂದ ಖಡ್ಗವನ್ನು ಪಡೆದು ತಮ್ಮ ಬಲಿದಾನಕ್ಕೆ ತಯಾರಾದಾಗಲೇ ಅಲ್ಲವೆ ಕಾಳಿಯು ಪ್ರತ್ಯಕ್ಷವಾದುದು! ಆದರೆ ಭಗವಾನ್ ಗುರುವಾಯೂರಪ್ಪನು ವಿಲ್ವಮಂಗಲಮ್ II ಮತ್ತು ಕುರೂರಮ್ಮರೊಂದಿಗೆ ಅವರ ಗ್ರಹಿಕೆಯಂತೆ. ಬಾಲಕೃಷ್ಣನಾಗಿ ಸದಾ ಅವ ರೊಂದಿಗೇ ಹಸುಳೆಯಾಗಿ ಜೊತೆಯಲ್ಲಿದ್ದನು. ಬಾಲ್ಯ ಲೀಲೆಗಳೊಂದಿಗೆ ಅವರನ್ನು ಕಾಡಿಸಿದ್ದೂ ಉಂಟು. ಹಿಂದೂ ದೇವಾಲಯದ ಯಾವುದೇ ಆರಾಧ್ಯ ದೇವತೆಯು ಭಗವಾನ್ ಗುರುವಾಯೂರಪ್ಪನಷ್ಟು ಸುಲಭವಾಗಿ ಸಂತೃಪ್ತಿ ಹೊಂದಲಾರನು ಮತ್ತು ಶೀಘ್ರವಾಗಿ ಕ್ಷಮಿಸಲಾರನು.

ಅದ್ಭುತ ಕಥೆಗಳು

ಸಿದ್ಧಿಗಿಂತ ಭಕ್ತಿಯು ಮೇಲ್ತರಗತಿಯದು

ಒಂದು ಸಲ ಕೇರಳದ ಕಾಲಡಿಯಿಂದ ಜ್ಞಾನಿ ವೇದಾಂತಿ, ಮತ್ತು ಸಿದ್ಧಿ ಪುರುಷರಾದ ಶ್ರೀ ಶಂಕರಾಚಾರ್ಯರು ಕರ್ನಾಟಕದಲ್ಲಿಯ ಶೃಂಗೇರಿಗೆ ಹೊರಟಿದ್ದರು. ಅವರ ಹಾದಿಯಲ್ಲಿ ಗುರುವಾಯೂರಿನ ಮೂಲಕ ಹಾದು ಹೋಗಿತ್ತು, ಅವರು ಇಲ್ಲಿ ಹಾಯ್ದು ಹೋಗುವಾಗ್ಗೆ ಗುರುವಾಯೂರು ದೇವಸ್ಥಾನದ ಆರತಿ ಸಮಯ ಮೆರವಣಿಗೆಯೂ ವಾಯುವ್ಯ ಮೂಲೆಯನ್ನು ತಲುಪಿತ್ತು. ಶಂಕರಾ

ಚಾರ್ಯರರು ಪೂಜೆಗೆ ಯಾವ ಮಹತ್ವವನ್ನು ಕೊಡದೆ, ಭಗವಂತನಿಗೆ ಮಣಿಯದೆ ನೇರವಾಗಿ ಹೊರಟರು. **ಸಿದ್ಧಿಗಿಂತ[1] ಭಕ್ತಿಯು[2]** ಮೇಲ್ತರಗತಿಯದು ಈ ಮಾತನ್ನು ಶಂಕರಾಚಾರ್ಯರಿಗೆ ಮನದಟ್ಟ ಮಾಡುವುದು ಗುರುವಾಯೂರಪ್ಪನಿಗೆ ಬೇಕಾಗಿತ್ತು. ಆಚಾರ್ಯರು ಆನೆಯ ಮುಂದೆ ದೊಪ್ಪನೆ ಬಿದ್ದರು. ಇಡೀ ದೇವಾಲಯ ಆಶ್ಚರ್ಯದಿಂದ ವಿಸ್ಮಯ ಮೂಢವಾಯಿತು. ಮೆರವಣಿಗೆ ನಿಂತಿತು. ಒಂದು ನಿಮಿಷದ ನಂತರ ಜಾಗೃತಾವಸ್ಥೆಯನ್ನು ಹೊಂದಿದ ಆಚಾರ್ಯರು ತಮ್ಮ ಮೂರ್ಖತನವನ್ನು, ಹೆಡ್ಡತನವನ್ನು ತಿಳಿದು ಸ್ಥಳದಲ್ಲಿಯೇ ನಿಂತು 'ಗೋವಿಂದಾಷ್ಟಕಮ್' ಮತ್ತು "ಭಜಗೋವಿಂದಮ್" ಇವನ್ನು ರಚಿಸಿ, ಹಾಡಲಾರಂಭಿಸಿದರು. ದೇವನನ್ನು ಆರಾಧಿಸುತ್ತ ಕೆಲವು ದಿನಗಳನ್ನು ಕಳೆದರು. 'ಮಂಡಲ ವಿಳಕ್ಕು[3]' ಇದನ್ನು ದೇವಾಲಯದ ಪಾವಿತ್ರತೆ ಮತ್ತು ಚೈತನ್ಯದ ಹೆಚ್ಚಳಕ್ಕಾಗಿ ಪ್ರಾರಂಭಿಸಿದರು. ಮಂಡಲವೆಂದರೆ ನವ್ಹಂಬರ–ಡಿಶಂಬರ ಅವಧಿಯ ನಾಲ್ವತ್ತೊಂದು ದಿನಗಳ ಉತ್ಸವ; ಶುದ್ಧ ಏಕಾದಶಿ ದಿನದ ಪೂಜೆ ಅತ್ಯಂತ ಮಹತ್ವದ್ದು. ಭಗವಾನ್ ಶ್ರೀ ಕೃಷ್ಣನು ಅರ್ಜುನನಿಗೆ ಗೀತೋಪದೇಶ ಮಾಡಿದ ಪರ್ವದಿನ.

ಮಂಜುಳಾಳ ಪುಷ್ಪಹಾರದ ಅದ್ಭುತ-ಪವಾಡ

ಪೂರ್ವದಿಕ್ಕಿನಿಂದ ಗುರುವಾಯೂರನ್ನು ಪ್ರವೇಶಿಸುವರು ಮೊದಲು ಕಾಣುವುದು ಭವ್ಯವಾದ ಆಲದಮರ, ಅಡಿಯಲ್ಲಿ ಗರುಡನ ಪ್ರತಿಮೆ. ಇದನ್ನು **'ಮಂಜುಳಾಲ'** ಅಂದರೆ ಮಂಜುಳಾಳ ಆಲದಮರ ಎಂದು ಕರೆಯುತ್ತಾರೆ. ವಾರಿಯರ ಜಾತಿಯಲ್ಲಿ ಹುಟ್ಟಿದ ಹುಡುಗಿ ಮಂಜುಳಾ, ಗುರುವಾಯೂರಪ್ಪನ ಭಕ್ತಳು. ಪ್ರತಿ-ರಾತ್ರಿ ಪುಷ್ಪಹಾರವನ್ನು ತಂದು ಅದನ್ನು ಮುಖ್ಯ ಅರ್ಚಕರಿಗೆ ಕೊಡುವಳು, ಅವರು ಅದನ್ನು ಮೂರ್ತಿಯ ಮೇಲಿಡುವರು. ಹೀಗೆ ಅನೇಕ ದಿನಗಳವರೆಗೆ ಸಾಗಿತು. ಒಂದು ದಿನ ಈ ಗಿಡದ ಸಮೀಪಕ್ಕೆ ಮಂಜುಳಾ ಬರುವ ವೇಳೆಗೆ ದೇವಾಲಯ ಮುಚ್ಚಿತು. ಅತ್ಯಂತ ನಿರಾಶೆಹೊಂದಿ ಕಣ್ಣೀರಿ

---

1. ಸಾದಿಸಿದ್ದು
2. ಭಗವಂತನಲ್ಲಿಯ ಪ್ರೇಮ
3. ಮಂಡಲ ಕಾಲದಲ್ಲಿಯ ದೀಪಾರಾಧನೆ

ನಿಂದ ಅವಳ ಕಣ್ಣುಗಳು ಕಾಣದಾಗಿ ಕಂಬದಂತೆ ನಿಂತಳು. ದೇವಾಲಯ ದಿಂದ ಮರಳುತ್ತಿದ್ದ ಪೂಂತನಮ್ ಇವಳನ್ನು ಸಂತೈಸುತ್ತಾ "ಅಳಬೇಡ, ಅಳಬೇಡ, ಗುರುವಾಯೂರಪ್ಪನು ನಿನ್ನ ಹೃದಯವನ್ನು ನೋಡುತ್ತಾನೆ ಆಲದ ಮರದ ಬುಡದಲ್ಲಿಯೇ ನೀನು ತಂದ ಪುಷ್ಪಹಾರವನ್ನಿಡು ದೇವಾಲಯ ಮೆಟ್ಟಿ ಲಿನ ಮೇಲೆಯೇ ಇಟ್ಟಿದ್ದೇನೆಂದು ತಿಳಿ. ಭಗವಂತನು ಅದನ್ನು ಸ್ವೀಕರಿಸುತ್ತಾನೆ" ಎಂದು ಹೇಳಿದನು. ಮನದಲ್ಲಿ ಭಗವಂತನನ್ನು, ಗುರುವಾಯೂರಪ್ಪನನ್ನು ಸ್ಮರಿಸುತ್ತಾ ಪುಷ್ಪಹಾರವನ್ನು ಅಲ್ಲಿಯೇ ಇಟ್ಟು ಮರಳಿದಳು. ಮಾರನೆ ದಿನ ಅದ್ಭುತ ಕಾದಿತ್ತು. ನಿರ್ಮಾಲ ದರ್ಶನದ ನಂತರ ಮುಖ್ಯ ಅರ್ಚಕರು ಕಳೆದ ರಾತ್ರಿಯ ಹಾರಗಳನ್ನು ತೆಗೆಯುತ್ತಿದ್ದರು. ಮೂರ್ತಿಯಿಂದ ವಿಶಿಷ್ಟವಾದ ಹಾರವನ್ನು ಎಷ್ಟೇ ಪ್ರಯತ್ನಿಸಿದರೂ ತೆಗೆಯಲು ಸಾಧ್ಯವಾಗಲಿಲ್ಲ. ನಿರ್ಮಾಲ ದರ್ಶನಕ್ಕಾಗಿ ಬಂದಿದ್ದ ಭಕ್ತರ ಸಮೂಹ ವಿಸ್ಮಯಗೊಂಡಿತು. ಪೂಂತನಮ್ಮ ಅಲ್ಲಿದ್ದರು, ಕಳೆದ ರಾತ್ರಿಯ ಘಟನೆ ಅವರ ಮನಸ್ಸಿಗೆ ಹೊಳೆಯಿತು. ಕೂಡಲೇ, "ಇದು ಮಂಜುಳಾಳ ಹಾರವಾಗಿದ್ದರೆ, ಕೂಡಲೇ ಹೊರಬರಲಿ" ಎಂದು ದೊಡ್ಡ ಧ್ವನಿಯಿಂದ ಕೂಗಿದರು. ತಕ್ಷಣ ಪುಷ್ಪಹಾರ ಕಳಚಿತು. ಇಡೀ ವಾತಾವರಣ "ಹರೇ ಕೃಷ್ಣ ! ಹರೇ ಕೃಷ್ಣ !" ಎಂಬ ಭಕ್ತರ ಕೂಗಿನಿಂದ ತುಂಬಿತು. ಪ್ರತಿ ಯೊಬ್ಬರೂ ಮಂಜುಳಾಳ ಹಾರದಿಂದ ಹೂ ಪಡೆಯಲು ಪ್ರಯತ್ನಿಸಿದರು, ಮಂಜುಳಾಳ ಪುಷ್ಪಹಾರವನ್ನು ಸ್ವತಃ ಸ್ವೀಕರಿಸಲು ಭಗವಂತನು ದಯಮಾಡಿ ಸಿದ್ದ ಆಲದ ಮರವನ್ನು ಪೂಜಿಸಲು ತವಕಿಸಿದರು. ಅಂದಿನಿಂದ ಈ ಮರವು 'ಮಂಜುಳಾಲ' ಎಂದು ಪ್ರಸಿದ್ಧಿ ಪಡೆದಿದೆ.

ಆನೆಯ ಓಟ (ಅನಯೋಟ್ಟಮ್)[1] ಈಗ ಈ ಮರದಿಂದ ಪ್ರಾರಂಭ ವಾಗಿ ವಾರ್ಷಿಕ ಉತ್ಸವವು ಪ್ರಾರಂಭವಾಯಿತೆಂದು ಸಾರುತ್ತದೆ.

ಮೂರ್ತಿಯು ಸಜೀವಿಯಾಯಿತು

ಗುರುವಾಯೂರು ದೇವಸ್ಥಾನದಲ್ಲಿ ಮೊದಲು ಕೇವಲ ಒಬ್ಬ ಅರ್ಚಕ ನಿದ್ದನು. ಒಂದು ದಿನ ಅತ್ಯಂತ ಜರೂರಾದ, ಅನಿವಾರ್ಯ ಕಾರಣಕ್ಕಾಗಿ

---

1. ಮರದಿಂದ ದೇವಾಲಯದವರೆಗೆ ಆನೆಗಳ ಓಟ ಇದು ವಾರ್ಷಿಕ ಉತ್ಸವವು ಪ್ರಾರಂಭವಾಯಿತೆಂಬುದನ್ನು ಸೂಚಿಸುತ್ತದೆ.

ಬೇರೆಡೆಗೆ ಹೋಗಬೇಕಾಯಿತು. ಹನ್ನೆರಡು ವರ್ಷದ ತನ್ನ ಮಗನಿಗೆ ಪೂಜೆ ಮಾಡಲು ಹೇಳಿ, ಅರ್ಚಕ ಹೊರಟು ಹೋದ. ಪೂಜೆಯ ನಂತರ ವಿಗ್ರಹವು ನೈವೇದ್ಯವನ್ನು ಬಕ್ಷಿಸುವುದಾಗಿ ಮುಗ್ಧ ಮನಸ್ಸಿನ ಬಾಲಕ ತಿಳಿದಿದ್ದ. ಅತ್ಯಂತ ನಮ್ರತೆಯಿಂದ ಬೇಡಿಕೊಂಡರೂ ಮೂರ್ತಿಯು ಸ್ವೀಕರಿಸಿದಿದ್ದಾಗ್ಗೆ ಆತನಿಗೆ ತಳಮಳ ಉಂಟಾಯಿತು. ನೈವೇದ್ಯದಲ್ಲಿ ಮೊಸರು, ಮಾವಿನ ಉಪ್ಪಿನಕಾಯಿ ಹಾಕದಿರುವುದರಿಂದ ದೇವನಿಗೆ ನೈವೇದ್ಯವು ರುಚಿಸಲಿಲ್ಲ ಎಂದು ಗ್ರಹಿಸಿದ ಬಾಲಕ ಪಕ್ಕದ ಮನೆಗೆ ತೆರಳಿ ತಂದು ನೈವೇದ್ಯಕ್ಕೆ ಸೇರಿಸಿದನು. ಆದರೂ ಭಗವಂತನು ಅನುಗ್ರಹಿಸಲಿಲ್ಲ. ಬಾಲಕ ಜೋರಾಗಿ ಅಳುತ್ತ ನಿಂತ "ಕೃಷ್ಣ, ಕೃಷ್ಣ, ಇದನ್ನು ತಿಳಿದ ನನ್ನ ತಂದೆ ನನ್ನನ್ನು ಸಾಯುವಂತೆ ಹೊಡೆದೇ ಹೊಡೆಯುತ್ತಾರೆ. ಕೃಷ್ಣ ಬೇಗನೆ ಬಾರೋ ನೈವೇದ್ಯವನ್ನು ಸ್ವೀಕರಿಸು ಬೇಗ ಬಾ." ಎಂದು ಬೋರಿಟ್ಟ. ಭಕ್ತವತ್ಸಲನು ಮುಗ್ಧ ಮನಸ್ಸಿನ ಬಾಲಕನ ಕಣ್ಣೀರನ್ನು ನೋಡದಾದ ನೈವೇದ್ಯವನ್ನು ಪೂರ್ತಿಯಾಗಿ ಭಕ್ಷಿಸಿದ ! ಅತ್ಯಂತ ಸಂತೃಪ್ತನಾದ ಹುಡುಗ ಗರ್ಭಗುಡಿಯಿಂದ ಹೊರಬಂದು ಖಾಲಿಯಾದ ತಟ್ಟೆಯನ್ನು ನೈವೇದ್ಯ ಪಡೆಯಲೆಂದು ಬಂದ ವಾರಿಯರನಿಗೆ ಕೊಟ್ಟ.

ಪಾತ್ರೆ ಬರಿದಾದ್ದನ್ನು ಕಂಡ ವಾರಿಯರನಿಗೆ ಕೋಪ ಮಸ್ತಕ್ಕೇರಿತು ; ಏಕೆಂದರೆ ಭಗವಂತನಿಗೆ ಅರ್ಪಿಸಿದ ನೈವೇದ್ಯ, ಆತನ ಕೂಲಿಯ ಒಂದಂಶವಾಗಿತ್ತು. ಆತನ ಆಹಾರವಾಗಿತ್ತು. "ಅನ್ನ ಎಲ್ಲಿದೆ ?" ಮುಗ್ಧ ಬಾಲಕ್ಕ ಹೇಳುತ್ತಾನೆ," ಭಗವಂತನು ತಿಂದು ಬಿಟ್ಟ !" "ಭಗವಂತನು ತಿಂದನೋ? ನಾನಿದನ್ನು ನಂಬಲೇ, ಯಾರು ತಿಂದರೆಂಬುದು ನನಗೆ ಗೊತ್ತುಂಟು! ನಿನ್ನ ತಂದೆ ಬರಲಿ, ಯಾರು ತಿಂದರೆಂದು ತಿಳಿಯುತ್ತದೆ!" ಎಂದು ಗರ್ಜಿಸಿದ. ಅರ್ಚಕ ವಾಪಸ್ಸಾದ, ವಾರಿಯರ್ ಸವಿಸ್ತಾರವಾಗಿ ಎಲ್ಲಾ ಹೇಳಿದ. ತನ್ನ ಮಗನನ್ನೆ ನಂಬುವುದು ಆತನಿಗೆ ಕಷ್ಟವಾಯಿತು. ಅಂದಿನವರೆಗೆ ಯಾವ ಮೂರ್ತಿಯೂ ನೈವೇದ್ಯವನ್ನು ಭಕ್ಷಿಸಿರಲಿಲ್ಲ. ಅತ್ಯಂತ ಪರಿತಾಪ ಹೊಂದಿ ಮಗನನ್ನು ಚೆನ್ನಾಗಿ ಥಳಿಸಲು ಕೋಪದಿಂದ ಕೈ ಎತ್ತಿದ. ಅಶರೀವಾಣಿ[1] ಕೇಳಿ ಬಂತು, "ತಡೆ ತಡೆ, ಮಗನನ್ನು ಹೊಡೆಯಬೇಡ ಆತನು ಹೇಳಿದ್ದು ನಿಜ. ನೇವೇದ್ಯವನ್ನು ತಿಂದವನು ನಾನೇ, ಮಗು ನಿರಪರಾಧಿ"

1. ನಿಗೂಢ ಧ್ವನಿ

ಭಗವಂತನು ಭಕ್ತವತ್ಸಲನೆಂಬುದರ ಇನ್ನೊಂದು ನಿದರ್ಶನವೆ ಇದು.

ಪೂಂಥನಮ್ಮನ ಉಂಗುರ

100 ಕಿಲೋಮೀಟರ್ ದೂರವನ್ನು ನಡೆದು, ಭಗವಂತನ ಅನನ್ಯ ಭಕ್ತನಾದ ಪೂಂಥನಮ್ಮನು **ಭಜನೆ**ಗಾಗಿ ಗುರುವಾಯೂರಿಗೆ ಪ್ರತಿ ತಿಂಗಳು ನಡೆದು ಬರುತ್ತಿದ್ದ. ಒಂದು ಸಲ ಗುರುವಾಯೂರಿಗೆ ಹೊರಟ ದಾರಿಯಲ್ಲಿ ಆತನನ್ನು ಹಾದಿಹೋಕರು ಪುಂಡರು, ಮುತ್ತಿದರು. ಪರಿಸ್ಥಿತಿಯ ಗಂಭೀರತೆಯನ್ನು ತಿಳಿದ ಭಕ್ತ, ಗುರುವಾಯೂರಪ್ಪನು ಮಾತ್ರ ತನ್ನನ್ನು ಉಳಿಸಬಲ್ಲನೆಂಬುದನ್ನು ತಿಳಿದು ಕಣ್ಣುಮುಚ್ಚಿ ಏಕ ಮನಸ್ಸಿನಿಂದ ಹೀಗೆ ಪಠಿಸಿದ.

"ಹೇ ಭಗವಂತಾ, ಯಾವ ಕಾತರತೆಯಿಂದ ನೀನು ದ್ರೌಪದಿಗೆ ಸಹಾಯ ಸಲ್ಲಿಸಲು ವಿಜೃಂಬುಗೈದಿ!

"ಹೇ ಭಗವಂತಾ, ಯಾವ ಆತುರದಿಂದ ಗಜೇಂದ್ರನಿಗೆ ಮೋಕ್ಷ ಕೊಡಲು ಧಾವಿಸಿದೀ,

"ಹೇ ಭಗವಂತಾ ಅದೇ ಆತುರದಿಂದ ನನ್ನಲ್ಲಿಗೆ ಧಾವಿಸಿ ನನ್ನನ್ನು ರಕ್ಷಿಸು, ತ್ರಾಹಿ, ತ್ರಾಹಿ"

ಮನದಲ್ಲಿ ಶಾಂತಿ ಲಭಿಸಿತು. ಕೆಲವು ನಿಮಿಷಗಳ ನಂತರ ಮಧುರವಾದ ವನಮಾಲಾದ[1] ವಾಸನೆ ಆತನನ್ನು ಸಂತೋಷಗೊಳಿಸಿತು. ಕಣ್ಣು ತೆರೆಯುತ್ತಾನೆ. ಎದುರಿಗೆ ಮಂಗಟ್ಟುಚ್ಚನ್ ನಿಂತಿದ್ದಾನೆ. ಕೈಯಲ್ಲಿ ಪುಂಡರನ್ನು ತುಂಡರಿಸಿ ಅವರ ರಕ್ತ ಹತ್ತಿದ ಖಡ್ಗ ಕೈಯಲ್ಲಿ-ಕಳ್ಳರ ಹೆಣಗಳು ಚೆಲ್ಲಾಪಿಲ್ಲಿ ! ಪೂಂಥನಮ್ ಉದ್ಗಾರ ತೆಗೆದು ಕೈಗಳನ್ನು ಜೋಡಿಸಿ "ಕೃಷ್ಣ, ಕೃಷ್ಣ ನಿನ್ನ ಲೀಲೆಗಳು ಅಧ್ಭುತವಾಗಿವೆ! ಗುರುವಾಯೂರಪ್ಪನೇ ನಿನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ ಮಂಗಟ್ಟು. ನೀನಿಲ್ಲದಿದ್ದರೆ ನನ್ನ ಹಣೆ ಬರಹ ಏನಾಗುತ್ತಿತ್ತೋ ಯಾರು ಬಲ್ಲರು ? ಇದರ ಸ್ಮರಣಾರ್ಥವಾಗಿ ನೀನು ಇದನ್ನು ಸ್ವೀಕರಿಸು ಎನ್ನುತ್ತ ತನ್ನ ಬೆರಳಲ್ಲಿಯ ಉಂಗರವನ್ನು ಮಂಗಟ್ಟುಚ್ಚನಿಗ ಕಾಣಿಕೆ ಕೊಟ್ಟನು.

---

1. ಶ್ರೀಕೃಷ್ಣ ಧರಿಸುವ ಹಾರ

ಅಂದೇ ರಾತ್ರಿ ಮುಖ್ಯ ಅರ್ಚಕರ ಕನಸಿನಲ್ಲಿ ಉನ್ನಿ ನಂಬೂದಿರಿ ಹೀಗೆ ಹೇಳುವಂತೆ ಕೇಳಿಸಿತು. ಮೂರ್ತಿಯ ಮೇಲೆ ಉಂಗುರವಿರುವುದನ್ನು ನೀನು ಕಾಣುವಿ. ನಾಳೆ ಬರಲಿರುವ ಪೂಂಥನಮ್ಮನಿಗೆ ಇದನ್ನು ಕೊಡು.

ಮರುದಿನ ಮುಂಜಾನೆ ದೇವನ ಮೇಲೆ ಉಂಗುರವಿದೆ. ಮುನ್ನಾದಿನ ಅಲ್ಲಿ ಉಂಗುರವಿರದ್ದು ಖಂಡಿತವಾಗಿ ಆತನಿಗೆ ಗೊತ್ತಿತ್ತು. ದರ್ಶನಕ್ಕಾಗಿ ಅಷ್ಟರಲ್ಲಿ ಅಲ್ಲಿಗೆ ಪೂಂಥನಮ್ಮ ಬಂದು, ಪ್ರಾರ್ಥನೆಯನ್ನು ಇನ್ನೂ ಹೆಚ್ಚು ಭಕ್ತಿಯಿಂದ ಪ್ರಾರಂಭಿಸಿದನು. ಗರ್ಭಗುಡಿಯಿಂದ ಮುಖ್ಯ ಅರ್ಚಕ ಹೊರ ಬಂದು ಮೂರ್ತಿಯ ಮೇಲಿದ್ದ ಉಂಗುರವನ್ನು ಕೊಡುತ್ತಾನೆ, ಹಾಗೂ ಏನು ನಡೆಯಿತೆಂಬುದನ್ನು ಹೇಳಿದ. ಅದು ತನ್ನದೇ ಉಂಗುರ ಎಂಬುದನ್ನು ತಿಳಿದ ಪೂಂಥನಮ್ ಗಾಬರಿಸಿದ, ಮಂಗಟ್ಟಚ್ಚನಿಗೆ ಕಾಣಿಕೆ ಕೊಟ್ಟ ಉಂಗುರ ಅದೇ ಎಂದು ತಿಳಿದು ಭಗವಂತನನ್ನು ಸ್ಮರಿಸಿದ, ಕಳ್ಳಕಾಕರೊಂದಿಗೆ ಹೋರಾಡಿದವನು ಮತ್ತಾರೂ ಅಲ್ಲದೆ, ಭಗವಾನ್ ಗುರುವಾಯೂರಪ್ಪನೇ ಎಂಬುದನ್ನು ತಿಳಿದ.

ಭಕ್ತಿ ಮತ್ತು ವಿಭಕ್ತಿ[1]

ಪೂಂತನಮ್ ಮತ್ತು ಮೆಲ್ಪಥುರ್ ಇಬ್ಬರೂ ಗುರುವಾಯೂರಪ್ಪನ ಭಕ್ತರಾದರೂ ಪೂಂತನಮ್ ತನ್ನ ಪದ್ಯಗಳನ್ನು ಮಾತೃ ಭಾಷೆಯಲ್ಲಿ ಬರೆದಿದ್ದು ಈ ಪದ್ಯಗಳು ಭಕ್ತಿಗಾಗಿ ಹೆಸರಾಗಿವೆ. ಮೆಲ್ಪಥುರ್ ಉದ್ದಾಮ ವಿದ್ವಾಂಸನಾಗಿದ್ದು ಸಂಸ್ಕೃತದಲ್ಲಿ ಪಂಡಿತನಾಗಿದ್ದ ಮತ್ತು ವಿಭಕ್ತಿಗಾಗಿ ಹೆಸರಾಗಿದ್ದಾನೆ. ಅವರಿಬ್ಬರೂ ಒಂದೇ ಕಾಲದಲ್ಲಿ ಬಾಳಿದವರಾದರೂ ಎಲ್ಲಾ ವಿಧದಲ್ಲಿ ಪರಸ್ಪರ ವಿರುದ್ಧರಾಗಿದ್ದರು. ಮೆಲ್ಪಥುರ್ ಆ ಕಾಲದ ಅತ್ಯಂತ ಮಹಾ ವಿದ್ವಾಂಸನಾಗಿ ಋಗ್ವೇದ ಮೀಮಾಂಶ ತರ್ಕ ಮತ್ತು ವ್ಯಾಕರಣಗಳನ್ನು ಕರಗತ ಮಾಡಿಕೊಂಡ ಪಂಡಿತನಾಗಿದ್ದನು. ಪೂಂಥನಮ್ ನಡೆನುಡಿಯಲ್ಲಿ ಮತ್ತು ವಿದ್ಯೆಯಲ್ಲಿ ನಮ್ರನಾಗಿದ್ದನು.

ಪೂಂಥನಮ್ "ಜ್ಞಾನಪ್ಪನ್" ಬರೆದು ಪೂರೈಯಿಸಿದ ನಂತರ ಅದನ್ನು

---

1. ಪಾಂಡಿತ್ಯ

ಮೆಲ್ಪಥುರ್ ಅವರಿಗೆ ತೋರಿಸಿ, ಸಲಹೆ ಸೂಚನೆಗಳನ್ನು ಪಡೆದು ತನ್ನ ಕೃತಿಯನ್ನು ಉತ್ತಮ ಪಡಿಸಬೇಕೆಂಬ ಆಶೆಯುಳ್ಳವನಾಗಿದ್ದನು. ಪೂಂಥನಮ್ ಬಂದು ತನ್ನ ಹಸ್ತಪ್ರತಿಯನ್ನು ವಿದ್ವಾಂಸರಾದ ಮೆಲ್ಪಥುರ್‌ರ ಪಾದಾರವಿಂದಗಳಲ್ಲಿ ಇಟ್ಟು, "ಪೂಜ್ಯರೇ, ಮಲಯಾಳದಲ್ಲಿ ನಾನು ಕೆಲವೊಂದನ್ನು ಗೀಚಿದ್ದೇನೆ, ಅದನ್ನು ಪರಾಮರ್ಶಿಸುವ ಕೃಪೆ ಮಾಡಿ" ಎಂದು ಬೇಡಿಕೊಂಡನು. ಕೊಬ್ಬಿದ ಜಂಬದಿಂದ ಕೂಡಿದ ಮೆಲ್ಪಥರರು, "ಏನಯ್ಯಾ, ಮಲಯಾಳ ಭಾಷೆಯಲ್ಲಿ , ಅದು ಭಾಷೆಯೇ, ಕೀಳು ಭಾಷೆ. ನನಗೆ ಬಿಡುವು ಇಲ್ಲ. ಯಾರಿಗಾದರೂ ತೋರಿಸು ಹೋಗು, ಹೋಗಿ ಸಂಸ್ಕೃತ ಅಧ್ಯಯನವನ್ನು ವಿಭಕ್ತಿಯೊಂದಿಗೆ ಪ್ರಾರಂಭಿಸು" ಎಂದು ಕೊಬ್ಬಿನ ನುಡಿಗಳನ್ನಾಡಿದರು. ನಮ್ರತೆಯಿಂದ ಆದ ಮುಖಭಂಗವನ್ನು ಸಹಿಸಿಕೊಂಡು, ಹೃದಯ ಬಿರಿದವನಾಗಿ, ಗುರುವಾಯೂರಪ್ಪನ ಮುಂದೆ ಕೈಜೋಡಿಸಿಕೊಂಡು ಕಂಬನಿಗೈಯುತ್ತಾ ನಿಂತನು, ಕೆಲವು ವೇಳೆ ಪ್ರಾರ್ಥಿಸಿ, ನಂತರ ಹೊರಟು ಹೋದನು.

ಮರುದಿನ ಮೆಲ್ಪಥುರ್ ಮಂಟಪದಲ್ಲಿ ತಮ್ಮ ಮಾಮೂಲಿ ಸ್ಥಾನದಲ್ಲಿ ಕುಳಿತು "**ನಾರಾಣೀಯಯಮ್**"ದ ರಚನೆಯಲ್ಲಿ ತೊಡಗಿದರು. ಒಂದು ಸಾಲು ಕೂಡ ರಚಿಸಲು ಆಗಲಿಲ್ಲ ! ಅದ್ಭುತ! ಇನ್ನೊಂದು ವಿಸ್ಮಯವೂ ಘಟಿಸಿತು. ಉನ್ನಿ ನಂಬೂದಿರಿಯೊಬ್ಬ ಮಂಟಪಕ್ಕೆ ಬಂದು, ಮೆಲ್ಪಥರುರವರ ಪಕ್ಕದಲ್ಲಿ ಒಂದು ಆಸನ ಹಿಡಿದು ಕುಳಿತುಕೊಂಡು ಮೆಲ್ಪಥರುರವರು ರಚಿಸಿದ ಶ್ಲೋಕಗಳಲ್ಲಿಯ ತಪ್ಪುಗಳನ್ನು ಒಂದರ ನಂತರ ಇನ್ನೊಂದನ್ನು ಎಣಿಸುತ್ತಾ ಕುಳಿತ. ಕಳೆದ ದಿನ ಸಂಭವಿಸಿದ ಘಟನೆಯನ್ನು ತಿಳಿದುಕೊಳ್ಳಲು ಮೆಲ್ಪಥರುರರಿಗೆ ಒಂದಿಷ್ಟು ವೇಳೆ ಹಿಡಿಯಿತು, ಉನ್ನಿ ನಂಬದಿರಿಯು ಭಗವಾನ್ ಗುರುವಾಯೂರಪ್ಪನಲ್ಲದೆ ಬೇರಾರೂ ಅಲ್ಲ ಎಂಬುದನ್ನೂ ಖಚಿತ ಮಾಡಿಕೊಂಡನು. ಆತನ ಮುಂದೆ ಸಾಷ್ಟಾಂಗ ನಮಸ್ಕರಿಸಿದ, ಆದರೆ ಕಣ್ಣು ತೆರೆದಾಗ್ಗೆ ಅಲ್ಲಿ ಉನ್ನಿ ನಂಬೂದರಿಯೇ ಇಲ್ಲ! ಅಶರೀರವಾಣಿಯೊಂದು ಕೇಳಿ ಬಂತು, "ನಡೆ, ಪೂಂಥನಮ್ಮನನ್ನು ಸಂತೃಯಿಸು, ನನಗೆ ಪೂಂಥನಮ್ಮನ ಭಕ್ತಿಯೇ ಮಿಗಿಲೇ ವಿನಃ, ನಿನ್ನ ವಿಭಕ್ತಿಯಲ್ಲ".

ತಕ್ಷಣ ಮೆಲ್ಪಥರು ಪೂಂಥನಮ್ಮನಲ್ಲಿಗೆ ಓಡಿ. ಆತನ ಮುಂದೆ ಕೈ

ಜೋಡಿಸಿದರು. "ಜ್ಞಾನಪ್ಪಾನ್ನ" ಪೂರ್ತಿ ಓದಿದ ನಂತರವೇ "**ನಾರಾಯಣೀಯಂವರ್**" ರಚಿಸುವ ಕಾವ್ಯಶಕ್ತಿ ಪುನಃ ಬಂದಿತು.

ವಾರಿಯರನ ಎಮ್ಮೆ

ಒಂದು ಬಾರಿ ನಮ್ರ ಮತ್ತು ಮುಗ್ಧ ವಾರಿಯರನು ತನ್ನ ಯಜಮಾನನಾದ ವಿಲ್ವಮಂಗಲಂ II–ನನ್ನು ಯಾವ ರೂಪದಲ್ಲಿ ಭಗವಂತನನ್ನು ಆರಾಧಿಸಬೇಕೆಂದು ಕೇಳಿದ. "ಎಮ್ಮೆ ರೂಪದಲ್ಲಿ" ಎಂದು ತಮಾಷೆಗಾಗಿ, ಲಘುವಾಗಿ ಹೇಳಿದರು. ಯಜಮಾನನು ಹೇಳಿದ್ದನ್ನು ಅಕ್ಷರಶಃ ನಂಬಿ ಇದೂ ಒಂದು ಭಗವಂತನ ಅವತಾರ[1]ವಿರಬೇಕೆಂದು ಗ್ರಹಿಸಿದ, ಕೂರ್ಮ, ವರಾಹ ಇತ್ಯಾದಿಗಳಂತೆ ಇದೂ ಒಂದು ಅವತಾರವೆಂದು ಭಾವಿಸಿದ. ಭಗವಂತನನ್ನು ಎಮ್ಮೆಯ ರೂಪದಲ್ಲಿ ಆರಾಧಿಸಲು ಪ್ರಾರಂಭಿಸಿದ. ತನ್ನ ಯಜಮಾನನೊಂದಿಗೆ ಗುರುವಾಯೂರಿಗೆ ಬರುತ್ತಿದ್ದ ಗರ್ಭಗುಡಿಯಲ್ಲಿ ಎಮ್ಮೆಯ ರೂಪದ ದೇವನನ್ನು ಕಾಣುತ್ತಿದ್ದ. ಒಂದು ಸಾರಿ ವಿಲ್ವಮಂಗಲಂ II, ತನ್ನ ಸೇವಕ ವಾರಿಯರನೊಂದಿಗೆ ದೇವಾಲಯದಲ್ಲಿ ಹಾಜರಿದ್ದ, ಶೀವೇಲಿ ನಡೆಯುತ್ತಿತ್ತು. ಆನೆಯ ಮೇಲೆ ಇಡುವುದಕ್ಕಾಗಿ ಉತ್ಸವ ಮೂರ್ತಿಯನ್ನು ತೆಗೆದುಕೊಂಡು ಮುಖ್ಯ ಅರ್ಚಕ ಹೊರಬರುತ್ತಿದ್ದ. ಆದರೆ ಬಾಗಿಲು ದಾಟಲು ಸಾಧ್ಯವಾಗಲಿಲ್ಲ. ಎಲ್ಲರಿಗೂ ದಂಗು ಬಡಿದಂತಾಯಿತು. ಇದನ್ನು ನೋಡುತ್ತ ನಿಂತಿದ್ದ ವಾರಿಯರಿನಿಗೂ ಸೋಜಿಗವಾಯಿತು. "ಅಲ್ಲಾ, ಒಂದಿಷ್ಟು ಓರೆಯಾಗಿ ಬಾಗಿಲ ದಾಟಬೇಕೆಂಬುದು ಮುಖ್ಯ ಅರ್ಚಕರಿಗೆ ತಿಳಿಯುವುದಿಲ್ಲವೋ, ವಿಶಾಲವಾಗಿ ಹರಡಿದ ಎಮ್ಮೆಯ ಕೊಂಬುಗಳು ಒಂದಿಷ್ಟು ವಾಲುವುದರಿಂದ ಸುಲಭವಾಗಿ ಹೊರ ಬರಬಹುದು ಎಂದು ವಿಚಾರಿಸುತ್ತಾ, ಗಟ್ಟಿಯಾಗಿ ಕೂಗಿದ, "ಒಂದಿಷ್ಟು ತಲೆಯನ್ನು ಓರೆಮಾಡಿ ಬಲಕ್ಕಾಗಲಿ ಅಥವಾ ಎಡಕ್ಕಾಗಲಿ". ಮುಖ್ಯ ಅರ್ಚಕನು ಹಾಗೆ ಮಾಡಲು ಉತ್ಸವ ವಿಗ್ರಹವು ಸುಲಭವಾಗಿ ಹೊರಕ್ಕೆ ಬಂದಿತು ! ವಿಲ್ವಮಂಗಲಂ, ತನ್ನ ಆಳನ್ನು ಹಾಗೆ ಕೂಗಿದ್ದಕ್ಕೆ ಗದರಿಸಿದರು. ಆದರೆ ವಾರಿಯರನು ನಮ್ರತೆಯಿಂದ, "ತಿರುಮಣ್ಯ[2]", ಮಹನಿಯರೆ, ಎಮ್ಮೆ

---

1. ಭಗವಂತನು ಹೊಂದುವ ಅವತಾರ
2. ನಂಬೂದಿರಿಯನ್ನು ಗೌರದದಿಂದ ಸಂಬೋಧಿಸುವುದು

ಭಗವಂತನ ತಲೆಯನ್ನು ಒಂದಿಷ್ಟು ವಾಲಿಸಿದರೆ ಕೋಡುಗಳು ಬಾಗಿಲಲ್ಲಿ ತೂರಿಬರುತ್ತವೆ ಎಂಬುದು ಸಾಮಾನ್ಯ ತಿಳುವಳಿಕೆಯಲ್ಲವೇ? ಎಂದು ಉತ್ತರಿಸಿದ. ವಿಲ್ವಮಂಗಲರು ಆಶ್ಚರ್ಯದಿಂದ ಮೂಕರಾದರು.

ಮೆಲ್ಪಥುರ್‌ರ ಸಂಧಿವಾತ

ಈ ಮೊದಲೇ ಹೇಳಿದಂತೆ ಮೆಲ್ಪಥುರರ ಸಂಧಿವಾತವು ಗುಣವಾದ ಸಂಗತಿಯಿಂದ ದೇವಾಲಯವು, ಗುಣಪಡಿಸುವ ಕೇಂದ್ರವಾಗಿ ಎಲ್ಲಡೆಯಲ್ಲೂ ಪ್ರಸಿದ್ಧಿ ಪಡೆಯಿತು. ಅಗಮ್ಯ ಪಂಡಿತ ಮತ್ತು ಒಂದಿಷ್ಟು ಗರ್ವದಿಂದ ಕೂಡಿದ ಮೆಲ್ಪಥುರರು ಯೌವ್ವನದಲ್ಲಿ ಅಂಕಿಯಿಲ್ಲದ ಜೀವನ ನಡೆಸಿದ್ದರ ಫಲವಾಗಿ ಕೇವಲ ತಮ್ಮ ಇಪ್ಪತ್ತೈದನೆಯ ವಯಸ್ಸಿನಲ್ಲಿಯೇ ಸಂದಿವಾತ ರೋಗಕ್ಕೆ ತುತ್ತಾದರು. ಗೊತ್ತಿದ್ದ ಎಲ್ಲಾ ಉಪಚಾರ, ಔಷಧಿಗಳು ನಡೆದರೂ ಎಳ್ಳಷ್ಟೂ ಪ್ರಯೋಜನವಾಗಲಿಲ್ಲ. ಜೀವನವು ಒಂದು ಶಾಪವಾಗಿ ಕಂಡು ಬಂದಿತು. **ಪ್ರಾಯಶ್ಚಿತ್** ಶಾಸ್ತ್ರೋಕ್ತ ಕರ್ಮಗಳನ್ನು ಆಚರಿಸಿದರೂ ಯಾವುದೇ ಗುಣ ಕಂಡು ಬರಲಿಲ್ಲ.

ಕೊನೆಗೆ ಆತ ಗುರುವಾಯೂರಿಗೆ ಬಂದನು. ಈ ವೇಳೆಗಾಗಲೇ ಗುರುವಾಯೂರಿನಲ್ಲಿ ಪೂಂಥನಮ್ ಸತ್ತಮಗನ ಸಾಕ್ಷಾತ್ಕಾರಕ್ಕಾಗಿ **ಭಜನೆ** ನಡೆಸಿದ ಸುದ್ದಿಯನ್ನು ಕೇಳಿದ್ದರೂ ಕೇಳಿರಬಹುದು. ಇಲ್ಲಿಗೆ ಬಂದ ಕೂಡಲೆ ಒಂದು ರೂಪಾಂತರವು ಘಟಿಸಿತು. ತಕ್ಷಣ ಆತನು ಅತ್ಯಂತ ನಿರ್ಮಲ ಮನಸ್ಸಿನಿಂದ ಗುರುವಾಯೂರಪ್ಪನ ಭಜನೆಯಲ್ಲಿ ತೊಡಗಿದ. **ಭೂಲೋಕ ವೈಕುಂಠ** ವಾದ ಈ ಪವಿತ್ರ ಸ್ಥಳದ ವಾತಾವರಣದಿಂದ ಉತ್ಸಾಹಗೊಂಡು 'ನಾರಾಯಣೀಯಮ್' ರಚನೆಗೆ ಪ್ರಾರಂಭಿಸಿದ. ಹಾಗೂ ನೂರನೆಯ ದಿನ ಕಾವ್ಯವನ್ನು ಪೂರ್ತಿಗೊಳಿಸಿದ, "ಆಯುರಾರೋಗ್ಯಸೌಖ್ಯಮ್" ಎಂಬ ಪದಗಳಿಂದ ಕೊನೆಯ ಪದ್ಯವನ್ನು ಪೂರ್ತಿಗೊಳಿಸಿದಾಗ್ಗೆ ಆತನು ಕಾಯಿಲೆಯಿಂದ ಪೂರ್ತಿ ವಾಸಿ ಹೊಂದಿದ್ದೇ ಅಲ್ಲದೆ, ಉತ್ತಮ ಆರೋಗ್ಯದ ಹೊಸ ಜೀವನದಿಂದ ಸಂತಸ ಜೀವನವನ್ನು ಪೂರ್ತಿಗೊಳಿಸುವಂತಹ ಶರೀರವನ್ನು ಹೊಂದಿದ. **"ಆಯುರೋರಾಗ್ಯ ಸೌಖ್ಯಮ್"** ಇದು **"ಕಾಳಿದಿನ"**

ವನ್ನೂ ಸೂಚಿಸುತ್ತದೆ, ಇಂದು 'ನಾರಾಯಣೀಯಂ' ಸಮಾಪ್ತಿಯಾದ ದಿನ. ಅಂದರೆ 28ನೆಯ ವೃಚ್ಚಿಕವ್‌ದ 763, ಅಂದರೆ 27-11-1586 ಪ್ರಸಿದ್ಧಿ ಪಡೆದ ಪಂಡಿತನೂ ಅತ್ಯಂತ ದೊಡ್ಡ ಕವಿಯೂ ಆದ ಈತನ ಕಾಯಿಲೆ ವಾಸಿಯಾದುದು, ಭಕ್ತನಾಗಿ ಈತನು ಬದಲಾದುದು ಪ್ರತಿಯೊಬ್ಬರ ಗಮನ ವನ್ನು ಸೆಳೆಯಿತು. ಎಲ್ಲೆಡೆಯಲ್ಲಿಯೂ ಗುರುವಾಯೂರೆಂದರೆ ಕಾಯಿಲೆ ವಾಸಿಮಾಡುವ ಕೇಂದ್ರವೆಂದು ಪ್ರಸಿದ್ಧಿ ಪಡೆಯಿತು. ಇಂದು ಕೇವಲ ಸಂಧಿವಾತದಿಂದಷ್ಟೇ ಅಲ್ಲ, ಯಾವದೇ ರೀತಿಯ ಶಾರೀರಕ ಮತ್ತು ಮಾನಸಿಕ ಕಾಯಿಲೆ ಹೊಂದಿದವರು ಪರಿಹಾರ ಹೊಂದಲು ಇಲ್ಲಿಗೆ ಧಾವಿಸುತ್ತಾರೆ.

ಕುರೂರಮ್ಮ ಮತ್ತು ವಿಲ್ವಮಂಗಲವ್ II

ಕುರೂರಮ್ಮಾ ಮತ್ತು ವಿಲ್ವಮಂಗಲವ್ II ಇಬ್ಬರೂ ಭಗವಾನ್ ಗುರುವಾಯೂರಪ್ಪನ ನಮ್ರ ಮತ್ತು ಪರಿಶುದ್ಧ ಭಕ್ತರಾಗಿದ್ದರು. ಅವರು ಸಮಕಾಲೀನರು ಮತ್ತು ಚಿಕ್ಕ ದೊಡ್ಡಪ್ಪನ ಮಕ್ಕಳಾಗಿದ್ದರು. ಪೂಂಥನಮ್ಮ ನಂತೆ ಇವರೂ ಭಗವಾನ್ ಗುರುವಾಯೂರಪ್ಪನನ್ನು, ಅನಂತ ಶಿಶುವಾಗಿ, ಬಾಲಕೃಷ್ಣನಂತೆ ಪೂಜಿಸಿದರು. ಕುರೂರಮ್ಮಾ ತಾಯಿಯಾಗುವ ಮೊದಲೇ ವಿಧವೆಯಾದ ಬ್ರಾಹ್ಮಣ ಸ್ತ್ರೀ, ಅಂದು ಅಂಥವರ ಸ್ಥಿತಿ ಸಾಯುವವರೆಗೂ ಶೋಚನೀಯ. ವಿಧವೆಯಾಗಿಯೇ ಜೀವನ ಕಳೆಯ ಬೇಕಿತ್ತು. ಕಾರಣ ಅವಳು "ಬಾಲಕೃಷ್ಣ"ನನ್ನು ದತ್ತು ಮಗುವನ್ನಾಗಿ ಪಡೆದುಕೊಂಡಳು. ಅವಳ ಸತತ ಬೇಡಿಕೆ ಏನೆಂದರೆ,"ಕೃಷ್ಣವರ್ಣದ, ವೇದದ ಮಹಾನ್ ಬ್ರಹ್ಮನು ಶಿಶುರೂಪವಾಗಿ, ಬಾಲ್ಯದ ತುಂಟ ತುಟಿಗಳ ನಡುವೆ ಕೊಳಲು ಹೊಂದಿದ ಶಿಶುವಿನ ರೂಪದಲ್ಲಿ ಭಗವಂತನಿರಲಿ" ಎಂದು ಹಗಲಿರುಳೂ ಬೇಡುತ್ತಿದ್ದಳು. ಭಗವಂತ ಅವಳ ಆಶೆಯಂತೆ ಮಗುವಾಗಿ ಅವಳೊಂದಿಗೆ ಜೀವಿಸಿದ. ಅವಳು ಆತನನ್ನು ಸಂತೈಯಿಸಿದಳು. ಕುಚೇಷ್ಟೆ ಮಾಡಿದಾಗ್ಗೆ ಹೊಡೆದಳು. ಮಗನೆಂದೇ ಸಾಕಿದಳು. ಅವಳು ಮಗ ಬರಲಿಲ್ಲವೆಂದು ಚಿಂತಿಸುತ್ತಿರಲು ಓಡೋಡಿ ಬಂದು ಅವಳನ್ನು ಸಂತೈಯಿಸುತ್ತಿದ್ದ.

ವಿಲ್ವಮಂಗಲನೆದುರು ಪ್ರತಿದಿನದ ಪೂಜೆಯ ಮುಕ್ತಾಯಕ್ಕೆ ಭಗವಂತನು

ಹಾಜರಾಗುತ್ತಿದ್ದ. ಒಂದು ದಿನ ಭಗವಂತ ಬಹಳ ಹೊತ್ತಿನ ನಂತರ ಬಂದ, ಮೈಯಲ್ಲಾ ಕರಿಕಾಡಿಗೆ, ಧೂಳು ತುಂಬಿದೆ. ಯಾಕೆ ಹೊತ್ತಾಯಿತು, ಮೈಯಲ್ಲ ಕೊಳೆ ಏಕೆ ಎಂದು ಪ್ರಶ್ನಿಸಲು "ಕುರೂರಮ್ಮಾ ನನ್ನನ್ನು ಒಂದು ಜಾಡಿಯಲ್ಲಿ ಕೂಡಿಹಾಕಿದ್ದಳು, ಈಗ ತಾನೆ ನನ್ನನ್ನು ಬಿಟ್ಟಳು!" ಎಂದನು ಭಗವಂತನು.

ಭಗವಂತನು ವಿಲ್ವಮಂಗಲನ ತಾಳ್ಮೆಯನ್ನು ಪರೀಕ್ಷಿಸಲು ಇಚ್ಛಿಸಿದನು. ತನ್ನ ಬಾಲ್ಯದ ಚೇಷ್ಟೆಗಳಿಂದ ಆತನನ್ನು ಅನೇಕ ಬಾರಿ ರೇಗಿಸುತ್ತಿದ್ದ-ಒಂದು ದಿನ ಇದರ ಮಿತಿಗಳು ಮೀರಿದವು, ವಿಲ್ವಮಂಗಲನಿಗೆ ತಾಳ್ಮೆ ತಪ್ಪಿತು, ತಾಳೆಯ ಎಲೆಯ ಹಿಂಬದಿಯಿಂದ ಆತನನ್ನು ಬದಿಗೊತ್ತಿದ. ತಾಳೆಯ ಹಿಂಬದಿಯಿಂದ ದೂಡುವುದು ಅವಮಾನಕರ ಭಗವಂತನಿಗೂ ನೋವಾಯಿತು, ತಕ್ಷಣ "ಇನ್ನು ನೀನು ನನ್ನನ್ನು ಅನಂತನ ಕಾಡಿನಲ್ಲಿ ಕಾಣು" ಎಂದು ಹೇಳಿ ಮಾಯವಾದನು. ಯಾತನೆ ಹೊಂದಿದ ವಿಲ್ವಮಂಗಲನು ಅನಂತನ ಕಾಡನ್ನು ಹುಡುಕುತ್ತಾ ಹೊರಟ, ಕೊನೆಗೆ ಪೂರ್ತಿಯಾಗಿ ಆಯಾಸಗೊಂಡು, ಒಂದು ಅರಣ್ಯದ ಹೊರಭಾಗಕ್ಕೆ ಬಂದನು. ಆಗ್ಗೆ ಕಾಲಿನ ಗೆಜ್ಜೆಯ ನಿನಾದವು ಆತನ ಹೃದಯಕ್ಕೆ ಕೇಳಿಸಿತು. ಧ್ವನಿಯನ್ನು ಅನುಸರಿಸಿ ನಡೆದು "ಅನಂತ ಶಾಯಿ[1]" ರೂಪದಲ್ಲಿ ಭಗವಂತನು ಆತನಿಗೆ ದರ್ಶನವನ್ನಿತ್ತ.

ಗುರುವಾಯೂರಿನ ಧನ್ಯ ಗಾಯಕ ಚೆಂಬೈ

ಚೆಂಬೈ ವೈದ್ಯನಾಥ ಭಾಗವತರರ ಕಥೆ ರಮಣೀಯವಾಗಿದೆ. ಜೀವನ ದುದ್ದಕ್ಕೂ ತಮ್ಮ ಕಂಚಿನ ಕಂಠದಿಂದ ಅಮೋಘವಾಗಿ ಹಾಡುವಂತಹ ಗಾಯಕರಿವರು. ತಮ್ಮ ಅಂತ್ಯಕಾಲದ ಕೆಲವೇ ಗಂಟೆಗಳ ಪೂರ್ವದಲ್ಲಿ ಅಮೋಘ ಗಾಯನ ಕಚೇರಿ ನಡೆಸಿದಂಥ ಮಹನೀಯರು. ಭಗವಂತನಲ್ಲಿಯ ಆಳವಾಗಿ ಬೇರೂರಿದ ಗಾಯಕನ ನಂಬುಗೆಯಿಂದ, ಭಗವಂತನ ಆಶೀರ್ವಾದ ದಿಂದ ಇದೆಲ್ಲ ಸಾಧ್ಯ. 1936ರಲ್ಲಿ ನಡೆದ ಒಂದು ಘಟನೆ. ಆತ ಒಂದು ಸಂಗೀತ ಕಚೇರಿಯನ್ನು ಪ್ರಾರಂಭಿಸಬೇಕಿತ್ತು, ಅಯ್ಯೋ ! ಚಕಾರವನ್ನೆತ್ತಲೂ

---

1. ದೇವಲೋಕದ ಸರ್ಪದ ಮೇಲೆ ಮಲಗಿದ

ಕಂಠ ಬಾರದು ! ರಾಗಲಾಪನೆಯಂತೂ ಬಹಳ ದೂರ ! ಇಡೀ ವಾತಾವರಣ ದಿಗ್ಮೂಢವಾಯಿತು. ದಾರಿಕಾಣದಾಯಿತು. ಚೆಂಬೈ ಭಗವಾನ್ ಗುರುವಾಯೂರಪ್ಪನ ಅನನ್ಯ ಭಕ್ತ, ಗುರುವಾಯೂರಿಗೆ ಧಾವಿಸಿ ರುದ್ರತೀರ್ಥ ದಲ್ಲಿ ಮಿಂದು ಮಡಿ ಬಟ್ಟೆಗಳಿಂದಲೇ ದೇವಾಲಯವನ್ನು ಪ್ರವೇಶಿಸಿ ಮುಂದೆ ಸಾಷ್ಟಾಂಗ ಹಾಕಿ, ಆಳವಾದ ಭಕ್ತಿಯಿಂದ ಬೇಡಿಕೊಂಡ. ಭಗವಂತನ ಮುಂದಿರುವ ಮಂಟಪದಲ್ಲಿ ದೇವರಿಗೆ ಎದುರಾಗಿ ಕೈಮುಗಿದುಕೊಂಡು ಕುಳಿತ. ಅಧ್ಭುತ ಸಂಗತಿಯೊಂದು ಈಗ ಘಟಿಸಿತು. ಈಗ ಹಾಡಬಹುದು ಎನಿಸಿತು ಗಾಯಕನಿಗೆ. ಹಾಡಿದ, ಹಾಡಿನ ನಂತರ ಮತ್ತೊಂದು ಹಾಡು, ಇಡೀ ದೇವಾ ಲಯವನ್ನು ಸಂಗೀತದಿಂದ ಮತ್ತು ಭಕ್ತಿಯಿಂದ ತುಂಬಿ ಹೋಗುವಂತೆ ಹಾಡಿದ. ಅಂದಿನಿಂದ ಅವರು ತಪ್ಪದೆ ತಮ್ಮ ಕಾರ್ಯಕ್ರಮದಲ್ಲಿ ಭಗವಾನ್ ಗುರುವಾಯೂರಪ್ಪನ ಮಹಿಮೆಯನ್ನು ಕೊಂಡಾಡುವ '**ನಾರಾಯಣೀ ಯಮ್**'ದಿಂದ ಆಯ್ದ ಕೆಲವುಪದ್ಯಗಳನ್ನು ಹಾಡುತ್ತಿದ್ದರು. "ಅಗ್ರೆಪಶ್ಯಾಮಿ[1]" ಎಂದು ಸಮಾಪ್ತಿಯಾಗುವ "**ನಾರಾಯಣೀಯಮ್**" ದ ಹಾಡಿನೊಂದಿಗೆ ಗಾಯನ ಕಾರ್ಯಕ್ರಮವನ್ನು ಮುಕ್ತಾಯಗೊಳಿಸುತ್ತಿದ್ದರು. ಶ್ರಾವಕರ ಹೃದಯಗಳನ್ನು ಭಕ್ತಿಯಿಂದ, ಮಹಿಮೆಯಿಂದ ತುಂಬುತ್ತಿದ್ದರು.

ಅನಂತರಾಮ ದೀಕ್ಷಿತರ ಪ್ರವಚನಗಳು

ಚೆಂಬೈ ತಮ್ಮ ಅಮೋಘವಾದ ಕಂಠಶ್ರೀಯಿಂದ ಶ್ರೋತೃಗಳನ್ನು ಸಂತೈಯಿಸಿ ಭಕ್ತಿಗೀತೆಗಳಿಂದ ಭಕ್ತಿಯನ್ನು ಜನತೆಯಲ್ಲಿ ತುಂಬುತ್ತಿದ್ದರು. ಸೆಂಕಲಿ ಪುರಂ ಅನಂತರಾಮ ದೀಕ್ಷಿತರು ಅದೇ ಕಾರ್ಯವನ್ನು ತಮಿಳಿನಲ್ಲಿ ತಮ್ಮ ಪ್ರವಚನಗಳ ಮೂಲಕ ಮಾಡಿದ್ದಾರೆ. ಯಾವುದೋ ಒಂದು ಕಾಯಿಲೆಯಿಂದಾಗಿ ಸಾರ್ವಜನಕರೆದುರಿಗೆ ಅವರು ಕಾಣಿಸಿಕೊಳ್ಳದಂತಾಯಿತು. ಪ್ರವಚನಗಳನ್ನು ನಿಲ್ಲಿಸಲೇ ಬೇಕಾಯಿತು. ಭಗವಾನ್ ಗುರುವಾಯೂರಪ್ಪನ ಶಿಷ್ಯನಾದ ದೀಕ್ಷಿತರು ಪ್ರತಿನಿತ್ಯ ಭಜನೆಗಳನ್ನು ಪ್ರಾರಂಭಿಸಿದರು, ಕೆಲವೇ ತಿಂಗಳುಗಳಲ್ಲಿ ಅವರು ಪೂರ್ತಿಯಾಗಿ ಗುಣಹೊಂದಿದರು. ನಂತರ ಇಡೀ ತಮಿಳುನಾಡು

---

1. **अग्रे पश्यामि** ನಾರಾಯಣೀಯಮ್ ದಶಕಮ್ 100, ಶ್ಲೋಕ–1

ಮತ್ತು ಉತ್ತರ ಭಾರತದ ಅನೇಕ ನಗರಗಳನ್ನು ಸಂಚರಿಸಿ ಭಗವಾನ್ ಗುರುವಾಯೂರಪ್ಪನ ಮಹಿಮೆಯನ್ನು ದೇವಪ್ರೇರಿತ ಧರ್ಮ ಪ್ರಸಾರಕನಂತೆ ಪ್ರಚಾರಪಡಿಸಿದರು.

ತಂಪುರತ್ತಿಯವರ ಸಂಧಿವಾತ

ಮೆಲ್ಪಥುರರು ಸಂದಿವಾತ ಪೀಡಿತರಾದಾಗ್ಗೆ ಕೇವಲ ಇಪ್ಪತ್ತರ ತರುಣರು. ಆದರೆ ತುನ್ನಿಅನುಜತಿ ತಂಪುರತ್ತಿ ಝುಮೊರಿನ್ ಕುಟುಂಬದ ಸದಸ್ಯೆ ಹೆಳವಿಯಾದಾಗ್ಗೆ ವಯಸ್ಸು ಎಂಭತ್ತಾಗಿತ್ತು! ಎದ್ದು ನಿಲ್ಲಲಾರದಷ್ಟು ಸಂಧಿವಾತಾವು ತೀವ್ರತರವಾಗಿತ್ತು. 1890 ವರ್ಷದ ಯಾವುದೋ ಒಂದು ಮಾಸದಲ್ಲಿ ಅವಳನ್ನು ಗುರುವಾಯೂರಿಗೆ ಡೋಲಾದಲ್ಲಿ ಹೊತ್ತು ತಂದರು. ಎಲ್ಲಾ ಧಾರ್ಮಿಕ ಕ್ರಿಯೆಗಳೊಂದಿಗೆ ಅವಳು ಭಜನೆಯನ್ನು ಸುರುಮಾಡಿದಳು ಒಂದು ವಾರದೊಳಗಾಗಿ ಆ ಮಹಿಳೆ ನಡೆಯಲು ಶಕ್ತಳಾಗಿ ಯಾರ ಸಹಾಯವೂ ಇಲ್ಲದೆ ಗುರ್ಭಗುಡಿಯ ಸುತ್ತ ಪ್ರದಕ್ಷಣೆ ಮಾಡಲು ಸಮರ್ಥಳಾದಳು!

ಮನೆಯಲ್ಲಿ ತಾಯಿಯಿಂದ ಮಗುವಿಗಾಗಿ ಭಜನೆ

1940 ರಲ್ಲಿ ಒಂದು ದಿನ, ಊಟಿಯಲ್ಲಿಯ ದಂಪತಿಗಳ ಮೂರುವರ್ಷದ ಹಸುಳೆಗೆ ಭಯಂಕರವಾದ ಪೋಲಿಯೋ ರೋಗ ತಗುಲಿತು. ಲಭ್ಯವಿದ್ದ ಎಲ್ಲಾ ಅಲೋಪತಿ ಚಿಕಿತ್ಸೆಗಳನ್ನು ಅವರು ಮಾಡಿದರೂ ಮಗುವಿನ ಸ್ಥಿತಿ ಉಲ್ಬಣಿಸಿ ನಿರಾಶಾದಾಯಕವಾಯಿತು, ದಾರಿಕಾಣದ ಆ ಮಗುವಿನ ತಂದೆ ತಾಯಿಗಳು ಅವನನ್ನು ಒಬ್ಬ ಆರ್ಯುವೇದ ಪಂಡಿತನಲ್ಲಿಗೆ ಕರೆದೊಯ್ದರು, ಶೀಘ್ರದಲ್ಲಿಯೇ ಮಗುವಿನ ಆಯುಷ್ಯ ತೀರುತ್ತದೆ ಎಂದು ನಿರ್ಧರಿಸಿದ ಆ ವೈದ್ಯ, ಈ ಸಂಗತಿಯನ್ನು ಆ ದುರ್ದೈವಿಗಳಿಗೆ ಬಿಡಿಸಿ ಹೇಳಲಾರ. ಭಗವಾನ್ ಗುರುವಾಯೂರಪ್ಪನ ಮುಂದೆ ನಾಲ್ವತ್ತೊಂದು ದಿನಗಳ ಭಜನೆಯನ್ನು ಮಾಡಲು ಹೇಳಿದ. ಮಗುವಿನ ಸ್ಥಿತಿ ಎಷ್ಟೊಂದು ಕೆಟ್ಟಿತ್ತೆಂದರೆ ಗುರುವಾಯೂರಿಗೆ ಪ್ರಯಾಣವೂ ಅಸಾಧ್ಯ, ಕಾರಣ ನಿಮ್ಮ ಮನೆಯಲ್ಲಿಯೇ ಭಜನೆಯ:ನ್ನು ಮಾಡಿರಿ

ಎಂದು ಹೇಳಿ ಕಳುಹಿಸಿದ. ಭಗವಾನ್ ಗುರುವಾಯೂರಪ್ಪನ ಮುಂದೆ ದೀಪ ಹಚ್ಚಿ, ತಾಯಿಯ ತೊಡೆಯ ಮೇಲೆ ಮಗುವನ್ನಿರಿಸಿಕೊಂಡು ಭಜಿಸಲು ಹೇಳಿದ. ವೈದ್ಯ ಹೇಳಿದ ಭಜನೆಯನ್ನು ತಕ್ಷಣ ಪ್ರಾರಂಭಿಸಿದರು, ಮಗುವಿಗೆ ಕಾಯಿಲೆ ಗುಣವಾಗತೊಡಗಿತು. ತಾಯಿಯು ಭಜನೆಯ ಗಡವನ್ನು ತೀರಿಸುವುದರೊಳಗಾಗಿ, ಮಗು ಆಡ್ಡಾಡಲು ಪ್ರಾರಂಭಿಸಿತು. ಮಗುವನ್ನು ಕರೆದುಕೊಂಡು ಹಿಂದೆ ಉಪದೇಶಿಸಿದ್ದ ವೈದ್ಯನಲ್ಲಿಗೆ ಮುಂದಿನ ಉಪಚಾರ ತಿಳಿಯುವುದಕ್ಕಾಗಿ ಬಂದರು. ಅವರಿಗೆ ಎಷ್ಟೊಂದು ಸಂತೋಷವಾಗಿತ್ತೆಂದರೆ ವೈದ್ಯನಿಗೆ ಕೊಡಲ! ಸಾಕಷ್ಟು ಹಣವನ್ನೂ ತಂದಿದ್ದರು. ವೈದ್ಯರು ದೃಶ್ಯವನ್ನೇ ನಂಬದಾದರು ಆದರೆ ಅದರ ಸಿದ್ಧಾಂತ ಪ್ರತ್ಯಕ್ಷವಾಗಿಯೇ ಎದುರಿಗಿದೆ, ಸಾಕ್ಷಾತ್ ಮಗುವೇ ಎದುರಿಗೆ ನಿಂತಿದೆ! ಯಾವದೇ ಹಣವನ್ನು ಪಡೆಯಲು ನಿರಾಕರಿಸಿ, ಕೈಮುಗಿದ ನಿಮ್ಮ ಮಗುವನ್ನು ಗುಣಪಡಿಸಿವದನು ನಾನಲ್ಲ, ಭಗವಾನ್ ಗುರುವಾಯೂರಪ್ಪನು. ಆತನಿಗೆ ನಿಮ್ಮ ಕಾಣಿಕೆ ಸಲ್ಲಿಸಿ ಮತ್ತು ಗುರುವಾಯೂರಿಗೆ ಹೋಗಿ ಆತನನ್ನು ಭಜಿಸಿ, ಕಾಣಿಕೆಯನ್ನು ಆತನಿಗೆ ಸಲ್ಲಿಸಿ ಎಂದು ಹೇಳಿದನು.

ಸ್ವಾಮಿಯವರ ಕಾರ್ತಿಕ

ಒಂದು ಬಾರಿ ತಿಕ್ಕಾಡದ ಸ್ವಾಮಿಯವರಿಗೆ ಗಂಡಮಾಲೆ ರೋಗ ಅಂಟಿತು. ಗೊತ್ತಿದ್ದ ಎಲ್ಲಾ ಚಿಕಿತ್ಸೆಗಳನ್ನೂ ಮಾಡಿದ್ದಾಯಿತು. ಕಾಯಿಲೆ ಹೆಚ್ಚಿತೇ ವಿನಃ ಕಡಿಮೆಯಾಗಲಿಲ್ಲ. ಎಲ್ಲಾ ಔಷಧಿಗಳೂ, ನಿರುಪಯುಕ್ತವೆಂದು ಸಿದ್ಧವಾದ ನಂತರ ಸ್ವಾಮಿಯವರು ಗುರುವಾಯೂರಿಗೆ ಬಂದು, ಪ್ರಾರ್ಥನೆ ಪ್ರಾರಂಭಿಸಿದರು. ಕೆಲವು ತಿಂಗಳುಗಳವರೆಗೆ ಅವರು ಭಜನೆಯನ್ನು ನಡೆಸಿದರು. ಈ ಅವಧಿಯಲ್ಲಿ ಭಗವಂತನ ಕಿಂಕರವಾಗಿ ಸೇವೆ ಸಲ್ಲಿಸಿದರು. ಭಜನೆಯ ಅವಧಿಯ ಅಂತ್ಯದಲ್ಲಿ ಪೂರ್ತಿಯಾಗಿ ಕಾಯಿಲೆಯಿಂದ ಮುಕ್ತಿ ಹೊಂದಿದರು. ಕೃತಾರ್ಥ ಸೇವಾರ್ಥವಾಗಿ ಪೂರ್ವದ ಆವರಣದ ಗುಂಟ ಕಾರ್ತಿಕ ಹಚ್ಚಲು ಕಾರ್ತಿಕ ಮಂಟಪ[1] ಕಟ್ಟಿಸಿದರು. ಪೂರ್ತಿಯಾಗಿ ಕಾರ್ತಿಕ

1. ಕಾರ್ತಿಕ ಹಚ್ಚಲು ಪಣತಿಗಳನ್ನಿಡುವ ವ್ಯವಸ್ಥೆ.

ವನ್ನು ಹಚ್ಚಿದಾಗ್ಗೆ ಭಗವಂತನ ಮಹಿಮೆಯನ್ನು ಹೊಳೆಯುವ ಬತ್ತಿಗಳಲ್ಲಿ ಹಾಡುತ್ತಿರುವಂತೆ ಕಂಡು ಬರುತ್ತದೆ.

ಆರೋಗ್ಯ ಮತ್ತು ಸಂಪತ್ತು

ಉರಿಮದೋಮ್ ಬ್ರಾಹ್ಮಣನಿಗೆ ತೀವ್ರವಾಗಿ ಸಂಧಿವಾತವಾಯಿತು. ಸ್ಥಳದಿಂದ ಸ್ಥಳಕ್ಕೆ 'ಉರಿ' ಯಲ್ಲಿ ಅಂದರೆ ನಾರಿನಿಂದ ಜೋತುಬಿಟ್ಟ ಬುಟ್ಟಿಯಲ್ಲಿ ಆತನನ್ನು ಸಾಗಿಸಬೇಕಾಗಿತ್ತು. ಅತನ ಮಧೋಮ್-ವಾಸಸ್ಥಾನವೇ ಉರಿ ಬುಟ್ಟಿಯಾಗಿತ್ತು, ಆದ್ದರಿಂದ ಆತನನ್ನು ಉರಿಮಧೋಮ್ "ಬುಟ್ಟಿವಾಸ" ಎಂದು ಕರೆಯುತ್ತಿದ್ದರು. ಕಾಯಿಲೆಯನ್ನು ಗುಣಪಡಿಸುವ ಆತನ ಸರ್ವ ಪ್ರಯತ್ನಗಳೂ ನಿರರ್ಥಕವಾಗಲು ಆತನನ್ನು ಗುರುವಾಯೂರಿಗೆ ಹೊತ್ತು ತಂದರು. ಗುಣವಾದ ನಂತರ ಭಗವಂತನಿಗೆ ಅರ್ಪಿಸಲು ಆತನು ತನ್ನೊಂದಿಗೆ ಚಿನ್ನ ಬೆಳ್ಳಿಯಿಂದ ತುಂಬಿದ ಒಂದು ಚೀಲವನ್ನು ತನ್ನೊಡನೆ ತಂದಿದ್ದನು. ಆಳುಗಳು ಆತನನ್ನು ಸ್ನಾನಕ್ಕಾಗಿ ನೀರಿಗಿಳಿಸಿದಾಗಲೂ ಆತನ ಕಣ್ಣುಗಳು ಚೀಲದತ್ತ ಇರುತ್ತಿದ್ದವು. ಓರ್ವ ಆಪರಿಚಿತ ಸರ್ಪನೆ ಬಂದು ಚೀಲವನ್ನು ಎತ್ತಿಕೊಂಡು ಓಡಿದ. ತನ್ನ ಶರೀರದ ದೌರ್ಬಲ್ಯವನ್ನೆಲ್ಲ ನೆನಪು ಹಾರಿದ ಬುಟ್ಟಿವಾಸನು, ತಡೆಯಲು ಬಂದ ಸೇವಕನನ್ನು ದೂಡಿ, ಅಪರಿಚಿತನನ್ನು ಹಿಡಿಯಲು ಓಡಿದ! ಅಶರೀರವಾಣಿಯಿಂದಾಗಿ ಓಟವನ್ನು ನಿಲ್ಲಿಸಿದ, "ತಡೆ ತಡೆ, ತೃಪ್ತಿಹೊಂದು, ನೀನು ಆರೋಗ್ಯಕ್ಕಾಗಿ ಪ್ರಾರ್ಥಿಸಿದಿ, ಅತನು ಹಣ ಕ್ಕಾಗಿ ಬೇಡಿದ, ಇಬ್ಬರಿಗೂ ನಿಮ್ಮ ಇಚ್ಛಾನುಸಾರ ದೊರೆತಿದೆ" ಎಂದು ಅಶರೀರವಾಣಿಯಾಯಿತು.

ಬುಟ್ಟಿವಾಸನ ಸಂಪತ್ತನ್ನು ಅಪಹರಿಸಿದವ ಒಬ್ಬ ಬಡ ಬ್ರಾಹ್ಮಣ, ಹೊಟ್ಟೆಗೆ ಹಿಟ್ಟಿಲ್ಲದೆ ಬಹಳ ತಾಪತ್ರಯ ಪಡುತ್ತಿದ್ದ. ಒಂದು ದಿನ ಆತನ ಕನಸಿನಲ್ಲಿ ಭಗವಾನ್ ಗುರುವಾಯೂರಪ್ಪನು, "ನೀರಿನ ಕೆರೆಗೆ ಹೋಗು, ಅಲ್ಲಿ ಒಂದು ಚೀಲವಿದೆ. ಅದನ್ನು ತೆಗೆದುಕೊಂಡು, ಬಾಳು," ಎಂದಂತಾಯಿತು, ಭಗವಂತನ ನಿರ್ದೇಶನದಂತೆ ನಡೆಯಲು ಆತನು ಸಂದೇಹ ಪಡಲಿಲ್ಲ!

ಕೊಟ್ಟವಚನವನ್ನು ಪಾಲಿಸಿ

ಕೊಟ್ಟ ವಚನ ಎಷ್ಟೇ ಚಿಕ್ಕದಿರಲಿ ಪ್ರತಿಯೊಬ್ಬನೂ ಅದರಂತೆ ನಡೆಯ

ಬೇಕು. ಇದನ್ನು ಭಗವಾನ್ ಗುರುವಾಯೂರಪ್ಪನು ಒತ್ತಿ ಹೇಳುತ್ತಾನೆ. ನೆನಪು ಹಾರುವುದಕ್ಕೆ ಯೋಗ್ಯ ಶಿಕ್ಷೆ ಕಾಯ್ದಿದೆ, ಮದ್ರಾಸಿನ ಗವರ್ನರಾಗಿದ್ದಾಗ ಶ್ರೀಪ್ರಕಾಶ ಅವರಿಗೆ ಒಂದು ಬಾರಿ ಜ್ವರ ಬಂತು, ಹಾಸಿಗೆ ಬಿಟ್ಟು ಏಳದಂತಾಗಲು, "ಗುಣವಾಗಲು ಗುರುವಾಯೂರಿಗೆ ಹೋಗಿ ಭಗವಂತನ **ದರ್ಶನ** ಪಡೆಯುವೆ" ಎಂದು ಹರಕೆ ಹೊತ್ತರು. ಗುಣವಾಗಲು ತಮ್ಮ ಕಚೇರಿಯ ನೂರೆಂಟು ಕಾರ್ಯ ವ್ಯವಹಾರಗಳಲ್ಲಿ ಹರಕೆ ನೆನಪೇ ಹಾರಿಹೋಯಿತು. ಆದರೆ ಭಗವಂತ ನೆನಪು ಹಾರುವುದುಂಟೇ! ಗವರ್ನರರು ಪುನಃ ಜ್ವರ ಪೀಡಿತರಾದರು, ಹರಕೆ ಜ್ಞಾಪಕವಾಗಲಿಲ್ಲ, ಪುನಃ ಜ್ವರ, ಇದರಿಂದಾಗಿ ಜ್ಞಾಪಕವಾಯಿತು. ಗುಣವಾದ ನಂತರ ಯಾವ ಸೂಚನೆಯನ್ನು ಕೊಡದೆ ಹರಕೆ ತೀರಿಸಲು ಗುರುವಾಯೂರಿಗೆ ಧಾವಿಸಿದರಂತೆ.

ಪ್ರಕರಣ 5

ಕೇಂದ್ರ ಪೀಠ

ಮೊದಲಿಗೆ ಗುರುವಾಯೂರು ಥ್ರಿಕ್ಕನವಃಥಿಲಕವ್‌ದ ಒಂದು ಉಪಾಂಗವಾಗಿತ್ತು, ನಂತರ ಸ್ವತಂತ್ರವಾಯಿತು. ಇತರ ಸಣ್ಣ ದೇವಾಲಯಃಗಳನ್ನು ತನ್ನ ಆಧೀನಕ್ಕೆ ತೆಗೆದುಕೊಳ್ಳಲು ಸುರುಮಾಡಿತು. ಈ ದೇವಾಲಯಗಳನ್ನು ಮೊದಲು ಕೆಲವೊಂದು ನಂಬೂದರಿ ಕುಟುಂಬಗಳು ನೋಡಿಕೊಳ್ಳುತ್ತಿದ್ದವು, ಆದರೆ ಕಾರಣಾಂತರದಿಂದ ಅವರ ವಂಶವಿಲ್ಲದಂತಾಗಲು ಅವು ಗುರುವಾಯೂರಿನ ದೇವಾಲಯಗಳ ಅಧಿಪತ್ಯಕ್ಕೆ ಬಂದವು.

1 ನಾರಾಯಣ ಕುಲಂಗರ ದೇವಾಲಯ

ಮಮ್ಮಿಯೂರ ದೇಶದಲ್ಲಿ ಗುರುವಾಯೂರಿನ ಉತ್ತರಕ್ಕೆ 1 ಕಿ. ಮೀ. ದೂರದಲ್ಲಿ ಈ ದೇವಾಲಯವಿದೆ. ಇಂದು ಕಾಣೆಯಾದ ನೆಲ್ಲಿಯುರ ಕುಟುಂಬಕ್ಕೆ ಈ ದೇವಾಲಯವು ಸಂಬಂಧಿಸಿತ್ತು. ಇಲ್ಲಿ ಆಚರಿಸುತ್ತಿದ್ದ ಮೀನ ಪ್ಪುರಮ್[1] ಉತ್ಸವವು ಮೈಸೂರಿನ ಟೀಪುವಿನ ದಾಳಿಯ ನಂತರ ನಿಂತಿತು. ಆದರೆ ಮಕರ[2] ತಿಂಗಳಿನ ಮೊದಲಿನ ಹತ್ತು ದಿನಗಳಲ್ಲಿ ದೇವಾಲಯದ ಕೊನೆಯ ಪೂಜೆಯಾದ ಪಟ್ಟುಥಲಪ್ಪೋರಿಯೊಂದಿಗೆ ಇಂದಿಗೂ ನಡೆಯುತ್ತದೆ.

---

1. ಮೀನ : ಮಾರ್ಚಿ - ಏಪ್ರಿಲ್‌ನಲ್ಲಿ ಬರುವ ಪೂರಮ್ - ಉತ್ಸವ
2. ಜನವರಿ—ಫೆಬ್ರುವರಿ

2 ಥಮುರಯೂರ್ ದೇವಾಲಯ

ಗುರುವಾಯೂರು ದೇವಾಲಯದ ಉತ್ತರಕ್ಕೆ ಎರಡು ಕಿ. ಮೀ. ದೂರದಲ್ಲಿ ಈ ದೇವಾಲಯವಿದೆ. ಅದೇ ಹೆಸರಿನ ಕುಟುಂಬಕ್ಕೆ ಈ ದೇವಾಲಯವು ಸೇರಿತ್ತು. ಇಲ್ಲಿಯ ಅಧಿದೇವತೆ, ಐಯ್ಯಪ್ಪನ್. ಈ ದೇವಾಲಯದ ಆಡಳಿತ ಮತ್ತು ಉತ್ಸವಗಳನ್ನು ಗುರುವಾಯೂರು ದೇವಸ್ಥಾನವು ನಡೆಸುತ್ತದೆ.

3 ಅನೂರ್ ದೇವಾಲಯ

ಗುರುವಾಯೂರು - ಟ್ರಿಚೂರ ದಾರಿಯಲ್ಲಿ ಮಂಡೂರಿನಲ್ಲಿ ಈ ದೇವಾಲಯವಿದೆ. ಇಲ್ಲಿಯ ಅಧಿದೇವತೆ ಐಯ್ಯಪ್ಪನ್, ತಿರುವತ್ತಿರ[1] ದಿನದಂದು ಪ್ರತಿವರ್ಷ "ಅರತ್ತು" ಗಾಗಿ ಅಯ್ಯಪ್ಪನು ಗುರುವಾಯೂರಿಗೆ ಬರುತ್ತಿದ್ದನೆಂಬುದು ನಂಬಿಕೆ. ಟಿಪ್ಪುವಿನ ದಾಳಿಯ ನಂತರ ಇದು ನಿಂತಿತು. ಇಲ್ಲಿಯ ದೇವತೆಗೆ ಮಕರ ಮಾಸದ ಮೊದಲಿನ ಒಂಭತ್ತು ದಿನಗಳು ಪವಿತ್ರ, ಪ್ರತಿ-ದಿನವೂ ನಿರ್ಮಾಲ[2] ನಡೆಯುತ್ತದೆ. 10ನೆಯ ದಿನ ನಡೆಯುವ ನಿರ್ಮಾಲವನ್ನು ಗುರುವಾಯೂರಿನ ದೇವಸ್ವಂ, ದೇವಸ್ಥಾನವು – ಸಲ್ಲಿಸುತ್ತದೆ.

4 ಪೆರುಮನೂರ ಅಥವಾ ನೆರ್ಮನೂರ ದೇವಾಲಯ

ಕುನ್ನಿಸೆರಿ ಬಳಿಯ ವರಕ್ಕುಲಮ್ ವಲ್ಲಪ್ಪನಾಡಿನಲ್ಲಿ ಈ ದೇವಾಲಯವಿದೆ. ಪರಕ್ಕುಲವ್‌ದ ಶಬ್ದಾರ್ಥ ಬಂಡೆಗಳ ಕೆರೆ ಎಂದು. ಕೆರೆಯ ಪೂರ್ವದ ದಡದಲ್ಲಿ ದೇವಾಲಯವಿದೆ. 14ನೆಯ ಶತಮಾನದ ಮಧ್ಯದಲ್ಲಿ ಝಮೊರಿನ್‌ರಿಂದ ಈ ದೇವಾಲಯವು ಗುರುವಾಯೂರಿಗೆ ಕೊಟ್ಟಂತೆ ನಂಬಲಾಗಿದೆ. ಇಲ್ಲಿಯ ಅಧಿದೇವತೆ ಶಿವನು, ಶಿವರಾತ್ರಿಯು ಇಲ್ಲಿಯ ಮಹತ್ವದ ಉತ್ಸವವಾಗಿದೆ.

---

1. ಷಷ್ಠಿ
2. ಇಡೀ ಗರ್ಭಗುಡಿಯನ್ನು ಪುಷ್ಪಹಾರಗಳಿಂದ ಅಲಂಕರಿಸುವುದು

5 ಮಂಗಮುಚೀರ್ ದೇವಾಲಯ

ಗುರುವಾಯೂರಿನಿಂದ ಮೂರು ಮೈಲಿ ದೂರದಲ್ಲಿರುವ **ಅನ್ನಕರಹಳ್ಳಿ** ಯಲ್ಲಿ (ಪೆರುವಲ್ಲೂರ) ಈ ದೇವಾಲಯವಿದೆ. ಶ್ರೀಕೃಷ್ಣನು ಇಲ್ಲಿಯ **ಅಧಿ** ದೇವತೆ **ಅಷ್ಟಮಿ ರೋಹಿಣಿ**ಯು ಇಲ್ಲಿಯ ಮಹತ್ವದ ಉತ್ಸವ.

6 ಥಲಕೊಟ್ಟುಕಾರ ದೇವಾಲಯ

ಕುನ್ನಮಕುಲಮ್‌ನಲ್ಲಿ ಈ ದೇವಾಲಯವಿದೆ. ಇಲ್ಲಿಯ ಮಹತ್ವದ ದೇವತೆ ಶಿವ. ಒಂದೇ ಆವರಣದೊಳಗೆ ಎರಡು ಗರ್ಭಗುಡಿಗಳಿವೆ. ಒಂದು **ಸ್ವಯಂಭೂ.** ಇನ್ನೊಂದು ಲಿಂಗಪ್ರತಿಷ್ಠಿತ. ಎರಡರಲ್ಲೂ ಪೂಜೆಗಳನ್ನು ಒಬ್ಬ ಅರ್ಚಕರೇ ನಡೆಸುತ್ತಾರೆ. ಇತರ ಶಿವ ದೇವಾಲಯದಲ್ಲಿಯಂತೆ. ಶಿವ ರಾತ್ರಿಯು ಇಲ್ಲಿ ಬಹಳ ಪವಿತ್ರವಾದ ದಿನ, ಅತ್ಯಂತ ವಿಜೃಂಭಣೆಯಿಂದ ಉತ್ಸವವನ್ನು ಆಚರಿಸಲಾಗುತ್ತದೆ.

ಪ್ರಕರಣ 6

ಬೆಂಕಿ ಅನಾಹುತ ಮತ್ತು ಪುನರ್ನಿರ್ಮಾಣ ಕಾರ್ಯ

ಆ ಭಯಂಕರ ದುರ್ಘಟನೆಯು 29 ನವ್ಹಂಬರ್ 1970ರ ರಾತ್ರಿ ಸಂಭವಿಸಿತು. **ಏಕಾದಶಿ ಕಾರ್ತಿಕದ** ಉತ್ಸವದ ದಿನಗಳು. ಈ ಹಬ್ಬದಲ್ಲಿ ಪ್ರತಿ ದಿನದ ಕಾರ್ತಿಕವನ್ನು, ಕೆಲವೊಂದು ಸಂಘ, ಸಂಸ್ಥೆಗಳು, ಸ್ಥಾನಿಕ ಸರಕಾರಿ ಕಚೇರಿಗಳು. ವ್ಯಕ್ತಿಗಳು ದೇವಾಲಯದ ಅಧಿಕಾರಿಗಳು ನಡೆಸಿಕೊಡುತ್ತಾರೆ. ಹಿಂದಿನ ದಿನಗಳಲ್ಲಿ ಈ ಪೂಜೆಯನ್ನು ನಡೆಸುವ ಕುಟುಂಬಗಳು ಇಲ್ಲದಂತಾದಲ್ಲಿ ದೇವಾಲಯು ಆ ಪೂಜೆಯನ್ನು ನೆರವೇರಿಸುತ್ತದೆ. 1970 ಕಾರ್ತಿಕ ಉತ್ಸವವು 24–11–70ರಂದು ಪ್ರಾರಂಭವಾಗಿ 29ನೆಯ ದಿನಾಂಕದ ಕಾರ್ತಿಕ ಪೂಜೆಯನ್ನು 'ಪೊಲೀಸ್ ಕಾರ್ತಿಕ' ಎಂದು ಕರೆಯಲ್ಪಡುತ್ತದೆ. ಏಕೆಂದರೆ ಈ ಪೂಜೆಯಲ್ಲಿ ಪೋಲೀಸ್, ಮ್ಯಾಜಿಸ್ಟ್ರೇರು ಕೋರ್ಟು, ತಾಲೂಕ ಆಫೀಸ್ ಚವಕಡ, ಭಾಗವಹಿಸಿದರೂ ಪೋಲೀಸರದೇ ಪ್ರಮುಖ ಪಾತ್ರ.

ಕಾರ್ತಿಕ ಪೂಜೆಯನ್ನು ಬಹಳ ವಿಜೃಂಭಣೆಯಿಂದ ನೇರವೇರಿಸಲಾಯಿತು. ಕಾರ್ತಿಕ ಮಂಟಪದ ಎಲ್ಲಾ ದೀಪಗಳನ್ನು ಶೋಭಾಯಮಾನವಾಗಿ ಬೆಳಗಿಸಲಾಯಿತು. ಸೀವೇಲಿ ಉತ್ಸವದ ನಂತರ ಸುಮಾರು ಮಧ್ಯರಾತ್ರಿಗೆ ಕಾರ್ಯಕ್ರಮವು ಕೊನೆಗೊಂಡಿತು. ಸೇರಿದ ಪರಿಷೆ ಚದುರಿತು. ಗೋಪುರದ[1] ಬಾಗಿಲುಗಳನ್ನು ಹಾಕಲಾಯಿತು. ಮಾಮೂಲಿನಂತೆ ರಾತ್ರಿ ಕಾವಲುಗಾರನು ಮಾತ್ರ ಒಳಗಿದ್ದ.

---

1 ದೇವಾಲಯದ ಆವರಣ

ರಾತ್ರಿ 1-15ರ ವರೆಗೆ ಎಲ್ಲವೂ ಸರಿಯಾಗಿತ್ತು. ದೇವಾಲಯದ ಪಶ್ಚಿಮದ ಗೋಪುರದ ಸಮೀಪದಲ್ಲಿಯ ಕೆಲವು ಜನ, ದೇವಾಲಯದ ಒಳಗಿನಿಂದ ಉರಿಯನ್ನು, ಜ್ವಾಲೆಗಳನ್ನು ಕಂಡರು. ವಿಳಕ್ಕು ಮಂಟಪವೇ ಹತ್ತಿಕೊಂಡು ಉರಿಯುವಂತೆ ಅವರಿಗೆ ಕಂಡು ಬಂದಿತು. "ದೇವಾಲಯಕ್ಕೆ ಬೆಂಕಿ ಬಿದ್ದಿದೆ" ಎಂದು ಜೋರಾಗಿ ಕೂಗಿಕೊಂಡರು. ನೆರೆಹೊರೆಯವರು ಎಚ್ಚತ್ತರು. ಭದ್ರವಾಗಿ ಹಾಕಲ್ಪಟ್ಟ ಬಾಗಿಲುಗಳನ್ನು ತೆರೆಯಲು ಜನತೆ ತಟ್ಟಿದರು, ಕುಟ್ಟಿದರು ಬಾಗಿಲು ತೆರೆಯಲಿಲ್ಲ. ಗಾಬರಿಸಿದ ಜನ ಓಡೋಡಿ ಪಶ್ಚಿಮದ ಬದಿಗೆ ಬಂದರೆ, ಪಶ್ಚಿಮದ ವಿಳಕ್ಕು ಮಂಟಪದ ಬೆಂಕಿಯು ಜ್ವಾಲೆಗಳನ್ನು ಕಾರುತ್ತಾ ಇರುವುದನ್ನು ನೋಡಿ ಜನ ಹೌಹಾರಿದರು. "ಸಂಹಾರ ತಾಂಡವ"[1] ನೃತ್ಯವನ್ನು ಈ ಬೆಂಕಿಯ ಕೆಂಪಾದ ಜ್ವಾಲೆಗಳು ನೃತ್ಯಗೈಯುತ್ತಿದ್ದವು. ಹೆಚ್ಚಿನ ಅಪಾಯ ಜರುಗದಿರಲಿ ಎಂದು ಎಲೆಕ್ಟ್ರಿಕ್ ಶಾರ್ಟ ಸರಕ್ಯೂಟ್ ಆಗದಿರಲೆಂದು ವಿದ್ಯುತ್ತಿನ ಸ್ವಿಚ್ಚುಗಳನ್ನು ಆರಿಸಲಾಯಿತು. ಎಚ್ಚರಿಕೆಯನ್ನುಂಟು ಮಾಡಲು ತ್ವರಿತವಾಗಿ ದೊಡ್ಡ ಗಂಟೆಯನ್ನು ಬಾರಿಸಲಾಯಿತು, ವಡವಾಗ್ನಿಯಂತೆ ಬೆಂಕಿಯ ವಿಚಾರ ಎಲ್ಲೆಡೆಯೂ ಹರಡಿತು, ಚವಕ್ಕಡ ಪಂಚಾಯಿತಿ ಆಫೀಸಿನ ಸೈರನ್ನನ್ನು ಕೂಗಿಸಲಾಯಿತು. ಪಲಯೂರ ಚರ್ಚಿನ ಗಂಟೆ ಬಾರಿಸತೊಡಗಿತು. ಜಾತಿ, ಮತ, ಪಂಥ ಎಂದು ಪರಿಗಣಿಸದೆ ಸುತ್ತಮುತ್ತಲಿನ ಎಲ್ಲಾ ಜನರೂ ಎಚ್ಚತ್ತು ನೀರು ಉಗ್ಗಿ, ಮರಳು ಎರಚಿ ಬೆಂಕಿಯನ್ನು ಆರಿಸಲು ಪ್ರಯತ್ನ ನಡೆಸಿದರು. ಪ್ರಯತ್ನ ಸಫಲವಾಗಲಿಲ್ಲ. ಟೆಲಿಫೋನಿನ ಮೂಲಕ ಪೊನ್ನನಿಯಲ್ಲಿರುವ ಅಗ್ನಿ ಶಾಮಕ ದಳವನ್ನು ಸಂಪರ್ಕಿಸಲು, ಅವರು ಗುರುವಾಯೂರಿಗೆ ಧಾವಿಸಿದರು.

ಶೀಘ್ರದಲ್ಲಿಯೇ ತ್ರಿಚೂರಿನಿಂದ ಅಗ್ನಿ ಶಾಮಕ ದಳವೂ ಬಂತು. ಪ್ಯಾಕ್ಟ ಅಗ್ನಿ ಶಾಮಕ ದಳವನ್ನೂ ಸಂಪರ್ಕಿಸಲು ಅವರೂ ಬಂದರು. ಎಲ್ಲರೂ ಅಗ್ನಿಯನ್ನು ನಂದಿಸಲು ನಿರತರಾದರು - **ರುದ್ರುತೀರ್ಥ**ದ ಪಶ್ಚಿಮ ದಡದಿಂದ ಬೆಂಕಿ ಆರಿಸುವ ಕಾರ್ಯ ನಡೆಯಿತು. ನೂರಾರು ಜನರ, ಮೂರು ಅಗ್ನಿ

---

1 ಪ್ರತಿಯೊಂದನ್ನೂ ನಾಶಮಾಡುತ್ತಾ ನಡೆದ ನೃತ್ಯ

ಶಾಮಕ ದಳದ ಪರಿಶ್ರಮದಿಂದಾಗಿ ಬೆಳಗಿನ 5-30ಕ್ಕೆ ಸಂಪೂರ್ಣವಾಗಿ ಬೆಂಕಿಯು ನಂದಿತು.

ಬೆಂಕಿಯಾ ಅನಾಹುತ. ಅದರ ತೀವ್ರತೆ, ನಿಯಂತ್ರಣಕ್ಕೆ ಬಾರದಿರುವುದನ್ನು ಕಂಡು ದೇವಾಲಯದ ಅಧಿಕಾರಿಗಳು ಗರ್ಭಗುಡಿಯಿಂದ ಎಲ್ಲಾ ಬೆಲೆಯುಳ್ಳ ವಸ್ತುಗಳನ್ನು ಪೂರ್ವದಲ್ಲಿರುವ ದೇವಾಲಯದ ಕಚೇರಿಗೆ ಸಾಗಿಸಿದ್ದರು. ದೇವಾಲಯದ ಆವರಣದೊಳಗೆ, ಈಶಾನ್ಯ ದಿಕ್ಕಿನಲ್ಲಿದ್ದ ಗಣಪತಿ ವಿಗ್ರಹವನ್ನು ಸಸ್ತ ದೇವಾಲಯದಿಂದ ಸಸ್ತ ವಿಗ್ರಹವನ್ನು (ಸಸ್ತ ದೇವಾಲಯವು ಪ್ರದಕ್ಷಣಾ ಪಥದ ಹೊರಗೆ ದಕ್ಷಿಣ ದಿಕ್ಕಿನಲ್ಲಿದೆ) ಎರಡನ್ನೂ ಕೂಟಂಪಲಮ್ಮಿಗೆ ಸಾಗಿಸಲಾಯಿತು. ಬಹಳಷ್ಟು, ದೀರ್ಘ ಚರ್ಚೆಯ ನಂತರ ಗುರುವಾಯೂರಪ್ಪನ್ ಮೂಲ ವಿಗ್ರಹವನ್ನು ಸಹ ಕೂಟಂಪಲವ್ಮಿಗೆ ಸ್ಥಳಾಂತರಿಸಲಾಯಿತು. ನಂತರ ಎಲ್ಲಾ ವಿಗ್ರಹಗಳನ್ನೂ ಬೆಲೆಯುಳ್ಳ ವಸ್ತುಗಳನ್ನೂ ಹೆಚ್ಚಿನ ಸುರಕ್ಷತೆಗಾಗಿ ಸಮೀಪದಲ್ಲಿದ್ದ ತಂತ್ರಿಯವರ ಮನೆಗೆ ಸಾಗಿಸಲಾಯಿತು.

ಭಗವಾನ್ ಗುರುವಾಯೂರಪ್ಪನ ವಿಧಾನಗಳು ವಿಸ್ಮಯಕಾರಕವಾಗಿವೆ. ಪೂರ್ತಿಯಾಗಿ ಚುಟ್ಟಂಪಲಮ್, ಪಶ್ಚಿಮ ಭಾಗದ ಇಡೀ ವಿಳಕ್ಕು ಮಂಟಪ ದಕ್ಷಿಣದ ವಿಳಕ್ಕು ಮಂಟಪವನ್ನು ತಿಡಪ್ಪಳ್ಳಿಯ[1] ಮೇಲ್ಭಾಗದಿಂದ ಉತ್ತರದ ವಿಳಕ್ಕು ಮಂಟಪದ ಕೊಯ್ಮಾ[2] ಕೊಠಡಿ-ಇಷ್ಟು ಭಾಗಗಳನ್ನೆಲ್ಲ ಬೆಂಕಿಯು ಸುಟ್ಟು ಹಾಕಿತು. ಎಲ್ಲೆಡೆಯೂ ಸುಟ್ಟು ಚೂರಾದ, ಅರೆಬೆರೆ ಬೆಂದ ವಸ್ತುಗಳ ರಾಶಿ ಚೆಲ್ಲಾಪಿಲ್ಲಿಯಾಗಿ ಬಿದ್ದಿತ್ತು. ಗರ್ಭಗುಡಿಯಿಂದ ಕೇವಲ 3 ಗಜಗಳ ದೂರದಲ್ಲಿ ಚುಟ್ಟಂಪಲಮ್ ಇದೆ. ಹಿತ್ತಾಳೆಯ ದೀಪ (ನಿಲವಿಳಕ್ಕು) ಪಶ್ಚಿಮದ ಗೋಪುರ ಗೋಡೆಯ ಮೇಲಿದ್ದದ್ದು ಪೂರ್ತಿಯಾಗಿ ಕರಗಿದೆ. ಆದರೆ ಇಂಥ ಬಲಶಾಲಿಯಾದ ಬೆಂಕಿಯು ಗರ್ಭಗುಡಿಯ ಮೂಲೆಗಳಲ್ಲಿ ನೇತಾಡುತ್ತಿದ್ದ ಒಣ ಹೂವಿನ ಹಾರಗಳನ್ನು ಸುಟ್ಟು ಹಾಕಲಿಲ್ಲ ! ರುದ್ರಕೂಪದ ಸಮೀಪದಲ್ಲಿ ನಾದಪ್ಪುರದ ಕಂಬಿಯೊಳಗೆ ಒಣಗಿದ ತಾಳೆ ಎಲೆಯ ಕೊಡೆ ಇತ್ತು-ಇದಕ್ಕೆ

---

1. ದೇವಾಲಯದ ಅಡಿಗೆ ಮನೆ
2. ದೇವಾಲಯದ ಶಿಸ್ತನ್ನು ಕಾಯುವ ಅಧಿಕಾರಿ

ಬೆಂಕಿಯಾಗಲಿ, ಹೊಗೆಯಾಗಲಿ ಯಾವದೇ ಪರಿಣಾಮ ಮಾಡಿಲ್ಲ ! ಭಗವಾನ್ ಗುರುವಾಯೂರಪ್ಪನು ಗರ್ಭಗುಡಿಯು ಬೆಂಕಿಯಿಂದ ನಾಶವಾಗದಿರಲಿ ಎಂದು ಆಶಿಸಿದ್ದು ತಿಳಿದು ಬರುತ್ತದೆ. ಗುಡಿಯು ಬಹಳ ಪುರಾತನವಾದುದರಿಂದ ನವೀಕರಣವು ಅವಶ್ಯವೆಂಬುದನ್ನು ತನ್ನ ಭಕ್ತಿ ಕೋಟಿಗೆ ಜ್ಞಾಪಿಸುವುದೇ ಭಗವಂತನ ಇಚ್ಛೆಯಾಗಿತ್ತೆಂದು ಮತ್ತು ದೇವಾಲಯದ ಜೀರ್ಣೋದ್ಧಾರ ಕಾರ್ಯ ಬಹಳ ದಿನಗಳಿಂದ ಹಾಗೆಯೇ ಇದೆ ಎಂಬುದನ್ನು ತಿಳಿಯಪಡಿಸುವಂತೆ ಕಂಡು ಬರುತ್ತದೆ !

ನವೀಕರಣದ ಕಾರ್ಯವನ್ನು ಪ್ರಾರಂಭಿಸಲು ತಡಮಾಡಲಿಲ್ಲ. ಆನುವಂಶಿಕ ದೇವಾಲಯದ ಟ್ರಸ್ಟೀಗಳಾದ ಝಾಮರಿನ್ ರಾಜಾ, ಮತ್ತು ಮಲ್ಲಿಸ್ಸೆರಿ ನಂಬೂದಿರಿಯವರ ಒಪ್ಪಿಗೆ ಪಡೆದು 5-12-70 ರಂದು ಪುನರ್ ನಿರ್ಮಾಣ ಮಂಡಳವನ್ನು ರಚಿಸಲಾಯಿತು. ಇದರಲ್ಲಿ ಕೇರಳ ರಾಜ್ಯದ ದೇವಾಲಯ ಮಂತ್ರಿಗಳು ಅಧ್ಯಕ್ಷರಾಗಿಯೂ, ದಿವಂಗತ ಕೆಲಪ್ಪಾಜಿಯವರು ಚೇರ್‌ಮನ್‌ರಾಗಿಯೂ ಇದ್ದರು. ಪುನರ್ರಚನೆಯ ಕಾರ್ಯದಲ್ಲಿ ಸಲಹಾ ಮಾಡಲು ಪ್ರಖ್ಯಾತ-ಇಂಜೀನಿಯರರು ಜ್ಯೋತಿಷ್ಯಿಗಳು ಮತ್ತು ದೇವಾಲಯದ ತಂತ್ರಿಗಳಿಂದ ಕೂಡಿದ ತಾಂತ್ರಿಕ ಸಲಹಾ ಮಂಡಳಿಯನ್ನೂ ರಚಿಸಲಾಯಿತು.

ಮಂಡಳಿಯು ವಿಚಾರಿಸಬೇಕಾಗಿದ್ದ ಪ್ರಮುಖ ಸಮಸ್ಯೆಯೆಂದರ ತಾಂತ್ರಿಕ ತತ್ತ್ವಗಳೊಳಗಾಗಿಯೇ ಸಹಸ್ರಾರು ಭಕ್ತಾದಿಗಳಿಗೆ ಅವಶ್ಯವಾದ ಅನುಕೂಲತೆಗಳನ್ನು ವಿಶೇಷವಾಗಿ ದೇವಾಲಯದೊಳಗೆ ಮಾಡಬಹುದಾದ ಬದಲಾವಣೆಗಳಿಂದ, ಒದಗಿಸುವುದು ಮತ್ತು ಜ್ಯೋತಿಷ್ಯ ನಿಯಮಗಳಿಗೆ ಅನುಸಾರವಾಗಿ ಭಗವಾನ್ ಗುರುವಾಯೂರಪ್ಪನನ್ನು ಸಂತುಷ್ಟಗೊಳಿಸುವುದಾಗಿತ್ತು. ಸವಿಸ್ತಾರವಾದ, ಸ್ಪಷ್ಟವಾದ ಕೆಳಗೆ ಸೂಚಿಸಿದವುಗಳಿಗೆ ಕಟ್ಟುನಿಟ್ಟಾಗಿ ಅಂಟಿಕೊಳ್ಳಬೇಕೆಂಬ ನಿರ್ಣಯವನ್ನು ಕೈಗೊಳ್ಳಲಾಯಿತು.

1. ದೇವಾಲಯಕ್ಕೆ ಬರುತ್ತಿರುವ ಭಕ್ತಾದಿಗಳ ಸಂಖ್ಯೆ ಪ್ರತಿ-ದಿನ ಹೆಚ್ಚುತ್ತಿರುವುದರಿಂದ ದೇವಾಲಯದೊಳಗೆ ತಾಂತ್ರಿಕ ತತ್ತ್ವಗಳಿಗೆ ಅನುಸಾರವಾಗಿ ಸಾಧ್ಯವಾದಷ್ಟು ಅನಾನುಕೂಲತೆಗಳನ್ನು ತೆಗೆದು ಹಾಕುವಂತೆ-ಮಾಡು

ವುದು, ಶ್ರೀ ಗುರುವಾಯೂರಿನ ದೇವಾಲಯದ ಅಸ್ತಿತ್ವವನ್ನು ನಿಕರವಾಗಿ ಉಳಿಸಿಕೊಂಡು ತಾಂತ್ರಿಕ ನಿಯಮಗಳಿಗೆ ಅನುಸಾರವಾಗಿ ಬದಲಾವಣೆಗಳನ್ನು ಮಾಡುವುದು.

2. ವಿಳಕ್ಕು ಮಂಟಪ ಮತ್ತು ದೇವಾಲಯದ ಪರೀಧಿಯನ್ನು ಗಮನಾರ್ಹವಾಗಿ ಬದಲಾಯಿಸುವುದಾಗಲಿ ಅಥವಾ ರೂಪಾಂತರಗೊಳಿಸುವುದಾಗಲಿ ಸಾಧ್ಯವಿಲ್ಲದ್ದರಿಂದ ಭಕ್ತಾದಿಗಳು ಚಲಿಸುವ ಸ್ಥಳವನ್ನು ಚುಟ್ಟಂಪಲವ್‌ದ ಅಡಿಪಾಯದ ಎತ್ತರವನ್ನು ಕಡಿಮೆ ಮಾಡಿ, ಮರದ ಕಂಬಗಳ ಬದಲಾಗಿ ಗ್ರೆನೈಟ್ ಕಲ್ಲಿನ ಕಂಬಗಳನ್ನು ಒದಗಿಸುವುದು.

3. ವಿಳಕ್ಕು ಮಂಟಪದ ಎದುರಾಗಿ ಗ್ರೆನೈಟ್ ಗೋಡೆಯನ್ನೇರಿಸುವುದು.

4. ಗಣಪತಿ-ದೇವಾಲಯದಲ್ಲಿ ಮೂರ್ತಿಯ ಸುತ್ತ ಇರುವ ಇಕ್ಕಟ್ಟಾದ ಸ್ಥಳವನ್ನು ತೆಗೆದುಹಾಕುವುದು.

5. ಗಣಪತಿ-ದೇವಾಲಯವನ್ನು ಗ್ರೆನೈಟಿನಲ್ಲಿ ಪುನರ್ರಚಿಸುವುದು.

6. ಬೆಂಕಿಯಿಂದ ಹಾಳಾದ **ಅನಂತಶಯನಂ**[1] ಬಣ್ಣದ ಚಿತ್ರವನ್ನು ಗ್ರೆನೈಟಿನಲ್ಲಿ ಕೆತ್ತುವುದು, ಮೂಲದ ಸ್ಥಾನದಲ್ಲಿ ವಿಗ್ರಹವನ್ನು ಸ್ಥಾಪಿಸುವುದು.

7. ಶಾಸ್ತ್ರಗಳ ಪರಿಮಿತಿಗೆ ಒಳಪಟ್ಟು ಉತ್ತರ ಮತ್ತು ಪೂರ್ವದ ಬಾಗಿಲುಗಳನ್ನು ವಿಸ್ತರಿಸುವುದು.

8. ಮಂಟಪದ ದಕ್ಷಿಣದ ನಿವೇದ್ಯಥರದ ಗಾತ್ರವನ್ನು ಕಡಿಮೆ ಮಾಡುವುದು.

ಇವುಗಳೊಂದಿಗೆ ಗುಡಿಯ ಆವರಣದೊಳಗಿರುವ ಕಾರ್ತಿಕ ಮಂಟಪದ ಮರದ ಕಂಬಗಳ ಬದಲಾಗಿ ಶಿಲ್ಪ ಕಲೆಯಿಂದ ಕೂಡಿದ ಗ್ರೆನೈಟ್ ಕಂಬಗಳನ್ನು ಹಾಕುವುದು. ಇವೆಲ್ಲವನ್ನು ಭಗವಾನ್ ಗುರುವಾಯೂರಪ್ಪನು ಸಮ್ಮತಿಸುವನೇ

---

1. ಸಹಸ್ರ ಹೆಡೆಯ ಸರ್ಪದ ಮೇಲೆ ಮಲಗಿದ ಮಹಾವಿಷ್ಣು

ಎಂಬುದನ್ನು ನಿರ್ಧರಿಸುವುದಕ್ಕಾಗಿ ಶ್ರೀ ಪುಡುಸ್ಸೆರಿ ವಿಷ್ಣು ನಂಬೂದಿರಿಯವರ ಮುಂದಾಳುತನದಲ್ಲಿ ಪ್ರಸಿದ್ಧ ಜ್ಯೋತಿಷಿಗಳ ಸಭೆಯನ್ನು ಕರೆಯಲಾಯಿತು. ಎರಡು ಬಾಗಿಲುಗಳನ್ನು ವಿಸ್ತರಿಸುವುದನ್ನು ಬಿಟ್ಟು ಇತರ ಎಲ್ಲ ಸೂಚನೆಗಳನ್ನು ಭಗವಾನ್‌ನು ಒಪ್ಪಿದ್ದಾನೆಂದು ಸ್ಪಷ್ಟಪಡಿಸಲಾಯಿತು.

ಪುನರ್ ನಿರ್ಮಾಣದ ಕಾರ್ಯದ ಕೋನ ಶಿಲೆಯು 1-5-71 ರಂದು ಜಗದ್ಗುರು ಕಂಚಿ-ಕಾಮಕೋಟಿ ಮಠಾಧಿಪತಿ-ಜಯೇಂದ್ರ ಸರಸ್ವತಿ-ಸ್ವಾಮಿಗಳಿಂದ ನೆರವೇರಿತು.

ಮೊದಲು ಗ್ರೈನೈಟ್ ಕಾರ್ಯ ಪ್ರಾರಂಭವಾಗಬೇಕಿತ್ತು. ಇದು 2-7-71 ರಂದು ಸುರು ಆಯಿತು. ದಕ್ಷಿಣ, ಪಶ್ಚಿಮ ಮತ್ತು ಉತ್ತರ ಈ ದಿಕ್ಕಿನಲ್ಲಿ ಕಾರ್ತಿಕ ಮಂಟಪದ ಸುತ್ತ ನಯ ಮತ್ತು ಹೊಳಪು ಮಾಡಿದ ಸುಂದರ ಗ್ರನೈಟ್ ಗೋಡೆಯನ್ನು ಹಾಕಲಾಯಿತು. ಇದು ಪರಂಪರಾಗತ ದೇವಾಲಯ ರಚನಾಶಾಸ್ತ್ರದ "**ಪಂಚವರ್ಗ**" ತಳಹದಿಯ ಮೇಲೆ ನಿರ್ಮಿಸಲ್ಪಟ್ಟಿದೆ. ಈ ಗೋಡೆಯ ಹಿಂದುಗಡೆ ಗುಡಿಯ ಒಳಗೆ ಶಿಲ್ಪಕಲಾ ಸಂಪತ್ತಿನಿಂದ ಕೂಡಿದ 58 ಕಂಬಗಳಿವೆ. ಪ್ರತಿ ಕಂಬದಲ್ಲೂ ಪುರಾಣ ಕಥನಗಳ ಶಿಲ್ಪಗಳನ್ನು ಕಾಣಬಹುದು. **ಥಿರುಮುಟ್ಟಮ್** ಎದುರಿಗೆ ಒಂದೇ ಗ್ರನೈಟ್ ಕಲ್ಲಿನಲ್ಲಿ ಕೆತ್ತಿದ ಬೃಹತ್ **ಅನಂತಶಯನಮ್** ವಿಗ್ರಹವಿದೆ.

ಎರಡು ವಥಿಲ್ ಮಂಟಪದೊಳಗಿನ ಹತ್ತು ದುಂಡನೆಯ ಕಂಬಗಳು ಕಲಾಕುಸುರಿನಿಂದ ಕೂಡಿದ್ದು, ಕಾಲಾತೀತವಾದ ಜಾಣ್ಮೆಯಿಂದ ಕೂಡಿವೆ. ದಕ್ಷಣ ವಥಿಲ್ ಮಂಟಪದಲ್ಲಿಯ ಪೂರ್ವದ ಕಂಬವನ್ನು ಮೊದಲಿದ್ದದ್ದನ್ನೇ ಇಟ್ಟಿದೆ. ಏಕೆಂದರೆ ಇದರ ಅಡಿಯಲ್ಲಿ ಈ ಕಂಬಕ್ಕೆ ಬೆನ್ನು ಆನಿಸಿಕೊಂಡು ಮೆಲ್ಪತ್ತೂರ್ "ನಾರಾಯಣೀಯಮ್" ಬರೆದಿದ್ದಾರೆ. ಕಾರಣ ಈ ಕಂಬವನ್ನು ಬದಲಿಸಿಲ್ಲ. ಉತ್ತರ ವಥಿಲ್ ಮಂಟಪದಲ್ಲಿ ಇದಕ್ಕೆ ಸಮಾಂತರವಾದ ಕಂಬವನ್ನು ಸಮೃತಿಗಾಗಿ ಹಳೆಯದನ್ನೇ ಉಳಿಸಿಕೊಂಡಿದೆ.

ಕಾರ್ತಿಕ ಮಂಟಪದ ಮೇಲಿನ ಎಲ್ಲಾ ದೀಪಗಳು ಶಾಸ್ತ್ರಕ್ಕನುಸಾರವಾಗಿ ಒಂದೇ ನಮೂನೆಯ ಮತ್ತು ಗಾತ್ರದವು ಇವೆ. ಎರಡು ದೀಪದ ಕುಡಿಗಳ

ನಡುವಿನ ಅಂತರ ಎಲ್ಲೆಡೆಯೂ ಸಮಾನವಾಗಿರಬೇಕಾಗಿದೆ. ಹನ್ನೊಂದು ಸಾಲುಗಳಲ್ಲಿರುವ ಒಟ್ಟು ದೀಪಗಳ ಸಂಖ್ಯೆ ಸುಮಾರು 7000. ಈ ದೀಪಗಳನ್ನು ಭದ್ರಪಡಿಸಿದ ಕಂಬ, ಅಡ್ಡಕಂಬ–ಎಲ್ಲವನ್ನೂ ಶುದ್ಧ ಹಿತ್ತಾಳೆಯಿಂದ ಪೂರ್ತಿಯಾಗಿ ರಕ್ಷಿಸಿದೆ. ಪುನರ್ ನಿರ್ಮಾಣದ ನಂತರ ಮೊದಲ ಬಾರಿಗೆ ಎಲ್ಲಾ ದೀವಿಗೆಗಳು ವಿಷ್ಣು ದಿನವಾದ 14ನೆಯ ಏಪ್ರಿಲ್ 1973 ರಂದು ಬೆಳಗಿದವು.

ಪ್ರಕರಣ 7

ಸೇವೆಗಳು


1 ಭಜನೆ

ದೇವಾಲಯದಲ್ಲಿ ಸಲ್ಲಿಸಲು ಅನೇಕ ಸೇವೆಗಳು ಲಭ್ಯವಿದ್ದರೂ ಅವುಗಳಲ್ಲೆಲ್ಲಾ ಅತ್ಯಂತ ಮಹತ್ವದ್ದೂ, ಪರಿಣಾಮಕಾರಿಯಾದುದೂ, ಫಲಕಾರಿಯಾದುದೂ ಅಂದರೆ **ಭಜನೆ. ಭಜನೆ**ಯೆಂದರೆ ಭಗವಂತನಿಗೆ ತನ್ನನ್ನು ತಾನು ಅರ್ಪಿಸಿಕೊಳ್ಳುವುದು, ಹೀಗೆ ಅರ್ಪಿಸಿಕೊಳ್ಳುವುದು ಮೆಲ್ಪಥುರರ ಸಂದರ್ಭದಲ್ಲಿ ಆದಂತೆ ಇಡೀ ಜೀವನ ಪರ್ಯಂತ. ಇಚ್ಛಿತ ಗುರಿ ಮುಟ್ಟುವವರೆಗೆ ಅಥವಾ ಒಂದು ನಿಶ್ಚಿತ ಅವಧಿಯವರೆಗೆ ಇರಬಹುದು. ಭಜನೆಯಲ್ಲಿ ಭಕ್ತನು ಪೂರ್ತಿ ದಿನ ದೇವಾಲಯದೊಳಗೆ ಇದ್ದು, ಎಲ್ಲಾ **ದರ್ಶನ**ಗಳನ್ನು ಪಡೆದು ಸಾಧ್ಯವಿದ್ದಷ್ಟು ದೇವಾಲಯದ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾನೆ. ಭಜನೆ ನಡೆದಾಗ್ಗೆ ಭಕ್ತನು ತನ್ನ ಆಹಾರಕ್ಕಾಗಿ ದೇವಾಲಯದ ನೈವೇದ್ಯವನ್ನು, ನೀರಡಿಕೆಯನ್ನು ಹೋಗಲಾಡಿಸಲು ರುದ್ರಕೂಪದ ನೀರನ್ನು ತೆಗೆದುಕೊಳ್ಳುತ್ತಾನೆ. ಅತ್ಯಂತ ಭಕ್ತಿಪೂರ್ವಕವಾಗಿ ಭಜನೆಯನ್ನು ಸಲ್ಲಿಸಿದಲ್ಲಿ ಭಗವಾನ್ ಗುರುವಾಯೂರಪ್ಪನು ಆತನ ಆಶೋತ್ತರಗಳನ್ನು ಪೂರೈಯಿಸುವುದೊಂದೇ ಅಲ್ಲದೆ, ಪೂಂಥನಮ್ ಮತ್ತು ಕುರೂರಮ್ಮ ಇವರೊಂದಿಗೆ ಇದ್ದಂತೆ ಸ್ವತಃ ದೇವನು ಭಕ್ತನೊಂದಿಗೆ ಇರುತ್ತಾನೆ. ಭಕ್ತರು ಅನೇಕ ಉದ್ದೇಶಗಳಿಗಾಗಿ ಭಜನೆ ಮಾಡುತ್ತಾರೆ. ಕೆಲವೊಂದು ಉದ್ದೇಶಗಳನ್ನು ಇಲ್ಲಿ ಕೊಟ್ಟಿದೆ.

a) **ಅಥುರ ಭಜನೆ :** ಯಾವುದೇ ಒಂದು ಕಾಯಿಲೆಯಿಂದ ಗುಣ ಹೊಂದಲು ನಡೆಸುವ ಭಜನೆ.



ಸಹಸ್ರ ಕಲಶದ ಮೆರವಣಿಗೆ



ಧ್ವಜ ಪೂಜೆ

b) ಗರ್ಭಕಾಲ ಭಜನೆ : ಗರ್ಭಿಣಿ ಸ್ತ್ರೀಯರು ಸುಸೂತ್ರ ಪ್ರಸವಕ್ಕಾಗಿ ಮತ್ತು ಇಚ್ಛಿತ ಕೂಸನ್ನು ಪಡೆಯಲು ಮಾಡುವ ಭಜನೆ.

c) ದೈನಂದಿನ ಭಜನೆ

I ತಿಂಗಳ ಭಜನೆ : ಪ್ರತಿ ತಿಂಗಳು ಭಜನೆಗಾಗಿ ಭಕ್ತರು ಗುರುವಾಯೂರಿಗೆ ಬರುತ್ತಾರೆ, ಕೆಲವು ಸಲ ಒಂದು ದಿನ ಉಳಿದು ಪೂರು ದರ್ಶನಪಡೆಯುತ್ತಾರೆ. ಸಾಮಾನ್ಯವಾಗಿ ಭಕ್ತರು ಗುರುವಾಯೂರಿಗೆ ತಿಂಗಳಿನ ಕೊನೆಯ ದಿನದಂದು ಬಂದು ಭಜನೆ ಸಲ್ಲಿಸಿ, ಮುಂದಿನ ತಿಂಗಳಿನ ಮೊದಲನೆಯ ದಿನದ ಭಜನೆ ಸಲ್ಲಿಸಿ ಮರಳುತ್ತಾರೆ.

II ಮಂಡಲ ಭಜನೆ : ವೃಶ್ಚಿಕ್‌ದ ಮೊದಲನೆಯ ದಿನದಿಂದ ಪ್ರಾರಂಭವಾಗುವ ನಾಲ್ವತ್ತೊಂದು ದಿನಗಳ ಭಜನೆಯೇ ಮಂಡಲ, ಇದು ಅತ್ಯಂತ ಪವಿತ್ರವಾದುದು. ಈ ಅವಧಿಯಲ್ಲಿ ಸಲ್ಲಿಸುವ ಭಜನೆ ಮಂಡಲ ಭಜನೆ.

ಇದರೊಂದಿಗೆ ಒಬ್ಬರು ಇನ್ನೊಬ್ಬರ ಪರವಾಗಿ ಮಾಡುವ ಭಜನೆಗಳಿವೆ. ಮಕ್ಕಳ ಪರವಾಗಿ ಸಾಮಾನ್ಯವಾಗಿ ಮಾತಾಪಿತೃಗಳು, ಊನ ಹೊಂದಿದವರ ಪರವಾಗಿ ಸಮೀಪದ ಬಂಧುಗಳು ಭಜನೆಗಳನ್ನು ಸಲ್ಲಿಸುತ್ತಾರೆ.

2 ಶಯನ ಪ್ರದಕ್ಷಿಣೆ

ಶಯನ ಪ್ರದಕ್ಷಿಣೆಯನ್ನು ಅಂಗಪ್ರದಕ್ಷಣೆಯೆಂದೂ ಕರೆಯುತ್ತಾರೆ. ಭಜನೆಯೊಂದಿಗೆ ಅಥವಾ ಭಜನೆಯಿಲ್ಲದೆಯೂ ಇದನ್ನು ನಡೆಸಬಹುದು. ಇದರಲ್ಲಿ ಭಕ್ತನು ಪ್ರದಕ್ಷಣಾ ಮಾರ್ಗದಲ್ಲಿ ಉರುಳುತ್ತಾನೆ. ಸಾಮಾನ್ಯವಾಗಿ ಭಕ್ತನು ಕಣ್ಣುಗಳನ್ನು ಮುಚ್ಚುತ್ತಾನೆ, ಅಥವಾ ಕಣ್ಣುಗಳನ್ನು ಬಟ್ಟೆಯಿಂದ ಕಟ್ಟುತ್ತಾನೆ. ಮೌನವಾಗಿ ಆತನು ಪಠಿಸುತ್ತಿರುತ್ತಾನೆ. ಕೆಲವು ವೇಳೆ ಜೋರಾಗಿಯೂ ಮಂತ್ರ ಹೇಳುತ್ತಿರಬಹುದು. ದೇವಸ ಜಪ ಮಾಡುತ್ತಿರ

ಬಹದು. ಭಗವಂತನ ಪುಣ್ಯ ನಾಮಸ್ಮರಣೆಯೊಂದಿಗೆ ಆತನ ಸಮೀಪದ ಬಂಧುಗಳು ಆತನಿಗೆ ನಿರ್ದೇಶಿಸುತ್ತಾ ನಡೆಯುತ್ತಿರುತ್ತಾರೆ.

3 **ವಸ್ತುಗಳ ಸೇವೆಗಳು** – ಸಾಮಾನ್ಯ

a) ಅರ್ಚನೆ : ಮುಖ್ಯ ಅರ್ಚಕನು ವಿಗ್ರಹದ ಮೇಲೆ ಅಥವಾ ಅಡಿಯಲ್ಲಿ, ಮಂತ್ರ ಪಠಿಸುತ್ತಾ ಹೂಗಳನ್ನಿಡುತ್ತಾನೆ. ಇದನ್ನು ಅರ್ಚನೆ ಎಂದು ಕರೆಯುತ್ತಾರೆ.

b) ಅಭಿಷೇಕ : ವಿಗ್ರಹದ ಮೇಲೆ ಮುಖ್ಯ ಅರ್ಚಕನು ಉದಕ ಎರೆಯುವುದನ್ನು **ಅಭಿಷೇಕ** ಎಂದು ಕರೆಯುತ್ತಾರೆ. ಇದನ್ನು ನೀರು, ರೋಜ ವಾಟರ್, ತೆಂಗಿನ ನೀರು, ಪಂಚಗವ್ಯ ಮತ್ತು ದುರ್ಬಲಗೊಳಿಸಿದ ಚಂದನದಿಂದ ನೆರವೇರಿಸುತ್ತಾರೆ.

c) ಅಲಂಕಾರ : ದೇವರ ವಿಗ್ರಹವನ್ನು ಶೃಂಗರಿಸುವುದು. ಮೂರ್ತಿಯನ್ನು ಶೃಂಗರಿಸುವುದಕ್ಕಾಗಿ ಭಕ್ತಾದಿಗಳು, ರೇಷ್ಮೆ ವಸ್ತ್ರಗಳನ್ನು, ಚಿನ್ನದ ಒಡವೆ ಇತ್ಯಾದಿಗಳನ್ನು ಸಲ್ಲಿಸುತ್ತಾರೆ. ಚಂದನ ಚರ್ತ್ತಲವು ಇನ್ನೊಂದು ಮಹತ್ವದ ಸೇವೆಯಾಗಿದೆ. ಚಂದನವನ್ನು ಲೇಪಿಸಲಾಗುವುದು. ಮೂರ್ತಿಯಿಂದ ಜಾರಿದ ಚಂದನವು ಅತ್ಯಂತ ಪವಿತ್ರವಾದದ್ದೆಂದು ಭಾವಿಸಲಾಗಿದೆ.

ಯಾವುದೇ ಸೇವೆಯನ್ನು ಭಕ್ತಾದಿಗಳು ನೇರವಾಗಿ ಸಲ್ಲಿಸುವಂತಿಲ್ಲ. ಭಕ್ತರ ಹೆಸರಿನಲ್ಲಿ ಮುಖ್ಯ ಅರ್ಚಕನು ಸೇವೆ ಸಲ್ಲಿಸಂತ್ತಾನೆ. ಪೂಜೆಗಾಗಿ ದೇವಾಲಯದೊಳಗೆ ಬುಕ್ ಮಾಡಬಹುದು. ಅದಕ್ಕಾಗಿ ಭಕ್ತಾದಿಗಳಿಗೆ ಚೀಟಿಗಳನ್ನು ಕೊಡಲಾಗುವುದು. ಬಟ್ಟೆ ಮತ್ತು ಆಭರಣಗಳನ್ನು **ತ್ರಿಪಡಿ**ಯ ಮೇಲಿಡಬೇಕು. ಮುಖ್ಯ ಅರ್ಚಕರು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ.

d) ಆಡಂಬರ : ದೇವಾಲಯ ಮತ್ತು ಉತ್ಸವವು ವಿಜೃಂಭಣೆಯಾಗುವಂತೆ ಮಾಡುವುದೆಲ್ಲವೂ **ಆಡಂಬರವೇ** ತೈಲಚಿತ್ರಗಳನ್ನು ಗೋಡೆಯ ಮೇಲೆ ಚಿತ್ರ ಬರೆಯುವುದು ಇತ್ಯಾದಿ ಸೇವೆಯನ್ನು ಭಕ್ತಾದಿಗಳು ಅರ್ಪಿಸುತ್ತಾರೆ. ಇವುಗಳಿಂದ ದೇವಾಲಯವನ್ನು ಶೃಂಗಾರಗೊಳಿಸಲಾಗುತ್ತದೆ. ಗರ್ಭ

ಗುಡಿಯ ಶಿಖರವನ್ನು ಚಿನ್ನದ ಮುಲಾಮು ಮಾಡಿಸುವ ಕಾಣಿಕೆಯನ್ನು ಸಹ ಅರ್ಪಿಸುತ್ತಾರೆ. ದೀಪಸ್ತಂಭಗಳು, ಕಾರ್ತಿಕ ಮಂಟಪ, ದೀಪ, ಇತ್ಯಾದಿಗಳಿಗಾಗಿ ಭಕ್ತರು ಎಣ್ಣೆಯನ್ನು ಕೊಡುತ್ತಾರೆ. ಇದರಿಂದ ದೀಪಾಲಂಕಾರದ ವೈಭವ ಹೆಚ್ಚುತ್ತದೆ. ಹಿತ್ತಾಳಿ, ಬೆಳ್ಳಿ ಮತ್ತು ಚಿನ್ನದ ದೀಪಗಳನ್ನು, ಕೊಡೆಗಳನ್ನು ಮತ್ತು ಮೆರವಣಿಗೆಯ ಭೂಷಣ ಸಾಮಗ್ರಿಗಳನ್ನು. ಆನೆಗಳನ್ನು ಸಿಂಗರಿಸುವ ಉಪಕರಣಗಳನ್ನು ಅರ್ಪಿಸುತ್ತಾರೆ. ಇವಲ್ಲದೆ, ಆನೆಗಳು, ಹಸುಗಳು, ಕುದುರೆಗಳು, ಜಿಂಕೆಗಳು, ನವಿಲುಗಳು ಇತ್ಯಾದಿ ಪ್ರಾಣಿಗಳನ್ನು ಸಹ ಭಗವಂತನಿಗೆ ಭಕ್ತರು ಅರ್ಪಿಸುತ್ತಾರೆ. ಶಹನಾಯಿ, ಹಲಿಗೆ, ಕೊಳಲು, ಶಂಖ, ತಾಳ ತಾಂಬೂರ ಇತ್ಯಾದಿ ಸಂಗೀತದ ಉಪಕರಣಗಳನ್ನು ಅರ್ಪಿಸುತ್ತಾರೆ. ಪುರಾಣಗಳನ್ನು ಓದುವುದು, ಚಾಕ್ಯಯಾರರ ಮೇಳ, ಪದಕಮ್, ತುಲಾಜ ಮತ್ತು ಭಗವಂತನ ಲೀಲೆಗಳನ್ನು ಸ್ತುತಿಸುವುದು, ಇವೇ ಮೊದಲಾದವುಗಳನ್ನು ಸೇವಾರ್ಥವಾಗಿ ಅರ್ಪಿಸುತ್ತಾರೆ. ಕಲಾವಿದರು ತಮ್ಮ ಸಾರ್ವಜನಿಕ ಕಾರ್ಯಕ್ರಮದ ಆರಂಭವನ್ನು ಭಗವಂತನೆದುರು ಸಲ್ಲಿಸುತ್ತಾರೆ. ಇವೆಲ್ಲಕ್ಕೂ ಮುಕುಟಪ್ರಾಯವಾಗಿ ಕೃಷ್ಣನಾಟ್ಟಂ ಇದೆ—ಭಕ್ತಾದಿಗಳು ಮುಂದಾಗಿ ಫೀ ಕೊಟ್ಟು ಬುಕ್ ಮಾಡಬಹುದು. ಈ ಮೊದಲೇ ಹೇಳಿದಂತೆ ಕೃಷ್ಣನಾಟ್ಟವನ್ನು ಎಂಟು ಭಾಗಗಳನ್ನು ಮಾಡಿ ಪ್ರತಿ ರಾತ್ರಿ ಒಂದೊಂದು ಭಾಗವನ್ನು ಅಭಿನಯಿಸಬೇಕಾಗಿದೆ. ಭಕ್ತಾದಿಗಳು ತಮ್ಮ ಇಚ್ಛೆಯ ಪೂರೈಕೆಗಾಗಿ ಯಾವುದೇ ಕಥಾನಕ ಭಾಗವನ್ನು ಆಯ್ದುಕೊಳ್ಳಬಹುದು.

c) **ನೈವೇದ್ಯಗಳು :** ಕುಟ್ಟಿದ ಅಕ್ಕಿಯ, ಕುಚ್ಚಿದ ಅನ್ನದ, ತುಪ್ಪದಲ್ಲಿ ಕರಿದ ಸಿಹಿಯಾದ ಅಕ್ಕಿಯ ಹೋಳಿಗೆ, ಕೊಬ್ಬರಿ ಹೋಳಿಗೆ, ಬಾಳೆಯ ಎಲೆಯಲ್ಲಿ ಬೆಲ್ಲವನ್ನಿಟ್ಟು ಹಬೆಯಲ್ಲಿ ಬೇಯಿಸಿದ "ಅಟ", ಪಾಯಸಂ. (ಬೆಲ್ಲದ ಅನ್ನ) ಪಲ್ಪಾಯಸಂ —(ಹಾಲು ಸಕ್ಕರೆಯಲ್ಲಿ ಆದ ಅನ್ನ) ಪ್ರಥಮ್ (ತೆಂಗಿನ ಹಾಲು, ಬೆಲ್ಲದಲ್ಲಿ ತಯಾರಿಸಿದ ಅನ್ನ) ಪಲಾಟ ಪ್ರಥಮನ್ (ಹಾಲು ಮತ್ತು ಸಕ್ಕರೆಯಲ್ಲಿ ಕರಿದ ಅಕ್ಕಿಯ ಕಡುಬು)—ಇವು ಅರ್ಪಿಸುವ ನೈವೇದ್ಯಗಳಲ್ಲಿ ಮುಖ್ಯವಾದವುಗಳು.

ಭೌತಿಕ ಕಾಣಿಕೆಗಳು : ವಿಶಿಷ್ಟವಾಗಿ;

a) ಮಕ್ಕಳಿಗಾಗಿ : ಮಕ್ಕಳ ಆಟಿಕೆಗಳು, ಒಡವೆಗಳು, ತೊಟ್ಟಿಲುಗಳು ಮತ್ತು ದೂಡುವ ಗಾಡಿ, **ತಿರುವೋಣಮ್** ದಿನದಂದು ಹುಡುಗರಿಗೆ ಬಟ್ಟೆಗಳನ್ನು ಕಾಣಿಕೆ ಕೊಡುವುದು, ಹುಡುಗರಿಗೆ ಥಿರುವೋಣಮ್ ಹಬ್ಬದ ಊಟ ಹಾಕುವುದು, ಭಾಗವತದ ಅವತಾರ ಅಧ್ಯಾಯ ಅಥವಾ ನಾರಾಯಣೀಯಮ್‌ದ ಭಾಗವನ್ನು ಸ್ವತಃ ಓದುವುದು ಅಥವಾ ಇತರರು ಓದುವಂತೆ ಮಾಡುವುದು, ಕೃಷ್ಣನಾಟ್ಟಂದ **ಅವತಾರಂ** ಕಥೆಯನ್ನು, ಅಭಿನಯಿಸುವಂತೆ ಮಾಡುವುದು ಇವೆಲ್ಲವನ್ನು ಭಕ್ತಾದಿಗಳು ತಮಗೆ ಮಕ್ಕಳಾಗಲೆಂದು ಅರ್ಪಿಸುತ್ತಾರೆ. ಕೊನೆಯ ಉಪಾಯವೆಂದು **ಭಜನೆಯನ್ನು** ನಡೆಸುತ್ತಾರೆ.

b ಸಾಮಾನ್ಯ ಹಿಂಜರಿತ ಇತ್ಯಾದಿ ನಿವಾರಣೆಗಾಗಿ

1 ತುಲಾಭಾರಮ್ : ಒಬ್ಬನನ್ನು ಚಿನ್ನ ಬೆಳ್ಳಿ, ಹರಳು ಮುತ್ತು ಹಣ್ಣುಗಳು, ಸಕ್ಕರೆ ಆರತಿ, ಬೆಣ್ಣೆ, ರೋಜವಾಟರ್, ತೆಂಗಿನಕಾಯಿ, ತೆಂಗಿನ ನಾರು, ಬಾಳೆಹಣ್ಣು ಇತ್ಯಾದಿಗಳಿಂದ ತೂಗುವುದು–ಇದು ಭಕ್ತರ ಬೇಡಿಕೆಯಂತೆ ಇರುತ್ತದೆ.

2 ಚಿನ್ನ, ಬೆಳ್ಳಿಯ ವಿಗ್ರಹಗಳು

c ವಿಶಿಷ್ಟ ರೋಗ ಪರಿಹಾರಕ್ಕಾಗಿ ; ತೊಂದರೆಗೀಡಾದ ಅಂಗ ಹೊಂದಿದ ವಿಗ್ರಹವನ್ನು, ಆಭರಣಗಳಿಂದ ಅಲಂಕರಿಸಿ ವ್ಯಾಧಿ ನಿವಾರಣೆಗಾಗಿ ಅರ್ಪಿಸಲಾಗುತ್ತದೆ.

d ಕಸಬು ಇತ್ಯಾದಿಗಳಲ್ಲಿ ಯಶಸ್ಸು ಹೊಂದಲು ; ಸಂಬಳ ಅಥವಾ ಆದಾಯದ, ಲಾಭದ ಅಥವಾ ಪ್ರತಿದಿನದ ಶೇಖರಣೆಯ ಒಂದು ನಿಶ್ಚಿತ ಶೇಕಡಾ ಅಂಶವನ್ನು ಅರ್ಪಿಸುವುದು.

e ಸುರಕ್ಷಿತ ಪ್ರಯಾಣಕ್ಕಾಗಿ : ಬೆಳ್ಳಿ ಮತ್ತು ಚಿನ್ನದಿಂದ ಮಾಡಿದ ಆಟದ ಆಟಿಕೆಗಳಾದ ಹಡಗು, ದೋಣಿ, ಬಸ್ಸು, ರೈಲು ಇತ್ಯಾದಿಗಳು.

b ಸಂಕೀರ್ಣ

1 ಅರ್ಪಿತ : ಮಗುವನ್ನು ಭಗವಂತನಿಗೆ ಅರ್ಪಿಸುವುದು (ದೇವರ

[illegible] ವನ್ನು ದೇವನಿಗೆ ಅರ್ಪಿಸುವುದು. ಇದಾದ ನಂತರ ಭಗವಾನ್ ಗುರುವಾಯೂರಪ್ಪನ ಅಂಶವೇ ಮಗು ಎಂದು ತಿಳಿಯುತ್ತಾರೆ. ಆಶೀರ್ವಾದ ಹೊಂದಿದ ಮಗುವನ್ನು ಹಿಂದಕ್ಕೆ ಪಡೆಯುತ್ತಾರೆ. ತಮ್ಮ ಶಕ್ತ್ಯಾನುಸಾರ ಹಣವನ್ನು 'ಹುಂಡಿಯಲ್ಲಿ' ಹಾಕುತ್ತಾರೆ.

2 **ಅನ್ನ ಪ್ರಾಸನಂ :** ಭಗವಂತನ ಎದುರು ಮಗುವಿಗೆ ಮೊದಲ ಬಾರಿ ತಿನ್ನಿಸುವುದು.

3 **ವಿವಾಹ :** ಭಗವಾನ್ ಗುರುವಾಯೂರಪ್ಪನ ಸಮಕ್ಷಮದಲ್ಲಿ ವಿವಾಹವನ್ನು ನೆರವೇರಿಸುವುದು. ಇದಕ್ಕಾಗಿ ದೇವಾಲಯದ ಪೂರ್ವಕ್ಕೆ ಗೋಪುರದ ಎದುರು ವಿವಾಹ ಮಂಟಪವಿದೆ.

ಈಗ ದೇವಾಲಯದಲ್ಲಿ ಚಾಲ್ತಿ ಇರುವ ಸೇವೆಗಳ ವಿವರ ಕೊಟ್ಟಿದೆ.

ಸಂಖ್ಯೆ	ಸೇವೆಯ ಹೆಸರು	ಕನಿಷ್ಠ ಚಾರ್ಜು	ಟೀಕೆಗಳು
1	ತುಪ್ಪದ ದೀಪ	0—50	
2	ಹಾರ	0—50	
3	ಪಲ್ಪಾಯಸಮ್	1—00	
4	ನಲ್ಪಾಯಸಮ್	1—00	
5	ಸಕ್ಕರೆ ಪಾಯಸಮ್	1—00	
6	ಇರಟ್ಟಿ ಪಾಯಸಮ್	10—00	
7	ಪಲತ ಪ್ರಥಮನ್	10—00	
8	ಬೆಣ್ಣೆಯ ನೈವೇದ್ಯ	1—00	
9	ತ್ರಿಮಧುರಮ್	0—50	
10	ಅಪ್ಪಮ್	1—00	
11	ಅಟ	1—00	
12	ಅರ್ಚನ (ಪುರುಷಸೂಕ್ತಮ್)	0—50	
13	ಅರ್ಚನ (ಅಷ್ಟೋತ್ತರ)	1—00	(ಮಾರ್ಕೆಟ್ ದರದಂತೆ
14	ಅರ್ಚನ (ಸಹಸ್ರನಾಮಮ್)	3—00	ದರ ಬದಲಾವಣೆ
15	ಕಲಭಮ್	2—00	ಹೊಂದುತ್ತದೆ. ಅಂಚೆ
16	ಗಂಧಾನುಲೇಪನ	1—75	ವೆಚ್ಚ ಬೇರೆ)
17	ನೈವೇದ್ಯ ಅನ್ನ (1 ಮಾಸ)	0—80	

ಸಂಖ್ಯೆ	ಸೇವೆಯ ಹೆಸರು	ಕನಿಷ್ಟ ಚಾರ್ಜು	ಟೀಕೆಗಳು
18	ನೈವೇದ್ಯ ಪೂರ್ಲ (1/4 ಲೀಟರ್)	0—50	
19	ಸಕ್ಕರೆ ಬಾಳೆಹಣ್ಣು	1—00	
20	ನಿರ್ಮಾಲ (ಹಾರ)	15—00	
21	ಅನ್ನ ಪ್ರಸಾದ	2—00	
22	ವಿವಾಹ	20—00	
23	ಜಪದ ನಂತರ ಬೆಣ್ಣೆ	0—50	
24	ಕೇಳಿಕೈ	1—10	
25	ಹಾಲಿನ ಅಭಿಷೇಕ ಕೂರು 1/4 ಲೀಟರ್	0—50	ಭಕ್ತರು ಹಾಲು ಒದಗಿಸಬೇಕು
26	ಎಣ್ಣೆಯ ಅಭಿಷೇಕ (1/4 ಲೀಟರ್)	2—60	ಎಣ್ಣೆ ಕಳಿಸಲು ಅಂಚೆ ವೆಚ್ಚ ಕಳಿಹಿಸಬೇಕು.
27	ಅಹಾಸ್ – ಒಂದು ದಿನದ ಪೂರ್ತಿ ಪೂಜೆ	805—00	
28	ನಮಸ್ಕಾರಮ್ (ದೀಡ್ ನಮಸ್ಕಾರ)	550—00	
29	ಅತಜಮ್	550—00	
30	ಉದಯಾತ್ಸಮಾನ ಪೂಜ	4500—00	
31	ಕೃಷ್ಣನಾಟ್ಟಂ ಆಟ	500—00	ಒಂದು ದಿನದ ಆಟಕ್ಕೆ
32	ನಾರಾಯಣೀಯಂ, ಪಾರಾಯಣ	0—31	10 ಶ್ಲೋಕಗಳಿಗೆ
33	ಭಾಗವತ ಪಾರಾಯಣ	0—50	1 ಪ್ರಕರಣಕ್ಕೆ
34	ಗೀತಾ ಪಾರಾಯಣ	0—31	—ಮೇಲಿನಂತೆ—
35	ಅಷ್ಟಪದಿ ಪಾರಾಯಣ	0—60	—"—
36	ಭಗವತಿ – ಅರಘಲ್	2—00	
37	ದೀಪಾಲಂಕಾರ	—	ಎಷ್ಟು ಬೇಕಾದರೂ
38	ಭಂಡಾರ (ಹುಂಡಿಯಲ್ಲಿ)	—	—"—
39	ತುಲಾಭಾರಮ್ ತಟ್ಟಿಲಪಾಸಮ್	1—00	ವಸ್ತುವಿನ ಬೆಲೆ ಬೇರೆ
40	ದೀಪಾಲಂಕಾರ ಭಗವತಿ ದೇವಾಲಯ	180—00	
41	ಲಲಿತಾ ಸಹಸ್ರನಾಮಾರ್ಚನ (ಭಗವತಿ)	3—00	
42	ಗಾಯಿತ್ರಿ ಜಪ	0—60	
43	ತೆಚಿ ನಾಲಾ	2—00	

ಸೂಚನೆಗಳು

1. ದೇವಾಲಯದೊಳಗೆ ವಿಗ್ರಹಗಳು ಚಂದನ ಇತ್ಯಾದಿ ದೊರೆಯುತ್ತವೆ. ಇವನ್ನು ಹೊರಗಿನಿಂದ ಖರೀದಿಸಬಾರದೆಂದು ಭಕ್ತಾದಿಗಳಲ್ಲಿ ವಿನಂತಿ,

2. ಸೇವೆ ಸಲ್ಲಿಸಲು ಯಾವುದೇ ಸಂದೇಹ ನಿಮಗೆ ಬಂದಲ್ಲಿ ಮ್ಯಾನೇಜರ್ (ದೇವಾಲಯ) ಅಥವಾ ಸೂಪರೆಂಟೆಂಡೆಂಟರನ್ನು ದಯವಿಟ್ಟು ಸಂಪರ್ಕಿಸಿ, ವಸತಿಗಾಗಿ ಮ್ಯಾನೇಜರ್ (ಛತ್ರಂ) ರವರನ್ನು ಕಾಣಿರಿ.

3. ದಳ್ಳಾಳಿಗಳಿಂದ ಎಚ್ಚರ, ದೇವಾಲಯದೊಳಗೆ ಖರೀದಿಸಿದ ಟಿಕೆಟ್ಟುಗಳು ಮಾತ್ರ ನಡೆಯುತ್ತವೆ.

4. ಭಕ್ತಾದಿಗಳು ತಮ್ಮ ಕೋರಿಕೆಗಳನ್ನು "ದಿ ಆಡ್ಮಿನಿಸ್ಟ್ರೇಟರ್, ಗುರುವಾಯೂರು ದೇವಸ್ಥಾನ, ಗುರುವಾಯೂರು – 680 101. ಈ ವಿಳಾಸಕ್ಕೆ ಕಳಿಸಬೇಕು" M. O. ಕೂಪನ್ನಿನಲ್ಲಿ ಪೂರ್ತಿ ವಿಳಾಸ, ಸಲ್ಲಸಬೇಕಾದ ಸೇವೆಯನ್ನು ಬರೆಯಬೇಕು.

5. ಚೆಕ್ ಮತ್ತು ಡ್ರಾಫ್ಟ್‌ಗಳನ್ನು ಬಹಳಷ್ಟು ಮುಂಚಿತವಾಗಿ ಕಳಿಸಿದಲ್ಲಿ ಇಚ್ಛಿಸಿದ ದಿನದಂದು ಸೇವೆ ಸಲ್ಲಿಸಲಾಗುವುದು.

6. ಕಾಗದಗಳಲ್ಲಿ ಮತ್ತು M. O. ಕೂಪನ್ನುಗಳಲ್ಲಿ ಸೇವೆಯ ವಿವರಗಳನ್ನು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲದಿದ್ದರೆ ಹಣವನ್ನು ಭಂಡಾರಕ್ಕೆ ಜಮ ಮಾಡಲಾಗುವುದು.

ಪ್ರಕರಣ 8

ಕೃಷ್ಣನಾಟ್ಟಮ್

ಕ್ರಿ. ಶ. 1655-58ರ ವರೆಗೆ ಕಲ್ಲಿಕೋಟೆಯ ಝಾಮರಿನ್ ಆಗಿ ಆಳಿದ ರಾಜಾ ಮಾನವೇದನು ಈ ಮೂಕ ನಾಟಕವನ್ನು ಬರೆದನು. ಭಾಗವತದ ಅದರಲ್ಲೂ ಹತ್ತು ಮತ್ತು ಹನ್ನೊಂದನೆಯ ಸರ್ಗಗಳನ್ನು ಆಧರಿಸಿ ಕೃಷ್ಣನಾಟ್ಟ ವನ್ನು ಬರೆದಿದೆ. ಕೃಷ್ಣನಾಟ್ಟಮ್‌ದ ಕಥೆಯು ಶ್ರೀಕೃಷ್ಣನ ಕಥೆಗೆ ಸಂಬಂಧಿ ಸಿದೆ ಎಂದಾಗಲಿ, ಅಥವಾ ಝಾಮರಿನ್ ಕವಿಯಿಂದ ರಚಿಸಲ್ಪಟ್ಟಿದೆಂದೂ ಅಲ್ಲದೆ ಈ ಕಲೆ ಈಗ ಗುರುವಾಯೂರಿನ ದೇವಾಲಯದಲ್ಲಿ ಮಾತ್ರ ಉಳಿದದ್ದ ರಿಂದ ದೇವಸ್ಥಾನಕ್ಕೆ ನಿಕಟ ಸಂಬಂಧ ಹೊಂದಿದೆ. ಆಟವನ್ನು ಮೊದಲು ಅರ ಮನೆಯಲ್ಲಿ ಝಾಮರಿನ್ ನಡೆಸುತ್ತಿದ್ದರು, ಇತ್ತೀಚೆಗೆ ಗುರುವಾಯೂರಿಗೆ ವರ್ಗಾವಣೆ ಮಾಡಿದೆ, ಈಗ ಭಗವಾನ್ ಗುರುವಾಯೂರಪ್ಪನ ಸೇವೆಗಳಲ್ಲಿ ಒಂದಾಗಿದೆ ಕೃಷ್ಣನಾಟ್ಟಮ್.


ರಾಜಾ ಮಾನವೇದನು ಮೆಲ್ಪಥರು, ಪೊಂತನಮ್ ಮತ್ತು ವಿಲ್ವ ಮಂಗಲಮ್ II ಇವರ ಸಮಕಾಲೀನರು, ವಿಲ್ವಮಂಗಲರ ಸಹಾಯದಿಂದ ಕವಿಯು ಶ್ರೀಕೃಷ್ಣನನ್ನು ಕಂಡು ಆತನನ್ನು ಆಲಂಗಿಸಲು ಧಾವಿಸಿದ. ವಿಲ್ವ ಮಂಗಲನು"ಇದನ್ನು ನನಗೆ ಹೇಳಲಿಲ್ಲ" ಎಂಬ ನುಡಿಯೊಂದಿಗೆ ಅದೃಶ್ಯವಾಗಿ ಕವಿಗೆ ದೊರೆತದು ಒಂದೇ ಒಂದು ನವಿಲು ಗರಿ ಮಾತ್ರ ; ದೇವನ ಪೀಲಿಥಿರು ಮುಡಿಯಿಂದ[1] ದೊರೆಯಿತು. ಇದನ್ನು ಉಪಯೋಗಿಸಿ ಝಮೊರಿನ್ ಒಂದು

---

1. ನವಿಲು ಗರಿಯಿಂದ ಅಲಂಕೃತವಾದ ಮುಕುಟ



ಕೃಷ್ಣನಾಟ್ಟಂ



ಕೂತಾಯಬಮ್ (೬೪ ನೋಡು)

ಮುಡಿ[1]ಯನ್ನು ತಯಾರಿಸಿದನು. ಈ ಮುಡಿಯು ರಂಗದಲ್ಲಿ ಉಪಯೋಗವಾಗಲು ಒಂದು ನೃತ್ಯನಾಟಕವನ್ನು ಶ್ರೀಕೃಷ್ಣನ ಕಥೆಯು ಆಧಾರವಾಗಿ ರಚಿಸಿದನು. ಗುರುವಾಯೂರು ದೇವಾಲಯದ ಆಗ್ನೇಯ ದಿಕ್ಕಿನಲ್ಲಿ ಒಂದು ಅರಳಿ ಮರವಿದ್ದು, ಈ ಮರದ ಅಡಿಯಲ್ಲಿ ರಾಜನಿಗೆ ಭಗವಂತನ ದರ್ಶನವಾಯಿತೆಂದು ನಂಬಲಾಗಿದೆ.

ರಾಜಾ ಮಾನವೇದನು ಹುಟ್ಟಾ ಪ್ರತಿಭಾಶಾಲಿಯಲ್ಲದೆ ಅಗಾಧ ಪಂಡಿತನೂ, ಕವಿಯೂ ಎಲ್ಲಾ ಕಲೆಗಳಲ್ಲಿ ನಿಪುಣನೂ ಆಗಿದ್ದನು. ಪೂರ್ತಿಯಾದ ಹೊಸ ಕಲಾ ರಚನೆಯಲ್ಲಿ ಕೂಟ್ಟು, ಕೂಡಿಯಾಟ್ಟಮ್ ಮತ್ತು ಥೇಯವ್ ಕಲೆಗಳಲ್ಲಿಯ ನೃತ್ಯಕಲೆಯನ್ನು ಮುಖ್ಯವಾಗಿ ಜಯದೇವನ **ಗೀತಗೋವಿಂದ**ವನ್ನು ಅವಲಂಬಿಸಿ ರಚಿಸಿದನು. ಗೀತಗೋವಿಂದದ ನಾಟಕ ರೂಪಕವಾದ **ಅಷ್ಟಪದಿಯಾಟ್ಟಮ್**ದಿಂದಲೂ ಪ್ರಭಾವಿತನಾಗಿರಬಹುದು. ಇವೆಲ್ಲವುಗಳಿಂದ ಸ್ಫೂರ್ತಿ ಪಡೆದು, ಆದರೆ ಸ್ವತಂತ್ರವಾದ ಈ ಹೊಸ ಮೂಕ ನೃತ್ಯನಾಟಕವನ್ನು ರೂಪಿಸಿದನು. **ಗೀತಗೋವಿಂದ**ವನ್ನು ಅಂದು ಮತ್ತು ಇಂದೂ "**ಸೋಪಾನ ಸಂಗೀತ** ನಮೂನೆಯಲ್ಲಿ" ಹಾಡಲಾಗುತ್ತದೆ. ಕೃಷ್ಣನಾಟ್ಟವನ್ನೂ ಇದೇ ದರ್ತಿಯಲ್ಲಿ ಹಾಡಲಾಗುತ್ತದೆ. ಕರ್ನಾಟಕ ಸಂಗೀತದ ರಾಗಗಳನ್ನು ಉಪಯೋಗಿಸಲಾಗುತ್ತದೆ.

ಶ್ರೀಕೃಷ್ಣನ ಕಥೆಯಾದ ಇದನ್ನು ಸತತವಾಗಿ ಎಂಟು ರಾತ್ರಿ ಅಭಿನಯಿಸಬೇಕೆಂದು ಎಂಟು ಭಾಗಗಳನ್ನಾಗಿ ಮಾಡಿದೆ. ಮೊದಲನೆಯ ದಿನದ ಕಥೆಯು ಮಹಾವಿಷ್ಣು ಕೃಷ್ಣಾವತಾರವನ್ನು ಹೊಂದುವ ಕಥೆ ಇದನ್ನು "ಅವತಾರಂ" ಎಂದು ಕರೆಯುತ್ತಾರೆ. ಇತರ ದಿನಗಳಲ್ಲಿಯ ಕಥೆಗಳನ್ನು "ಕಾಳಿ ಮರ್ಧನ" "ರಾಸ ಕ್ರೀಡೆ" "ಕಂಸ ವಧೆ" "ಸ್ವಯಂವರ" "ಬಾಣಯುದ್ಧಮ್" "ವಿವಿಧವಧಂ" ಮತ್ತು "ಸ್ವರ್ಗಾರೋಹಣ" ಎಂದು ಕರೆಯಲಾಗಿದೆ.

ಹಸಿರು, ಕೆಂಪು ಮಿನುಕ್ಕು, ಥಡಿ ಮತ್ತು ಕರಿ ಇಂದು ಕಥಕಳಿಯಲ್ಲಿ ಇರುವ ಎಲ್ಲಾ ವೇಷಭೂಷಣಗಳು ಕೃಷ್ಣಾಟ್ಟಮ್‌ನಲ್ಲಿವೆ. "ಕಥಿಯು" ಕಥಕ್ಕಳಿಯಲ್ಲಿಯಷ್ಟು ಸವಿಸ್ತಾರವಾಗಿರುವುದಿಲ್ಲ. ಮೂಗು, ಗದ್ದದ ಮೇಲಿನ

---

1. ಕಿರೀಟ

ಕೆಂಪು ಚುಕ್ಕುಗಳು ಇಲ್ಲಿ ಕೆಂಪಾಗಿರುತ್ತವೆ. ಶ್ರೀಕೃಷ್ಣ, ವಾಸುದೇವ ಕಂಸ ಇತ್ಯಾದಿಯುವರು ಹಸಿರು, ಶಿಸುಪಾಲ ಬಾಣ ಇತ್ಯಾದಿಯುವರು ಕೆಂಪು ವರ್ಣ ದಲ್ಲಿರುತ್ತಾರೆ. ನಾರದ, ಸಾಂದೀಪನಿ ಮೊದಲಾದವರು ಮಿನಿಕ್ಕು, ಪೂತನ ಕಪ್ಪು ವರ್ಣ. ನರಕಾಸುರ ಚುಕಣ್ಣ ಥಡಿ ಧರಿಸುತ್ತಾನೆ ಆದರೆ ಸಾಮಾನ್ಯ ವಾಗಿ ಪೂತನ, ಯಮ, ಬ್ರಹ್ಮ, ಮುಖವಾಡ ಧರಿಸುತ್ತಾರೆ. ಸಾಮಾನ್ಯ ಸ್ತ್ರೀಪಾತ್ರಗಳು ಮಿನುಕ್ಕು ವರ್ಣದಲ್ಲಿರುತ್ತಾರೆ—ಆದರೆ ಭೂಮಾತೆ, ಸತ್ಯ ಭಾಮಾ, ಯಶೋದಾ ಮೊದಲಾದ ಮಹತ್ವದ ಸ್ತ್ರೀ ಪಾತ್ರಗಳನ್ನು ವಿಶಿಷ್ಟವಾಗಿ ತಯಾರಿಸಲಾಗುತ್ತದೆ. ಸಣ್ಣ ಚುಟ್ಟಿ ಹೊಂದಿದ ಹಸಿರು ವರ್ಣದಲ್ಲಿರುತ್ತಾರೆ. ವೇಷ ಭೂಷಣ ಆಭರಣಗಳು ಬಹುಶಃ ಕಥಕಳಿಯಲ್ಲಿರುವಂತೆಯೇ ಇರುತ್ತವೆ. ಕೆಲವೊಂದು ಪಾತ್ರಗಳಿಗಾಗಿ ಮುಖವಾಡಗಳಿವೆ. ಈ ಪಾತ್ರಗಳು ಪಾತ್ರ ನಿರ್ವಹಣೆಯಲ್ಲಿ ಚಲನವಲನೆ ಹೊಂದಿದ್ದು, ಮುಖದ ಹಾವಭಾವಗಳು ಕಡಿಮೆ ಯಾಗಿರುವುದರಿಂದ ಕೃಷ್ಣನಾಟ್ಟಮ್ಮದಲ್ಲಿ ಮುಖವಾಡಗಳು ಅಪ್ರಾಸಂಗಿಕ ವಾಗಿಲ್ಲ.

ಕಥಕಳಿಯಲ್ಲಿಯಂತೆ ಪದ್ಯದ ಪ್ರತಿ ಪದವನ್ನೂ ಬಿಡಿಸಿ ಹೇಳುವ ಯತ್ನ ಕೃಷ್ಣಾಟ್ಟಮ್ಮದಲ್ಲಿಲ್ಲ. ನಟನೆಗಿಂತ ಹಾವಭಾವ ಮತ್ತು ನೃತ್ಯಕ್ಕೆ ಪ್ರಾಧಾನ್ಯತೆ ಇದೆ. ಕೃಷ್ಣನ ಕಥೆಯನ್ನು ನೃತ್ಯದ ಮೂಲಕ ರಂಗದ ಮೇಲೆ ಅಭಿನಯಿಸ ಲಾಗುತ್ತದೆ ಮತ್ತು **ಅವತಾರಂ, ರಾಸಕ್ರೀಡೆ, ಮುಲ್ಲಪೂಟ್ಟಿಲ್, ಕಾಳಿ ಮರ್ಧನ** ಇತ್ಯಾದಿಗಳಲ್ಲಿಯ ನೃತ್ಯ ಉಪಮಾತೀತವಾಗಿದೆ. ರಸಾಭಿನಯಕ್ಕೂ ಮಹತ್ವಕೊಟ್ಟ ಸಂದರ್ಭಗಳೂ ಉಂಟು. ಕೃಷ್ಣನಾಟ್ಟವು ಅಮೋಘವಾದ ನೃತ್ಯಗಳ, ಸಂದರ್ಭಾನುಸಾರವಾದ ಸಂಗೀತ. ರಾಗಗಳ, ಆಗರವಾಗಿದೆ.

ಕೇರಳದ ಕಲೆಯ ಎಲ್ಲಾ ರೂಪಗಳಲ್ಲಿ ತಪ್ಪದೇ ಇರುವ 'ಚಂಡೆ' ಕೃಷ್ಣ ನಾಟ್ಟಮ್ಮದಲ್ಲಿ ಉಪಯೋಗಿಸಲ್ಪಡುವುದಿಲ್ಲ. ಬಹುಶಃ ಅದೊಂದು **ಅಸುರ ವಾದ್ಯ**ವೆಂದು ಭಾವಿಸಿ ತ್ಯಜಿಸಲ್ಪಟ್ಟಿರಬೇಕು. ಕೃಷ್ಣಾಟ್ಟಮ್ಮದ ನೃತ್ಯಗಳಲ್ಲಿ **ಲಾಸ್ಯವು** ಪ್ರಧಾನವಾಗಿರುವುದರಿಂದ ಚಂಡೆಯ ಉಪಯೋಗ ಇಲ್ಲದಿರ

ಬಹುದು. ಎರಡು ತರಹದ ಮದ್ದಳೆಗಳು (ಸುಧಾ ಮದ್ದಳೆ ಮತ್ತು ಥೊಪ್ಪಿ ಮದ್ದಳೆ) ಮತ್ತು ಇಟಕ್ ಎರಡೂ ಜೊತೆ ಸೇರಿ ನೃತ್ಯಕ್ಕೆ ಅಮೋಘವಾದ ತಾಳಬದ್ಧ ಹಿನ್ನೆಲೆಯನ್ನು ಒದಗಿಸುತ್ತವೆ. ಆಟದ ದಿನದಂದು ದೇವಾಲಯದ ಹೊರಗೆ "ಕೇಳಿಕೂಟ್ಟು" ಇರುತ್ತದೆ.

ಪ್ರಕರಣ 9

ಆನೆಗಳು

ಕೆಲವು ಸಲ ಭಕ್ತಾದಿಗಳು ಭಗವಾನ್ ಗುರುವಾಯೂರಪ್ಪನಿಗೆ ಅರ್ಪಿಸಲ ಆನೆಗಳನ್ನು ತರುತ್ತಾರೆ. ದೇವರಿಗೆ ಆನೆಯನ್ನು ಸಲ್ಲಿಸುವ ವಿಧಾನಕ್ಕೆ "**ನಾದ ಇರುತ್ತಲ್**" ಎಂದು ಕರೆಯುತ್ತಾರೆ. ಇತ್ತೀಚಿನವರೆಗೆ ಬೇರೆ ಬೇರೆ ಭಕ್ತಾದಿಗಳು ಅರ್ಪಿಸಿದ 30 ಆನೆಗಳು ಗುರುವಾಯೂರಿನಲ್ಲಿ ಇದ್ದವು. ಇವುಗಳಲ್ಲಿ ಇತ್ತೀಚೆಗೆ ಗತಿಸಿದ **ಗಜರಾಜನ್ ಕೇಶವನ್** ಆನೆ ಕೇರಳ ರಾಜ್ಯದಲ್ಲಿಯೇ ಹೆಚ್ಚು ಎತ್ತರವಾದ ಆನೆಯಾಗಿತ್ತು, ಇನ್ನೊಂದು ಸಣ್ಣ ಆನೆ ಕಾಲವಾದ್ದರಿಂದ ಇಂದು ಇಪ್ಪತ್ತೆಂಟು ಆನೆಗಳಿದ್ದು ಅವುಗಳಲ್ಲಿ ಇಪ್ಪತ್ತು ಗಂಡಾನೆಗಳು.

ನಾದ ಇರುತ್ತಲ್ : ಈ ಕಾಣಿಕೆಯನ್ನು ಮೂರು ವಿಧದಲ್ಲಿ ಸಲ್ಲಿಸಬಹುದು. 1. ಚಂದನ[1]ದೊಂದಿಗೆ ನಾದಇರುತ್ತಲ್ 2 ವೆಲ್ಲ[2] ಮತ್ತು ಕರಿಯಂಪಟಂ[3]-ಅಂದರೆ ಹೊಸ ಬಿಳಿ ಬಟ್ಟೆ ಮತ್ತು ಉಣ್ಣೆಯ ರಗ್ಗನ್ನು ಹರಿವಿ ನಾದ ಇರುತ್ತಲ್ 3 ನಾಡಥಲ್ಲಲ್

1 ಚಂದನದೊಂದಿಗೆ ನಾದಇರುತ್ತಲ್ : ಮೂರೂ ವಿಧಾನಗಳಲ್ಲಿ ಅತ್ಯಂತ ಸವಿಸ್ತಾರ ಮತ್ತು ವೆಚ್ಚದ್ದಾಗಿದೆ ಈ ವಿಧಾನ. ಇವಕ್ಕೆ ಸಾಮಾನ್ಯವಾಗಿ ಆರು ಉಂಡೆಗಳು ಬೇಕಾಗುತ್ತವೆ. ಇವರೊಂದಿಗೆ ಆ ದಿನ

---

1. ದೇವನೆದುರು ಕೂರುವಂತೆ ಮಾಡುವುದು
2. ಹೊಸ ಬಿಳಿ ಬಟ್ಟೆ
3. ಉಣ್ಣೆಯ ರಗ್ಗು

ನಮಸ್ಕಾರಮ್" ಇರಬೇಕಾಗುತ್ತದೆ. ಅನ್ನದ 1000 ನಾರಾಯಮ್ಮಗಳ ಹೊಸ ಮಡಿಕೆಗಳ ಪಕ್ವಾನ್ನದ ಊಟ ಮತ್ತು ಇತರ ಪೂಜೆಗಳು ಜರುಗಬೇಕಾಗುತ್ತವೆ. ಸಂಪ್ರದಾಯಕ ವಿಧಾನಗಳನ್ನು ಕೆಳಗೆ ವಿವರಿಸಿದೆ : ಈ ವಿಧಾನಗಳೊಂದಿಗೆ ಮೇಲಿನವೂ ಜರುಗಬೇಕಾಗುತ್ತವೆ.

2 ಹೊಸ ಬಿಳಿ ಬಟ್ಟೆ ಮತ್ತು ಉಣ್ಣೆಯ ರಗ್ಗನ್ನು ಹರಡುವುದು

ಒಂದು ಆನೆಯನ್ನು ಅರ್ಪಿಸುವಾಗ್ಗೆ ನಡೆಯುವ ಸಂಭ್ರಮ ಹೀಗಿದೆ. ಬೆಳಗಿನ **ಸೀವೇಲಿಯ** ನಂತರ ಆನೆಯನ್ನು ದೇವರಿಗೆ ಎದುರಾಗಿ ಕೂಡಿಸಲಾಗುವುದು. ಇದಕ್ಕಾಗಿ ಆನೆಯನ್ನು ದೇವಾಲಯದ ಹೊರಗೆ ಮೊದಲೇ ತಂದು ಕಟ್ಟಿರಬೇಕಾಗುತ್ತದೆ.

ಒಂದು ಆನೆಯ ನಾದ ಇರುತ್ತಲ್ಲಿಗಾಗಿ 6 ಅಡಿ $\times$ 6 ಅಡಿ ಸ್ಥಳವನ್ನು ಧ್ವಜಸ್ತಂಬದ ಪೂರ್ವದಲ್ಲಿ ಸ್ವಚ್ಛ ಮಾಡಿ ಆಕಳ ಸೆಗಣಿಯಿಂದ ಸಾರಿಸಿ ಶುಭ್ರಗೊಳಿಸಬೇಕು. ಈ ಸ್ಥಳದ ಪಶ್ಚಿಮಕ್ಕೆ ಧ್ವಜ ಕಂಬದ ಪೂರ್ವಕ್ಕೆ "**ನಿರಪರ**" ವನ್ನಿಡಬೇಕಾಗುತ್ತದೆ. ಇದರ ಪೂರ್ವಕ್ಕೆ ಒಂದು ಉತ್ತಮ ಬಾಳೆಯ ಎಲೆಯಲ್ಲಿ $2\frac{1}{2}$ ವೆಲ್ಲರಿಯನ್ನಿಡಬೇಕು. ಬಲಕ್ಕೆ ಇನ್ನೊಂದು ಬಾಳೆಯ ಎಲೆಯಲ್ಲಿ ತುಂಡರಿಸಿದ ಕಾಯಿ ಚೂರು, ಎರಡು ಬಾಳೆಹಣ್ಣುಗಳನ್ನು ಇಡಲಾಗುತ್ತದೆ. ಇದನ್ನು ಗಣೇಶನಿಗೆ ಅರ್ಪಿಸಬೇಕು. ಕೊಬ್ಬರಿಎಣ್ಣೆ ಹೊಂದಿದ ಪ್ರತಿಯೊಂದರಲ್ಲಿ ನಾಲ್ಕು ಬತ್ತಿ ಇರುವ ನಾಲ್ಕು ದೀಪಗಳನ್ನು ಶುದ್ಧೀಕರಿಸಿದ ಸ್ಥಳದ ನಾಲ್ಕು ಮೂಲೆಗಳಲ್ಲಿ ಇಡಬೇಕು. ದೀಪಗಳ ಮಧ್ಯದಲ್ಲಿ ಬಿಳಿ ಬಟ್ಟೆ, ಉಲ್ಲನ್ ರಗ್ಗನ್ನು ಹರಡಿ ಇದರ ಪೂರ್ವಕ್ಕೆ ಆನೆಯನ್ನು ತರಬೇಕು. ನಂತರ ಮುಖ್ಯ ಅರ್ಚಕ ಮತ್ತು ಕಂಡಿಯೂರ ಪಟ್ಟೇರ್ ಸಾಲಂಕೃತರಾಗಿ ದೇವಾಲಯದಿಂದ ಹೊರ ಬಂದು ಶಂಖವಾದ್ಯ ಮಾಡಲು ಮುರಾರನಿಗೆ ಹೇಳುವರು. ನಂತರ ಆನೆಯ ಯಜಮಾನನಿಗೆ ಅದನ್ನು ಅರ್ಪಿಸಲು ಮುಖ್ಯ ಅರ್ಚಕನು ಆಣತಿಯನ್ನೀಯುವನು. ನಂತರ ಹರಡಿದ ಬಿಳಿ ಬಟ್ಟೆ ಮತ್ತು ರಗ್ಗಿನ ಮೇಲೆ ಆನೆಯನ್ನು ಕೂಡಿಸಲಾಗುವುದು. ಅಂಕುಶ ಮತ್ತು ಕೋಲನ್ನು ಮುಖ್ಯ ಅರ್ಚಕ ತೆಗೆದುಕೊಂಡು ಆನೆಯ ಸೊಂಡಿಲನ್ನು ಮುಟ್ಟಿ, ಆನೆಯನ್ನು ಮಾವುತ

ನಿಗೆ ಒಪ್ಪಿಸಿ ಅಂಕುಶ ಮತ್ತು ಕೋಲನ್ನು ಆತನ ಕೈಗೆ ಕೊಡುತ್ತಾನೆ. ಮಲ್ಲಿಸ್ಸರಿ ನಂಬೂದರಿಪಾದರು ಹಾಜರಿರುತ್ತಾರೆ. ಮುಖ್ಯ ಅರ್ಚಕನು ಆನೆಗೆ ಗಂಧ ಹಚ್ಚಿ ತೀರ್ಥ ಮತ್ತು ಪ್ರಸಾದಗಳನ್ನು, ಮಾವುತನಿಗೆ ಒಪ್ಪಿಸುವ ಮೊದಲು ಕೊಡುತ್ತಾನೆ. ಆನೆಗೆ ಹೆಸರನ್ನು ಇಡುತ್ತಾನೆ.

ಸಾಂಪ್ರದಾಯಕವಾದ ಸಮಾರಂಭವು ನೆರವೇರಿದ ಬಳಿಕ, ಮಡಂಪಾಡ ನಂಬಿಯಾರ ಬಿಳಿ ಬಟ್ಟೆ ಮತ್ತು ರಗ್ಗನ್ನು ತೆಗೆದುಕೊಳ್ಳುವನು. ಇದೆಲ್ಲದರ ವೆಚ್ಚವನ್ನು ದಾನಿಯು ವಹಿಸಬೇಕಾಗುತ್ತದೆ.

3 ನಾಡಥಲ್ಲಲ್

ಹಸುಗಳು, ಕರುಗಳು ಇತ್ಯಾದಿಗಳನ್ನು ತಂದು ದೇವಾಲಯಕ್ಕೆ ಒಪ್ಪಿಸು ವಂತೆ ಕೆಲವು ಸಲ ಯಾವ ವಿಧವಾದ ಯೋಗ್ಯ ಕ್ರಮುಗಳಿಲ್ಲದೆಯೇ ಆನೆಯನ್ನು ದೇವಸ್ಥಾನಕ್ಕೆ ಒಪ್ಪಿಸಲಾಗುತ್ತದೆ. ಇದನ್ನು "ನಾಡಥಲ್ಲಲ್" ಎಂದು ಕರೆಯು ತ್ತಾರೆ. ಇದಕ್ಕಾಗಿ ಎಷ್ಟೂ ಹಣ ವೆಚ್ಚವಾಗುವುದಿಲ್ಲ. ಆನೆಯನ್ನು ದೇವಾ ಲಯಕ್ಕೆ ತರಲು "**ಜೀವಧಾನಮ್**" ದಾಖಲೆಯಲ್ಲಿ ಒಂದು ದಾಖಲೆ ಬರೆದು ದಾನಿಗೆ ಒಂದು ರಸೀದಿಯನ್ನು ಕೊಡಲಾಗುವುದು.

ಆನೆಗಳ ನಾದ ಇರುತ್ತಲ್ಲನ್ನು ಯಾವ ದಿನವಾದರೂ ನಡೆಸಬಹುದು. ಆದರೆ ಈ ಕಾಣಿಕೆಯನ್ನು ಸಲ್ಲಿಸುವವರು ದೇವಾಲಯದ ಅಧಿಕಾರಿಗಳಿಗೆ ಕನಿಷ್ಟ ಪಕ್ಷ ಹದಿನೈದು ದಿನವಾದರೂ ಮುಂಚಿತವಾಗಿ ತಿಳಿಸಬೇಕಾಗುತ್ತದೆ ಮತ್ತು ಯೋಗ್ಯ ತಯಾರಿಕೆಯನ್ನು ಪೂರೈಯಿಸಬೇಕಾಗುತ್ತದೆ. ಆನೆಯನ್ನು ಕಾಣಿಕೆ ಯಾಗಿ ಅರ್ಪಿಸುವವರು ಸಾಮಾನ್ಯವಾಗಿ ದೇವಸ್ಥಾನದ ಹುಂಡಿಗೆ, ಆನೆಯ ನಿರ್ವಹಣೆಯ ಸಲುವಾಗಿ ಒಂದಿಷ್ಟು ಹಣ ಹಾಕುತ್ತಾರೆ.

ಏಕೈಕ ಘಟನೆ

ಗುರುವಾಯೂರು ದೇವಾಲಯದಲ್ಲಿ ಆನೆಗಳು ಇರುವುದು ಒಂದು ಏಕೈಕ ಘಟನೆ. ಕೇರಳದ. ಅಷ್ಟೇ ಏಕೆ ಇಡೀ ಭಾರತದಲ್ಲಿ ಇಷ್ಟೊಂದು ಆನೆ

ಗಳು ಯಾವುದೇ ದೇವಾಲಯದಲ್ಲಿ ಇಲ್ಲ. ಇನ್ನೂ ವಿಸ್ಮಯದ ಸಂಗತಿಯೆಂದರೆ ಈ ಎಲ್ಲಾ ಆನೆಗಳು ಬೇರೆ ಬೇರೆ ಕಾಲದಲ್ಲಿ ಭಕ್ತಾದಿಗಳಿಂದ ಕಾಣಿಕೆಯಾಗಿ ಬಂದಂಥವು. ಈ ಆನೆಗಳಲ್ಲಿ ಕೆಲವೊಂದು ಅವುಗಳ ಜೀವಿತ ಅವಧಿಯಲ್ಲಿ ಅತ್ಯಂತ ಮಹತ್ತರ, ಉತ್ಕೃಷ್ಟ ಮತ್ತು ಆನೆಯ ಮೇಲೆ ಪ್ರೇಮವಿರುವವರ ಅಚ್ಚು ಮೆಚ್ಚಿನವುಗಳಾಗಿವೆ. ಇವುಗಳಲ್ಲಿ ಗುರುವಾಯೂರು ಪದ್ಮನಾಭನ್ ಮತ್ತು ಗಜರಾಜನ್ ಕೇಶವನ್; ಈ ಆನೆಗಳು ಚಿರಸ್ಮರಣೀಯವಾಗಿವೆ.

ಗುರುವಾಯೂರು ಪದ್ಮನಾಭನ್ : ಗುರುವಾಯೂರಿಗೆ ಚೆರುಕುನ್ನತ-ನಂಬೂದಿರಿ ಈ ಆನೆಯನ್ನು ಭಕ್ತಿಪೂರ್ವಕವಾಗಿ ಯೋಗ್ಯವಾದ "**ನಾದ ಇರುತ್ತಲ್**"ದ ನಂತರ ಅರ್ಪಿಸಿದರು.

ಈ ನಂಬೂದಿರಿಗೆ ಮಕ್ಕಳಿರಲಿಲ್ಲ. ತನ್ನ ದುರ್ದೈವಕ್ಕಾಗಿ ಹಗಲಿರುಳೂ ಕಣ್ಣೀರಿಡುತ್ತಿದ್ದ. ಭಗವಾನ್ ಗುರುವಾಯೂರಪ್ಪನ ಭಕ್ತನಾದ ಕುನ್ನಿಕ್ಕವು ನಂಬೂದಿರಿ— ಈತ **ಪುರಾಣ ಪಾರಾಯಣ**ಕ್ಕಾಗಿ ಪ್ರಸಿದ್ಧಿ ಪಡೆದಿದ್ದ-ಚೆರುಕುನ್ನತರಿಗೆ ಒಂದು ದಿನ 'ನೀನು ಗುರುವಾಯೂರಪ್ಪನಿಗೆ ಆನೆಯ ಕಾಣಿಕೆ ಸಲ್ಲಿಸಿದರೆ ಭಗವಂತನು ನಿನಗೆ ಪುತ್ರ ಸಂತತಿಯನ್ನು ದಯಪಾಲಿಸುತ್ತಾನೆಂದು' ಉಪದೇಶಿಸಿದನು. ಅದರಂತೆ ಚೆರುಕುನ್ನತ ಗುರುವಾಯೂರಿಗೆ ಬಂದು **ಭಜನೆ** ಸಲ್ಲಿಸಿ, ತನಗೆ ಮಕ್ಕಳಾದರೆ ಆನೆಯನ್ನು ಕಾಣಿಕೆಯಾಗಿ ಅರ್ಪಿಸುತ್ತೇನೆಂದು ಹರಕೆ ಹೊತ್ತ. ಚೆರುಕುನ್ನನ ಮೇಲೆ ಭಗವಾನ್ ಗುರುವಾಯೂರಪ್ಪನು ಅನುಗ್ರಹಿಸಿ ಮಕ್ಕಳನ್ನು ದಯಪಾಲಿಸಿದ. ಆಗ ಚೆರುಕುನ್ನ ನಂಬೂದರಿಯು ದೇವಾಲಯಕ್ಕೆ ಆನೆಯನ್ನು ಅರ್ಪಿಸಿ ಅದಕ್ಕೆ ಪದ್ಮನಾಭ ಎಂದು ಹೆಸರಿಟ್ಟ ಹೀಗೆ ಇದೆ ಕಥೆ.

ಗುರುವಾಯೂರಿಗೆ ಪದ್ಮನಾಭ ಬಂದು ಸೇರಿದಾಗ್ಗೆ ದೇವಾಲಯದಲ್ಲಿ ಒಂದೋ ಎರಡೋ ಆನೆಗಳಿದ್ದವು. ಚೆರುಕುನ್ನತನ ಕುಟುಂಬವು ಹೆಚ್ಚು ಹೆಚ್ಚು ಮಕ್ಕಳನ್ನು ಭಗವಂತನ ದಯದಿಂದ ಪಡೆದು ವೃದ್ಧಿಸಿದಂತೆ ದೇವಾಲಯಕ್ಕೆ ಪದ್ಮನಾಭನು ಬಂದ ನಂತರ ಇಲ್ಲಿಯ ಆನೆಗಳ ಸಂಖ್ಯೆಯೂ ಹೆಚ್ಚಿತು.

ದಿನಗಳದಂತೆ ಕೇರಳದಲ್ಲೆಲ್ಲಾ ಅತ್ಯಂತ ಪ್ರಸಿದ್ಧಿಯಾಯಿತು ಪದ್ಮನಾಭ. ಉತ್ಸವಕ್ಕೆ ಒಯ್ದಲ್ಲೆಲ್ಲಾ ಮೆರವಣಿಗೆಯಲ್ಲಿ ಅದಕ್ಕೆ ಅಗ್ರಸ್ಥಾನ ಸಲ್ಲಲೇಬೇಕು.

ಆತನಿರುವ ಎಲ್ಲಾ ಉತ್ಸವಗಳಲ್ಲಿ ಪದ್ಮನಾಭನೇ ಉತ್ಸವ ಮೂರ್ತಿಯನ್ನು ಹೊರಬೇಕು. ಯಾವದೇ ಆನೆಗೆ ಈ ಸ್ಥಾನ ದೊರೆಯುವುದನ್ನು ಪದ್ಮನಾಭ ಸಹಿಸಲಾರ. ತಲೆಯ ಮೇಲೆ, "ಥಿಡಂಪು" ಉತ್ಸವಮೂರ್ತಿಯನ್ನು ಇಟ್ಟ ಕೂಡಲೆ ಇಡೀ ಶರೀರವನ್ನು ಮುಂದಕ್ಕೆ ಚಾಚಿ, ಸಾಧ್ಯವಿದ್ದಷ್ಟು ತಲೆಯನ್ನು ಮೇಲಕ್ಕೆತ್ತಿದಾಗ್ಗೆ ಆನೆಗಳ ಸಾಲಿನಲ್ಲಿ ಪದ್ಮನಾಭನೇ ಎತ್ತರದವನು, ಹೆಚ್ಚಿನವನು. ಮೆರವಣಿಗೆಯು ಮುಕ್ತಾಯವಾಗಿ ಮೇಲಿಂದ ಉತ್ಸವ ಮೂರ್ತಿಯನ್ನು ಇಳಿಸುವವರೆಗೂ ಪದ್ಮನಾಭನ ಶರೀರ, ಈ ಸ್ಥಿತಿಯಲ್ಲಿರುತ್ತಿತ್ತು. ಹೀಗಾಗಿ ಎಲ್ಲಿ ಹೋದರೂ ಆತನು ತನ್ನ ರಾಜಗಂಭೀರವನ್ನು ಉಳಿಸಿಕೊಳ್ಳುತ್ತಿದ್ದನು.

ನೋಟದಲ್ಲಿ ಮಾತ್ರವಲ್ಲದೆ ನಡೆಯಲ್ಲೂ ಪದ್ಮನಾಭನು ರಾಜನಂತಿದ್ದನು. ಯಾವಾಗಲೂ ಶಾಂತ, ಗಂಭೀರ ಶಾಂತಚಿತ್ತವುಳ್ಳವನಾಗಿರುತ್ತಿದ್ದನು. ಮಕ್ಕಳ ರೀತಿಯ ತಮಾಷೆಗಳೆಂದರೆ ಆಗದು. ಯಾರಾದರೂ ನೋವನ್ನುಂಟು ಮಾಡಲು ಅಥವಾ ತೊಂದರೆ ಕೊಡಲು ಪ್ರಯತ್ನಿಸಿದರೆ ತನ್ನ "**ವಿಶ್ವ ರೂಪಮ್**" ತೋರಿಸಿ ಅವರನ್ನು ಹೆದರಿಸುತ್ತಿದ್ದನು. ಅವರು ಕಾಲಿಗೆ ಬುದ್ಧಿ ಹೇಳುತ್ತಿದ್ದರು. ಆತನು ತನ್ನ ಜೀವಮಾನದಲ್ಲಿಯೇ ಯಾರಿಗೂ, ಯಾವ ವಸ್ತುವಿಗೂ ಅಪಾಯ ಅಥವಾ ಕೆಡಕನ್ನುಂಟುಮಾಡಿಲ್ಲ.

ಪ್ರಸಿದ್ಧವಾದ ಈ ಆನೆಯ ಜೀವಿತದಲ್ಲಿ ನಡೆದ ಅನೇಕ ವಿಸ್ಮಯಕಾರಕ ಕಥೆಗಳು ಇವೆ.

ನಿದ್ರಾಭಂಗರಾತ್ರಿ

ಒಂದು ಸಲ ದೇವಾಲಯದಲ್ಲಿ ವಾರ್ಷಿಕ ಉತ್ಸವ ನಡೆಯುತ್ತಿತ್ತು. ಉತ್ಸವದ ಮಹತ್ವದ ಆರನೆಯ ದಿನ, ಉತ್ಸವದಮೆರವಣಿಗೆ ಅತಿ ವಿಜೃಂಬಣೆಯಿಂದ ಸಾಗಿತ್ತು. ಆನೆಗಳ ಸಾಲಿನ ಮಧ್ಯದಲ್ಲಿ ಪದ್ಮನಾಭ ರಾರಾಜಿಸುತ್ತಿದ್ದ ತಲೆಯ ಮೇಲೆ "ತಿಡಂಪು" ಉತ್ಸವ ಮೂರ್ತಿ. ಪಂಚವಾದ್ಯಗಳ ತಾಳಕ್ಕೆ ಕಿವಿಗಳನ್ನು ಬೀಸುತ್ತಾ, ಎಲ್ಲಾ ಆನೆಗಳು ನಿಂತಿದ್ದವು ಸಹಸ್ರಾರು ಭಕ್ತಾದಿಗಳು ಉತ್ಸವ ನೋಡಿ ಆನಂದ ಭರಿತರಾಗಿದ್ದರು. ಒಮ್ಮೆಲೇ ಪದ್ಮನಾಭನು ರೇಗಿ,

ದೇವಾಲಯದ ಸುತ್ತ ಪ್ರದಕ್ಷಣೆ ಹಾಕ ಹತ್ತಿದ. ಜನ ಕಿರುಚುತ್ತ ರಕ್ಷಣೆಗಾಗಿ ಸಿಕ್ಕಲ್ಲಿ ನುಸುಳಿದರು. ಗೋಪುರ ಹತ್ತಿದರು ಎಲ್ಲಲ್ಲೂ ಕೂಗಾಡ, ಕೋಲಾಹಲ. ಏನೂ ತೋಚದಂತಾಗಿ ಉಳಿದ ಆನೆಗಳನ್ನು ಹೊರಕ್ಕೆ ಅಟ್ಟಲಾಯಿತು. ಪದ್ಮನಾಭನ ತಲೆಯ ಮೇಲೆ ಜಾರಿ ಅಲವಟ್ಟವ್ ಮತ್ತು ವೆಂಕಮುರವ್-ಛತ್ರ ಚಾಮರಗಳನ್ನು ಹಿಡಿದು ಕುಳಿತವರು ಅಪಾಯ ವಿಲ್ಲದೆ ಕೆಳಕ್ಕೆ ಹಾರಿ ಓಡಿ ಹೋದರು. ಮಂಜಾರ ನಂಬೂದಿರಿ ಭಗವಾನ್ ಗುರುವಾಯೂರಪ್ಪನ ಥಿಡಂಪು-ಉತ್ಸವ ಮೂರ್ತಿ ಹಿಡಿದು ಕುಳಿತವರು ಆ ಸ್ಥಳವನ್ನು ಬಿಟ್ಟು, ತಮ್ಮ ಜೀವಹೋದರೂ ಬಿಡನೆಂದು ಗಟ್ಟಿಯಾಗಿ ಕುಳಿತರು. ಆದರ ಈ ಗೊಂದಲ, ದೊಡ್ಡ ಕಿರಚಾಟ ಯಾವುದನ್ನೂ ಗಮನಕ್ಕೆ ತೆಗೆದುಕೊಳ್ಳದೆ ದೇವಾಲಯದ ಸುತ್ತ ಹನ್ನೊಂದು ಸಲ ಪ್ರದಕ್ಷಣೆ ಮಾಡಿ ಸರ್ರನೆ ತಿರುಗಿ ಮೂರು ಬಾರಿ ವಿರುದ್ಧ ದಿಕ್ಕಿನಲ್ಲಿ ಪ್ರದಕ್ಷಣೆ ಹಾಕಿದ. ಹೀಗೆ ಸುತ್ತುವಾಗ್ಗೆ ಯಾರಿಗೂ ನೋವನ್ನುಂಟು ಮಾಡಲಿಲ್ಲ, ದೀಪವನ್ನು ಕೂಡ ಕೆಡಿಸಲಿಲ್ಲ. ಇಷ್ಟೆಲ್ಲ ನಡೆದಾಗ್ಗೆ ಅದರ ಹಿಂದಿಂದೆ ಅದನ್ನು ಹಿಡಿದು ಸರಪಳಿ ಬಿಗಿಯಲು ಮಾವುತರು ಓಡಿಯೇ ಓಡುತ್ತಿದ್ದರು. ಏನೂ ನಡೆದಿಲ್ಲ ವೆಂಬುವಂತೆ ಪೂರ್ವದ ಮಹಾದ್ವಾರದಿಂದ ಹೊರಗೆ ಬರುವಾಗ್ಗೆ, ಗೋಪುರ ದಲ್ಲಿ ಅಡಗಿ ಕೊಂಡವರೊಬ್ಬರು ಮಂಜಾರ ನಂಬೂದಿರಿಯವರನ್ನು ಎತ್ತಿ ಕೊಂಡರು, ಪದ್ಮನಾಭನು ನೇರವಾಗಿ ಛತ್ರದ ವರಾಂಡವನ್ನು ಹೊಕ್ಕು ಮೂಲೆ ಯಲ್ಲಿ ಸ್ತಂಬ್ಧನಾಗಿ ನಿಂತು ಬಿಟ್ಟನು. ಯಾರನ್ನೂ ಸಮೀಪಕ್ಕೆ ಬರಗೊಡ ಲಿಲ್ಲ. ಯಾವ ಅಂಕೆಯೂ ಇಲ್ಲದೆ ಛತ್ರದ ಒಳಾವರಣದಲ್ಲಿ ರಾತ್ರಿ ಕಳೆದನು. ಇಡೀ ರಾತ್ರಿ ಅಂದು ಗುರುವಾಯೂರಿನಲ್ಲಿ ಯಾರೂ ಕಣ್ಣು ಹಚ್ಚಿ ನಿದ್ರೆ ಮಾಡಲಿಲ್ಲ. ಆದರೆ ಯಾವದೇ ದುರ್ಘಟನೆಯನ್ನು ಪದ್ಮನಾಭನು ಮಾಡಲಿಲ್ಲ.

ಮುಗುಪಿನಿಂದ ಗಾಬರಿ

ದೇವಾಲಯದ ಸ್ತ್ರೀ ಪರಿಚಾರಕೆಯರು ದೇವಸ್ಥಾನದ ಪೂರ್ವಕ್ಕೆ 2 ಕಿ. ಮೀಟರ್ ದೂರದಲ್ಲಿಯ ಥಿರುವೆಂಕಿಟವ್‌ನಲ್ಲಿ ವಾಸಿಸುತ್ತಿದ್ದರು, ಆಗಾಗ್ಗೆ ಪದ್ಮನಾಭನನ್ನು ಈ ಕಂಪೌಂಡಿಗೆ ಒಯ್ದು ಸರಪಳಿಯಿಂದ ಕಟ್ಟಿಹಾಕಲಾಗುತ್ತಿತ್ತು. ಒಂದು ದಿನ ಇಂತಹ ಪರಿಚಾರಿಕೆಯ ಕಂಪೌಂಡಿ

ನಲ್ಲಿ ಪದ್ಮನಾಭನು ತಾಳೆಯ ಎಲೆಗಳನ್ನು ಸವಿಯುತ್ತಾ ನಿಂತಿದ್ದನು. ಮಾವುತನು ಹೊರಟು ಹೋಗಿದ್ದ, ಹೆಂಗಸು ಅಡಗೆ ಮನೆಯಲ್ಲಿ ಆಹಾರ ತಯಾರಿಕೆಯಲ್ಲಿ ತೊಡಗಿದ್ದಳು. ಅವಳ ಎರಡು ವರ್ಷದ ಏಕೈಕ ಮಗ ತಾಯಿಯ ಗಮನಕ್ಕೆ ಬಾರದಂತೆ ಸಾವಕಾಶವಾಗಿ ಮನೆಯಿಂದ ಹೊರ ಬಂದ, ನಿಧಾನವಾಗಿ ಪದ್ಮನಾಭನ ಹತ್ತಿರಕ್ಕೆ ಬಂದ. ಕಾಲುಗಳ ನಡುವೆ ಆನೆಯ ಕೆಳಗೆ ಕುಳಿತುಕೊಂಡು ಕೈಗೆ ಸಿಕ್ಕಿದ ವಸ್ತುಗಳೊಂದಿಗೆ ಮಗು ಆಟವಾಡುತ್ತಾ ಕುಳಿತಿತು. ಪದ್ಮನಾಭನು ಗರಿಗಳನ್ನು ತಿನ್ನುತ್ತಾ ಆಗಾಗ್ಗೆ ಅದನ್ನು ಬೀಸುತ್ತಾ ಅತ್ತಿತ್ತಾ ಚಲಿಸುತ್ತಾ ಇದ್ದ. ಆದರೆ ಕಾಲುಗಳ ಹತ್ತಿರದಲ್ಲಿಯೇ ಮಗು ಇದೆ ಎಂದು ತಿಳಿದ ಪದ್ಮನಾಭ ಚಲಿಸಲು ಗಾಬರಿಸಿದ. ಕಾಣಲು ಸಾಧ್ಯವಿಲ್ಲ. ನಿಶ್ಚಲನಾಗಿ ನಿಂತು ಬಿಟ್ಟ– ಬಾಲವನ್ನೂ ಸಹ ಅಲ್ಲಾಡಿಸಲಿಲ್ಲ. ಆನೆಗಳು ಸಾಮಾನ್ಯವಾಗಿ ಬಾಲ ಬೀಸುತ್ತಿರುತ್ತವೆ. ಸೊಂಡಿಲಲ್ಲಿ ದೊಡ್ಡ ಗರಿ ಇತ್ತು, ತಲೆ ಎತ್ತಿ ಗರಿಯೊಂದಿಗೆ ಸುಮ್ಮನೆ ನಿಂತ, ಅಲ್ಲಾಡಿದರೆ ಮಗುವಿಗೆ ಅಪಾಯ ! ಮಗು ಎಲ್ಲಿದೆ ತಿಳಿಯದು ! ಜೋರಾಗಿ ಉಸಿರಾಡಿದರೆ ಮಗು ಗಾಬರಿಸಿತೆಂದು ಸದ್ದಿಲ್ಲದೆ ನಿಂತ, ವೇಳೆ ಕಳೆಯಿತು. ಕೈಯಲ್ಲಿಯ ಕಾರ್ಯ ಮುಗಿದ ನಂತರ ತಾಯಿ ಅಡಿಗೆ ಮನೆಯಿಂದ ಹೊರಬಂದು ಮನೆಯಲ್ಲಿ ಮಗು ಇಲ್ಲದ್ದನ್ನು ಗಮನಿಸಿ ಹುಡುಕುತ್ತಾ ಹೊರಬಂದಳು. ಆನೆಯ ಕಾಲುಗಳ ಮಧ್ಯದಲ್ಲಿ ಮಗು ಇರುವುದನ್ನು ಕಂಡ ತಾಯಿ ಜೋರಾಗಿ ಕೂಗಿಕೊಂಡಳು, ಗಾಬರಿಯಾದಳು. ಮಗು ಅಲ್ಲಿಂದ ಕದಲಲಿ ಎಂದು ಸಾಧ್ಯವಿದ್ದ ಎಲ್ಲಾ ರೀತಿಯಲ್ಲಿ ಪ್ರಯತ್ನಿಸಿದಳು. ಈ ಅವಧಿಯಲ್ಲೆಲ್ಲಾ ಅವಳು ಭಗವಾನ್ ಗುರುವಾಯೂರಪ್ಪನ ನಾಮಸ್ಮರಣೆ ನಡೆಸಿದ್ದಳು. ಮಗು ಆಟದಲ್ಲಿ ಎಷ್ಟೊಂದು ಮಗ್ನವಾಗಿತ್ತೆಂದರೆ ಆ ಸ್ಥಳ ಬಿಟ್ಟು ಕದಲಲು ನಿರಾಕರಿಸಿತು. ತಾಯಿ ದಾರಿಕಾಣದಾದಳು. ಪದ್ಮನಾಭನು ಭವ್ಯವಾದ ತನ್ನ ಕಿವಿಗಳನ್ನು ಮೆಲ್ಲಗೆ ಚಲಿಸಿ, ತಾಯಿ ಬಂದು ನಿನ್ನ ಮಗನನ್ನು ಕರೆದುಕೊಂಡು ಹೋಗು ಎನ್ನುವಂತೆ ಬೀಸುತ್ತಾ, ನಿಶ್ಚಲನಾಗಿ ನಿಂತುಬಿಟ್ಟ. ತಾಯಿಯು ಜೋರಾಗಿ ಅಳ ಹತ್ತಿದಳು, ಸಹಾಯಕ್ಕಾಗಿ ಕೂಗಿದಳು. ಮಾವುತನಿಗೆ ಈ ಘಟನೆಯ ವಾಸನೆ ಹೇಗೋ ಬಡಿಯಿತು. ಓಡೋಡಿ ಬಂದು ಮಗುವನ್ನು ಎತ್ತಿಕೊಂಡನು. ಅಬ್ಬಾ ಒಂದು ಕಂಟಕ ಕಳೆಯಿತು ಎನ್ನುವಂತೆ ಪದ್ಮನಾಭನು ಬಿಡುಗಡೆಯ ಉಸಿರನ್ನು ಬಿಟ್ಟು.

ತಲೆಯನ್ನು ಕೆಳಕ್ಕೆ ಹಾಕಿ, ಬಾಯಿಯೊಳಗಿನ ಗರಿಯನ್ನು ಕೆಳಕ್ಕೆ ಹಾಕಿದ, ಬಾಲವನ್ನು ಬೀಸಲು ಪ್ರಾರಂಭಿಸಿದ, ಏನೂ ಸಂಭವಿಸಿಲ್ಲವೆಂಬಂತೆ ತಾಳೆಯ ಗರಿಗಳನ್ನು ತಿನ್ನಲು ಪ್ರಾರಂಭಿಸಿದನು.

ಕಾದಾಟವಿಲ್ಲದೆಯೇ ಯಶಸ್ಸು

ಒಂದು ಬಾರಿ ತ್ರಿಚೂರಿನ ಸಮೀಪದ ಪೆರುವೂನಂದ, ಇಲ್ಲಿಯ ಪ್ರಸಿದ್ಧ ಪೂರಮ್ಮಿಗೆ, ಉತ್ಸವಕ್ಕೆ, ಪದ್ಮನಾಭನನ್ನು ಒಯ್ದಿತ್ತು. ಹದಿನಾಲ್ಕು ಆನೆಗಳನ್ನು ಏಳರ ಸಾಲುಗಳಂತೆ ಎದುರು ಬದುರಾಗಿ ಎರಡು ಸಾಲುಗಳಲ್ಲಿ ಆನೆಗಳನ್ನು ನಿಲ್ಲಿಸುವುದು ಅಲ್ಲಿಯ ರೂಢಿ. ಒಂದು ಬದಿಗೆ "**ಊರಕಾಟಮ್ಮನ ಉತ್ಸವ**" ವಿಗ್ರಹ ಹೊತ್ತ ಪದ್ಮನಾಭನು ಸಾಲಿನ ಮಧ್ಯದಲ್ಲಿ ನಿಂತಿದ್ದಾನೆ. ಆತನಿಗೆ ನೇರವಾಗಿ ವಿರುದ್ಧವಾಗಿ ಅಂದು ಪ್ರಸಿದ್ಧಿಯಾದ ಆನೆ 'ಕಿರಂಗತ ಕೇಶವನ್' ನಿಂತಿದ್ದಾನೆ. ಕೇಶವನ್ ಬಹಳ ಜಂಬದವ, ಊರಕಾಟಮ್ಮನ ಥಿಡಂಪನ್ನು ಪದ್ಮನಾಭನು ಹೊತ್ತ ನೋಟವನ್ನು ಸಹಿಸದಾದನು. ತಕ್ಷಣ ಎಡ ಬಲಕ್ಕೆ ನುಗ್ಗಿ ಇತರ ಆನೆಗಳನ್ನು ಘಾಸಿಗೊಳಿಸಿದ. ಉಂಟಾದ ಗೊಂದಲದಲ್ಲಿ ಮಾವುತರಿಗೆ ತಮ್ಮ ಆನೆಗಳನ್ನು ನಿಯಂತ್ರಿಸುವುದಾಗಲಿಲ್ಲ, ಬಲಶಾಲಿಯಾದ ಕಿರಂಗತ ಕೇಶವನ್ ಮತ್ತು ಪದ್ಮನಾಭನನ್ನು ಹೊರ್ತು ಪಡಿಸಿ ಇತರ ಸಲಗಗಳು ಎಲ್ಲೆಡೆಯಲ್ಲಿ ಹೆಚ್ಚಿನ ಹಾಹಾಕಾರ ಮಾಡುತ್ತ ಓಡಿದವು. ಗಲಾಟೆಯನ್ನು ಮಾಡುವ ಇಚ್ಛೆಯೇ ಇಲ್ಲ ಎನ್ನುವಂತೆ, ಪದ್ಮನಾಭನು ಮೆಲ್ಲನೆ ಪಕ್ಕಕ್ಕೆ ಸರಿದು ಗೋಡೆಯ ಬದಿಯಲ್ಲಿ ನಿಂತನು. ಆದರೆ ಕೇಶವನಿಗೆ ಹೀಗೆ ನಡೆಯುವುದು ಬೇಕಿರಲಿಲ್ಲ. ಯುದ್ಧಭೂಮಿಯಲ್ಲಿ ಶೂರ ಸರದಾರರು ಪರಸ್ಪರ ಸೆಣೆಸಾಡುವಂತೆ ಕೇಶವನು ಭೋರ್ಗರಿಯುತ್ತಾ ಪದ್ಮನಾಭನತ್ತ ನುಗ್ಗಿದ. ರಾಜಗಾಂಭೀರ್ಯದಿಂದ ಪದ್ಮನಾಭನು ಅಚಲನಾಗಿಯೇ ಇದ್ದ, ಆದರೆ ಸಾಕಷ್ಟು ಎಚ್ಚರಿಕೆಯಿಂದಲೂ ಇದ್ದ ಕೇಶವನು ಸಾಕಷ್ಟು ಸಮೀಪಿಸಲು, ನೀಳವಾದ ತನ್ನ ಸೊಂಡಿಲನ್ನು ಘೀಳಿಡುತ್ತಾ ನಾಲ್ಕಾರು ಬಾರಿ ಭೂಮಿಗೆ ಅಪ್ಪಳಿಸಿದನು. ಕಿರಂಗತ ಕೇಶವನು ಕೋಪಾವೇಶದಿಂದ ಕೂಡಿದ್ದರೂ, ಪದ್ಮನಾಭನ ಮುನ್ನೆಚ್ಚರಿಕೆಯನ್ನು ತಿಳಿಯುವಷ್ಟು ಜಾಣನಾಗಿದ್ದ. ಒಂದು ಹೆಜ್ಜೆಯನ್ನೂ ಕೂಡ ಮುಂದಕ್ಕೆ ಇಡದೆ, ಶಾಂತವಾಗಿ ಹಿಂದಕ್ಕೆ

ಹೊರಟು ಹೋದ. ಕೇಶವನ್ ಪದ್ಮನಾಭನ ಹಿರಿಮೆಯನ್ನು ಒಪ್ಪಿ ತಲೆ ತಗ್ಗಿಸಿದ. ಕೂಡಲೆ ಎಲ್ಲವೂ ನಿಯಂತ್ರಣ ಹೊಂದಿ. ಪೂರಮ್ ಶಾಂತಯುಕ್ತ ವಾಗಿ ನಡೆಯಿತು.

ಇಬ್ಬರೊಂದಿಗೆ ಕಾಳಗ

ಇನ್ನೊಂದು ಸಂದರ್ಭ. ಉತ್ಸವಕ್ಕಾಗಿ ಪದ್ಮನಾಭನನ್ನು ಎರ್ನಾಕುಲಮ್ಮಿಗೆ ಒಯ್ದಿತ್ತು. ಆನೆಗಳನ್ನು ತೊಳೆಯುವುದಕ್ಕಾಗಿ ಸಮುದ್ರದ ಒಳ ಒತ್ತಿದ ನೀರಿನ ಘಾಟಗಳಿಗೆ ಒಯ್ದು ತೊಳೆಯಲಾಗುತ್ತಿತ್ತು. ನೀರಿನವರೆಗೆ ಇಳುಕಲಾದ ಬದಿಗಳಿವೆ. ಪದ್ಮನಾಭನನ್ನು ತೊಳೆಯುವುದಕ್ಕಾಗಿ ಮಾವುತನು ಅಲ್ಲಿಗೆ ಒಯ್ದನು. , ಅಂದು ಪ್ರಸಿದ್ಧ ಹೊಂದಿದ ಆನೆಗಳೆಂದರೆ "**ಅಕವೂರ್ ಗೋವಿಂದನ್**" ಮತ್ತು "**ಒಟ್ಟಕೊಂಪನ್**" ಇವೆರಡೂ ಆನೆಗಳೂ ಬಹಳ ಜಂಬ ಮತ್ತು ದುಷ್ಕೃತ್ಯಗಳಿಗಾಗಿ ಹೆಸರುವಾಸಿಯಾಗಿದ್ದವು. ಈ ಆನೆಗಳನ್ನು ತೊಳೆಯುವ ಕಾರ್ಯ ಮುಗಿದಿತ್ತು, ಎರಡೂ ಆನೆಗಳು ಜಂಬದಿಂದ ಕೂಡಿದ್ದರೂ ಪರಸ್ಪರ ಸ್ನೇಹಿತರಾಗಿದ್ದರು. ಅವುಗಳನ್ನು ತೊಳೆಯುವ ಕಾರ್ಯ ಪೂರ್ಣವಾಗುತ್ತಾ ಬಂದಿತ್ತು, ಆ ಮಾವುತರು ತಮ್ಮ ಆನೆಗಳು ಬಹಳ ಅಪಾಯಕಾರಿ, ಪದ್ಮನಾಭನನ್ನು ಒಂದಿಷ್ಟು ಅಲ್ಲಿಯೇ ನಿಲ್ಲಿಸಿ ಎಂದು ಕೂಗಿದರು. ಪದ್ಮನಾಭನ ಮಾವುತನೂ ತನ್ನ ಆನೆಯೂ ಅಂತಹದೇ, ಅದರ ಬಲಶಾಲಿತನ ತನಗೆ ಗೊತ್ತೆಂದೂ, ಹೇಳಿ ಆನೆಯನ್ನು ನೀರಿಗೆ ಬಿಟ್ಟ, "**ಒಟ್ಟಕೊಂಪನ್**" ತನಗೆ ಇದು ಅವಮಾನವೆಂದು ತಿಳಿದು ತಕ್ಷಣ ನೀರಿನಿಂದ ಮೇಲೆದ್ದು ಯಾವುದಕ್ಕಾದರೂ ಸಿದ್ಧ, ಎನ್ನುವ ರೀತಿಯಲ್ಲಿ ಮೇಲಕ್ಕೆ ನಡೆದು ಬರಲು ಪ್ರಾರಂಭಿಸಿತು. **ಅಕವೂರ್ ಗೋವಿಂದನೂ** ಹಿಂಬಾಲಿಸಿದ, ತನ್ನ ಗತ್ತಿನ ಬಗ್ಗೆ ನಂಬುಗೆ ಹೊಂದಿದ್ದ ಪದ್ಮನಾಭನು ಮುಂದೊರೆದ "**ಒಟ್ಟಕೊಂಪನ್**" ಏನಾದರೂ ಮಾಡುವುದರ ಮೊದಲೇ ಆತನ ಒಂಟಿ ಕೊರೆಯನ್ನು ಹಿಡಿದು ತನ್ನ ಇಡೀ ಶಕ್ತಿಯಿಂದ ಹಿಂದಕ್ಕೆ ನೂಕಿದ. ಅನಿರೀಕ್ಷಿತವಾದ ಈ ದಾಳಿಯಿಂದ **ಒಟ್ಟಕೊಂಪನ್‌ನ** ಹೆಜ್ಜೆ ಜಾರಿತು. **ಅಕವೂರ ಗೋವಿಂದನ** ಮೇಲೆ ಬಿದ್ದನು. ಮರುಕ್ಷಣದೊಳಗಾಗಿ ಎರಡೂ ಆನೆಗಳು ನೀರಿಗೆ ಬಿದ್ದವು. ಏನೂ ನಡೆದಿಲ್ಲವೆಂಬಂತೆ ಪದ್ಮನಾಭನು ನೇರವಾಗಿ

ನೀರಿಗೆ ಇಳಿದು, ಒಂದಿಷ್ಟು ವಾಲಿದ ಸೊಂಡಲಿನಿಂದ ನೀರೆತ್ತಿ ಬೆನ್ನಮೇಲೆ ಹಾಕಿಕೊಳ್ಳಲು ಪ್ರಾರಂಭಿಸಿದನು,

ವೀರಶೃಂಗಲ ಬಿರುದು

ಪದ್ಮನಾಭನು ಕೇರಳದಲ್ಲೆಲ್ಲಾ ಪ್ರಸಿದ್ಧಿ ಪಡೆದನು. ಅಂಬಲಪುಜದ ಮಹಾರಾಜರು ಈ ಆನೆಯನ್ನು ತನ್ನಲ್ಲಿಗೆ ಕಳಿಸಿ ಕೊಡಲು ಪದೇ ಪದೇ ವಿನಂತಿಸಿದರು. ಯಾವುದೋ ಕಾರಣಕ್ಕಾಗಿ ಗುರುವಾಯೂರಿನ ಅಧಿಕಾರಿಗಳು ವಿನಂತಿಯನ್ನು ಮನ್ನಿಸದೆ ಮುಂದಕ್ಕೆ ಹಾಕುತ್ತಾ ಬಂದರು, ಪುನಃ ಪುನಃ ಮಹಾರಾಜರು ಬೇಡಿಕೆ ಸಲ್ಲಿಸಲು ಪದ್ಮನಾಭನನ್ನು ಕಳಿಸಲು ನಿಶ್ಚಯಿಸಿದರು. ಅದರಂತೆ ಉತ್ಸವಕ್ಕಾಗಿ ಅಂಬಲಪುಜಕ್ಕೆ ಪದ್ಮನಾಭನನ್ನು ಕಳಿಸಿದರು. ಅಲ್ಲಿಗೆ ಹೋದಾಗ ಜನತೆಯ ಮೇಲೆ ಮೊದಲು ಪ್ರಭಾವಬೀರಲಿಲ್ಲ. ಉತ್ಸವದ ಮೆರವಣಿಗೆಯು ಪ್ರಾರಂಭವಾದ ನಂತರ, ಥಿಡಂಪನ್ನು ತಲೆಯ ಮೇಲೆ ಇರಿಸಿದ ನಂತರ, ನೆರೆದ ಭಕ್ತರೆಲ್ಲ, ಮಹಾರಾಜರನ್ನೂ ಒಳಗೊಂಡು ಕಾತುರ ಪಟ್ಟರು. "**ವಿಶ್ವರೂಪ**" ತೋರಿಸುತ್ತ ಮದ್‌ಗಾಂಭೀರನಾಗಿ ಪದ್ಮನಾಭ ರಾರಾಜಿಸುತ್ತಾ ನಿಂತಿದ್ದಾನೆ. ಉತ್ಸವದ 14 ದಿನಗಳಲ್ಲೂ ಸ್ವತಃ ಮಹಾರಾಜರು ಆನೆಯ ಈ ಸೊಬಗನ್ನು ಕಣ್ಣಾರೆ ಕಂಡು ಆನಂದಿಸಿದರು. ಕೊನೆಯ ದಿನ ಥಿಡಂಪನ್ನು ಕೆಳಕ್ಕೆ ಇಳಿಸುವ ಪೂರ್ವದಲ್ಲಿ ಮಹಾರಾಜರು ಮುಂದೆ ಬಂದು, ಅಮೂಲ್ಯವಾದ ಒಂದು ಬಹುಮಾನ ವೀರಶೃಂಘಲ[1]ವನ್ನು ಬಲ ಕೋರೆಯ ಮೇಲೆ ಇಟ್ಟರು.

ಅಂತ್ಯ

ಅಂಬಲಪುಜದಿಂದ ಸಾಕಷ್ಟು ಕೀರ್ತಿಗಳಿಸಿ ಕೊಂಡು ಪದ್ಮನಾಭ ವಾಪಸಾಗುತ್ತಿದ್ದ. ತ್ರಿಚೂರದ ಸಮೀಪದ ಘಜಕಲ್ಲಿಗೆ ಬಂದಾಗ್ಗೆ ಕನ್ನಂಪ್ರದದಲ್ಲಿ ನಡೆಯುವ ಉತ್ಸವಕ್ಕೆ ಪದ್ಮನಾಭನನ್ನು ಒಯ್ಯಬೇಕೆಂದು ಮಾವುತರಿಗೆ ಅಪ್ಪಣೆ ಬಂದಿತು. ಅದರಂತೆ ಕನ್ನಂಪ್ರದದತ್ತ ಆತನನ್ನು ಹೊಡೆದರು. ಅಲ್ಲಿಗೆ ಹೋದಾಗ್ಗೆ ಒಂದು ತಾಳೆಮರವನ್ನು ಕೆಡುಹಲು ಮಾವುತರು ಪದ್ಮನಾಭನಿಗೆ ಆಜ್ಞಾಪಿಸಿದರು.

---


1. ಯಶಸ್ಸಿನ ಜ್ಞಾಪಕಾರ್ಥವಾಗಿ ಕೊಟ್ಟ ಚಿನ್ನದ ಸರ.

ಒಂದು ಸಾರಿ ಯತ್ನಿಸಿದರೂ ಮರ ಜಗ್ಗಲಿಲ್ಲ. ಇನ್ನೊಮ್ಮೆ ಪ್ರಯತ್ನಿಸಲು ಮನಸ್ಸು ಬರಲಿಲ್ಲ. ಬಹುಶಃ ಅಂಬಲಪುಜದಿಂದ ಬಹಳ ದಾರಿ ನಡೆದ ದಣಿವಿನಿಂದಾಗಿರಬಹುದು. ಆದರೆ ಮಾವುತರು ಮರವನ್ನು ಕೆಡವಲು ಜುಲುಮ ಮಾಡಿ ಒತ್ತಾಯಿಸಿದರು, ಅಷ್ಟೇ ಅಲ್ಲ, ಪೆಟ್ಟುಕೂಡ ಹಾಕಿದರು. ಪದ್ಮನಾಭನು ಬಲು ಜೋರಾಗಿ ಮರವನ್ನು ದೂಡಿದ. ಮರ ಬಿತ್ತು. ಆದರೆ ದುರದೃಷ್ಟ, ಆನೆಯೂ ಸಹ ವಿರುದ್ಧ ಬದಿಯಲ್ಲಿ ಬಿದ್ದಿತು. ಅಂತಿಮ ಉಸಿರನ್ನು ಎಳೆಯಿತು. ಹಣೆಯ ಮೇಲಿದ್ದ ಭಗವಾನ್ ಗುರುವಾಯೂರಪ್ಪನ ಮೂರ್ತಿಗೆ ಹಚ್ಚಿದ ಚಂದನ ಮರುದಿನ ಉಮರಿ ಬಿತ್ತು. ಇದು ಸಂಭವಿಸಿದ್ದು 1931ರಲ್ಲಿ.

ಗುರುವಾಯೂರಿಗೆ ಆತನ ಎರಡು ಭವ್ಯವಾದ ಕೋರೆಗಳನ್ನು ಮತ್ತು ಹಲ್ಲುಗಳನ್ನು ತರಲಾಯಿತು. ದೇವಾಲಯದಲ್ಲಿ ಶುದ್ಧ ಚಿನ್ನದಿಂದ ಮಾಡಿದ ಬಹುದೊಡ್ಡ "ಸುವರ್ಣಥಿಡಂಪು" ಇದೆ. ಗುರುವಾಯೂರು ಏಕಾದಶಿ ಉತ್ಸವದಲ್ಲಿ ಮಾತ್ರ ಇದನ್ನು ಹೊರಕ್ಕೆ ತರಲಾಗುವುದು ಮತ್ತು ವಾರ್ಷಿಕ ಉತ್ಸವದಲ್ಲಿಯೂ ಸಹ 6 ನೆಯ ದಿನದಿಂದ ಉತ್ಸವವು ಮುಗಿಯುವ ವರೆಗೆ ಮೆರೆಸಲಾಗುವುದು. ಈಗಲೂ, ಪದ್ಮನಾಭನಿಗೆ ದೊರೆತ ವೀರ ಶೃಂಗಲವನ್ನು ಈ ಸುವರ್ಣ ಥಿಡಂಪುವಿನ ಮೇಲೆ ಶೃಂಗಾರಕ್ಕಾಗಿ ಇಡಲಾಗುವುದು.

ಗಜರಾಜನ್ ಕೇಶವನ್

ಪ್ರಸಿದ್ಧವಾದ ಆನೆ, ಗಜರಾಜನ್ ಕೇಶವನ್, ಗುರುವಾಯೂರಿಗೆ 4ನೆಯ ಜನವರಿ 19 2 ರಂದು ಬಂದಿತು. ಆಗ್ಗೆ 10 ವರ್ಷ ಆಯುಸ್ಸು. ಈ ಆನೆಯನ್ನು ಉಚಿತವಾದ ನಡಿಯಿರುತ್ತಿಲ್ ಚಂದನ ದೋದಿಗೆ ನಡೆಸಿ, ಭಗವಂತನಿಗೆ ನಿಲಂಬೂರ ಎಳೆಯ ಮಹಾರಾಜರು ಕಾಣಿಕೆಯಾಗಿ ಅರ್ಪಿಸಿದರು. ಮಲಬಾರಿನ ಐತಿಹಾಸಿಕ ಕ್ರಾಂತಿಕಾಲವದು. ಎಳೆಯ ಮಹಾರಾಜನು ತನ್ನ ಕುಟುಂಬದವರೊಡನೆ ಎಲ್ಲಾ ಆಸ್ತಿಯನ್ನು ಭಗವಂತನು ಮಾಡಿದಂತಾಗಲಿ ಎಂದು ತೊರೆದು ತ್ರಿಚೂರಿಗೆ ಓಡಿ ಬಂದರು. ಆಗ್ಗೆ ಅವರಲ್ಲಿ ಹನ್ನೆರಡು ಆನೆಗಳಿದ್ದವು, ಕೇಶವನು ಅದರಲೊಬ್ಬ. ತನ್ನ ಆಸ್ತಿ ಅಪಾಯದಲ್ಲಿದೆ ಎಂದು



ಗಜರಾಜನ್ ಕೇಶವನ್



ದಿವಂಗತ ಗುರುವಾಯೂರು ಪದ್ಮನಾಭನ್

ತಿಳಿದು ಬಂದಾಗ್ಗೆ ಪರಿಪೂರ್ಣ ಮನಸ್ಸಿನಿಂದ **ಭಗವಾನ್** ಗುರುವಾಯೂರಪ್ಪ ನನ್ನು ಸ್ಮರಿಸಿ ಆಸ್ತಿಗೆ ದಂಗೆಕೋರರಿಂದ ನಷ್ಟವುಂಟಾಗದಿದ್ದರೆ ತಮ್ಮಲ್ಲಿನುವ ಆನೆ ಗಳಲ್ಲಿ ಒಂದನ್ನು ಅರ್ಪಿಸುವುದಾಗಿ ಹರಕೆ ಹೊತ್ತರು. ದಂಗೆ ಮುಕ್ತಾಯ ವಾದ ನಂತರ ಪೂರ್ತಿ ಆಸ್ತಿ ಸುರಕ್ಷಿತವಾಗಿ ಇವರಿಗೆ ವಾಪಸ್ಸಾಯಿತು. ತಮ್ಮ ಹರಕೆಯಂತೆ ಗುರುವಾಯೂರಿಗೆ ಬಂದು ತಮ್ಮಲ್ಲಿದ್ದ ಆನೆಗಳ ಪೈಕಿ ಒಂದನ್ನು ಅರ್ಪಿಸಿದರು. ಮುಂದೆ ಇದೇ ಆನೆ **ಗಜರಾಜನ್ ಕೇಶವನ್** ಎಂದು ಪ್ರಸಿದ್ಧಿ ಪಡೆಯಿತು. ಕೇಶವನ್ ಇಲ್ಲಿಗೆ ಬಂದಾಗ್ಗೆ ಪದ್ಮನಾಭನು ಯಶಸ್ಸಿನ ಪರಾಕಾಷ್ಠೆಯಲ್ಲಿದ್ದ. ಎಳೆಯ ಕೇಶವನ್, ಸ್ವಾಭಾವಿಕವಾಗಿ ಪದ್ಮನಾಭನ ಎಲ್ಲಾ ಉತ್ತಮ ಗುಣಗಳನ್ನೂ, ರಾಜಗಾಂಭೀರ್ಯವನ್ನೂ ತಿಳಿದುಕೊಂಡನು. ಪದ್ಮನಾಭನನ್ನು ನೋಡಿ ತಾನು ಸದ್ಗುಣಗಳನ್ನು ಕಲಿತುದೇ ಅಲ್ಲದೆ ಅತ್ಯಂತ ಮಹತ್ವದ ಇನ್ನೊಂದು ಸಂಗತಿಯನ್ನೂ ಕಲಿತನು. ಅದೇನೆಂದರೆ ತಲೆಯ ಮೇಲೆ ಥಿಡಂಪು ಇಟ್ಟಾಗ್ಗೆ ತಲೆಯನ್ನು ಎತ್ತಿಹಿಡಿಯುವ ವಿಶೇಷವಾದ ಶೈಲಿ. ಕಷ್ಟಕರವಾದುದನ್ನು ಸ್ವಯಂ ಕಲಿತುಕೊಂಡ ಈ ಪಾಠ ಅತನ ಮುಂದಿನ ಜೀವನದಲ್ಲಿ ಕೇರಳದ ಅನೇಕಲ್ಲೆಲ್ಲಾ ಪ್ರಸಿದ್ಧಿ ಹೊಂದುವಂತೆ ಮಾಡಿತು. ಯಾವದೇ ಉತ್ಸವಕ್ಕೆ ಹೋದರೂ, ಆನೆಗಳ ಸಾಲಿನ ಮಧ್ಯದಲ್ಲಿರುತ್ತಿದ್ದನು.

ಸದ್ಗುಣಗಳಲ್ಲಿ ಕೇಶವನ್ ಪದ್ಮನಾಭನನ್ನು ಒಂದು ಕೈ ಮೀರಿಸಿದ ನೆಂದರೂ ಸರಿಯೆ. ಭಗವಾನ್ ಗುರುವಾಯೂರಪ್ಪನ ಥಿಡಂಪು ಹಿಡಿದವರಿಗೆ ಮಾತ್ರ ಕೇಶವನ್ ತನ್ನ ಬಲಗಾಲನ್ನು ಮಣಿಸಿ ಮೇಲೇರಲು ಅನುವು ಮಾಡಿ ಕೊಡುತ್ತಿದ್ದ. ಚಾಮರ ಛತ್ರ ಇತ್ಯಾದಿಗಳನ್ನು ಹಿಡಿದವರು ಹಿಂದಿನ ಕಾಲು ಗಳ ಮೇಲಿಂದ ಹತ್ತ ಬೇಕಾಗುತ್ತಿತ್ತು. ಈ ವಿಧಾನವನ್ನು ಬದಲಾಯಿವು ದನ್ನು, ಪರಿಪಾಠ ಯಾರು ಮುರಿದರೂ ಸರಿಯೇ, ಕೇಶವನ್ ಸಹಿಸಿಕೊಳ್ಳ ಲಾರ. ಕೇವಲ ವಿಹಾರಕ್ಕಾಗಿ ತನ್ನ ಮೇಲೆ ಮಾವುತನನ್ನೂ ಸಹ ಕುಳ್ಳಿರಿಸಿ ಕೊಳ್ಳುತ್ತಿರಲಿಲ್ಲ.

ಉನ್ಮತ್ತ ಕೇಶವನ್

ಗುರುವಾಯೂರಿಗೆ ಕೇಶವನ್ ಬಂದಾಗ್ಗೆ ಸುಂದರನಾಗಿರಲಿಲ್ಲ. ಅಲ್ಲದೆ

ಕುಚೇಷ್ಟೆ, ಕಪಿಚೇಷ್ಟೆಗಳನ್ನೂ ಸಾಕಷ್ಟು ಕಲಿತಿದ್ದ. 'ಉನ್ಮತ್ತ ಕೇಶವನ್' ಎಂದು ಕರೆಯಲ್ಪಡುತ್ತಿದ್ದ. ಇದನ್ನು ಹೋಗಲಾಡಿಸುವುದಕ್ಕಾಗಿ ಮುಖ್ಯ ಅರ್ಚಿಕರು ಗುರುವಾಯೂರಪ್ಪನ ನಾಮಸ್ಮರಣೆ ಮಾಡುತ್ತಾ ಬೆಣ್ಣೆಯನ್ನು ನಾಲ್ವತ್ತೊಂದು ದಿನಗಳ ವರೆಗೆ ತಿನ್ನಿಸಿದರು, ಮೂರ್ಖತನ ಹೋಗಲಾಡಿಸಲು ಇದೊಂದು ಪರಿಣಾಮಕಾರಿ ಔಷಧಿ ಎಂದು ಭಾವಿಸಲಾಗಿದೆ. ಈ ದಿನಗಳಲ್ಲಿ, ದೇವಸ್ಥಾನಕ್ಕೆ ಒಯ್ದು ಮೂರೂ ಸೇವೆಗಳ ಸಮಯದಲ್ಲಿ ಭಜನೆಯಲ್ಲಿ ಪಾಲುಗೊಳ್ಳುವಂತೆ ಮಾಡಿದರು. ಇವೆಲ್ಲವುಗಳಿಂದ ಒಂದು ಆದರ್ಶ ಆನೆಯಾಗಿ ಈತನು ಮಾರ್ಪಟ್ಟನು,

ಈತನ ಒಂದು ಉತ್ತಮ ಗುಣವೆಂದರೆ ಎಂದೂ ತನ್ನ ಜೀವಮಾನದಲ್ಲಿ ಯಾರಿಗೂ ಅಪಾಯವನ್ನುಂಟು ಮಾಡಲಿಲ್ಲ. ಈ ದಿಶೆಯಲ್ಲಿ ತನ್ನ ಗುರು ಪದ್ಮನಾಭನ ಜಾಡಿಯಲ್ಲಿಯೇ ನಡೆದಿದ್ದ. ಗುರುವಾಯೂರಿನ ಹೊರಗೆ ಇದ್ದಾಗ್ಗೆ ಕೋಪಬಂದರೆ, ಯಾವುದಕ್ಕೂ ತೊಂದರೆಯನ್ನುಂಟು ಮಾಡದೆ ನೇರವಾಗಿ ಗುರುವಾಯೂರಿಗೆ ಧಾವಿಸಿ, ಗುಡಿಯ ಪ್ರದಕ್ಷಣೆ ಹಾಕಿ, ಸರಪಳಿ ಬಿಗಿದು ನಿಲ್ಲುಸುತ್ತಿದ್ದ ಸ್ಥಳದಲ್ಲಿ ಸುಮ್ಮನೆ ನಿಲ್ಲುತ್ತಿದ್ದ. ಎಷ್ಟೋ ಮೈಲಿನಿಂದ ಬಂದರೂ ದಾರಿಯಲ್ಲಿ, ಯಾವುದನ್ನೇ ಕೆಡಿಸದೆ ಮರಳಿ ಬರುತ್ತಿದ್ದ. ಆದರೆ ಯಾರ ಮಾತನ್ನಾದರೂ, ಅಷ್ಟೇ ಏಕೆ, ತನ್ನ ಮಾವುತನ ಮಾತನ್ನೂ ಸಹ ಕೇಳುತ್ತಿರಲಿಲ್ಲ. ಈ ರೀತಿಯು ಹುಚ್ಚುತನದ ಸರಪಳಿ ರಹಿತ ಆನೆಯು ಓಡಾಟದ ಪಂದ್ಯ ಅನೇಕ ಸಲ ಸಂಭವಿಸಿದೆ.

ಸರಪಳಿ ರಹಿತ ಓಟ

ಗುರುವಾಯೂರಿನಿಂದ ಸುಮಾರು 80 ಕಿ.ಮೀ. ದೂರದ ಕಾಡಿನಲ್ಲಿ ಮರವನ್ನು ಸ್ಥಳಾಂತರಿಸುವ ಕಾರ್ಯದಲ್ಲಿ ಕೇಶವನ್ ತೊಡಗಿದಾಗ್ಗೆ, ಸಿಟ್ಟಿಗೆದ್ದು ಮಾವುತನ ಮಾತು ನಿರಾಕರಿಸಿ, ಸರಪಳಿ ಹರಿದು ತುಂಡು ತುಂಡು ಮಾಡಿ, ನೇರವಾಗಿ ಜನಜಂಗುಳಿ ಮಾರ್ಗ ಹಿಡಿದು ಗುರುವಾಯೂರಿಗೆ ದೊಡ್ಡ ಹೆಜ್ಜೆ ಹಾಕುತ್ತ ಹೊರಟ. ಈ ಸುದ್ದಿಯನ್ನು ಗುರುವಾಯೂರಿನಲ್ಲಿಯ ಅಧಿಕಾರಿಗಳಿಗೆ ತಿಳಿಸಿತು, ಅವರು ಕಾರಿನಲ್ಲಿ ಆ ಸ್ಥಳಕ್ಕೆ ಹೊರಟರು. ಒಂದು ಇಕ್ಕ

ಟ್ಟಾದ ರೋಡಿನಲ್ಲಿ ಬರುತ್ತಿದ್ದ ಅಧಿಕಾರಿಗಳು ಕೋಪೋದ್ರಿಕ್ತನಾದ ಕೇಶವನ್ ಬರುವುದು, ಹಿಂದಿಂದೆ ಮಾವುತರು ಓಡುವುದನ್ನು ಕಂಡರು. ಏನಾದರೂ ಕಾರಿಗೆ ಆಗಲಿ, ನಾವು ಉಳಿದರೆ ಸಾಕೆಂದು ಕಾರನ್ನು ರೋಡಿನ ಮಧ್ಯದಲ್ಲಿ ಬಿಟ್ಟು ಅವರೆಲ್ಲ ಓಡಿದರು. ಏಕೆಂದರೆ ಕಾರನ್ನು ಹಿಂದಕ್ಕೆ ತಿರುವುಲೂ ಆಗುತ್ತಿರಲಿಲ್ಲ. ಕೇಶವನ್ ಕಾರನ್ನು ಮುಟ್ಟಿ ಅನೇಕ ಭಾಗಗಳನ್ನು ಮೂಸಿಸುವಂತೆ ಅನೇಕ ಬಾರಿ ಮುಟ್ಟಿ, ಇಕ್ಕಟ್ಟಿನಲ್ಲಿ ಪಕ್ಕಕ್ಕೆ ಹಾಯ್ದು ತನ್ನ ಒಡೆಯನ ಕಾರೆಂದು ತಿಳಿದು-ಗುರುವಾಯ.ೂರಿನತ್ತ ಮುನ್ನೆಡೆಯಿತು. ನಂತರ ಅದರ ಹಿಂದಿಂದೆ ಅಧಿಕಾರಿಗಳು ಕಾರಿನಲ್ಲಿ ಬೆನ್ನಟ್ಟಿದರು.

ಬಾಳೆ ಹಣ್ಣಿನ ಗೊನೆಗಳಿಂದ ತುಂಬಿದ ಕೈಗಾಡಿ ಎದುರಾಯಿತು. ಜೀವರಕ್ಷಣೆಗಾಗಿ ಗಾಡಿಯ ಯಜಮಾನ ಓಡಿದ. ಗಾಡಿಯ ಸಮೀಪಕ್ಕೆ ಕೇಶವನ್ ಬಂದು; ಆಶೆಯಿಂದ ಸೊಂಡಿಲನ್ನು ಎತ್ತಿದ, ಆದರೆ ಹಿಂದಿನಿಂದ 'ಗುರುವಾಯೂರಪ್ಪನಿಗಾಗಿ ನೀನು ಈ ಹಣ್ಣನ್ನು ಖಂಡಿತ ಮುಟ್ಟ ಬೇಡಾ' ಎಂಬ ಕೂಗು ಮಾವುತರಿಂದ ಕೇಳಿ ಬಂತು. ತಕ್ಷಣ ತನ್ನ ಸೊಂಡಿಲನ್ನು ಹಿಂದಕ್ಕೆ ಪಡೆದು, ಹಣ್ಣನ್ನು ಮುಟ್ಟದೆ ಪ್ರಯಾಣ ಮುಂದೊರಿಸಿದ,

ಕರುಣಾಮಯಿ

ಒಂದು ಬಾರಿ ಸ್ನಾನದ ಸ್ಥಳದಲ್ಲಿ ತೊಳೆಯುತ್ತಿದ್ದಾಗ್ಗೆ ಮಾವುತರ ಮಾತೋ ಕೃತಿಯೋ ಕೇಶವನನ್ನು ಕೆಣಕಿತು. ಅವರ ಆಜ್ಞೆಗಳನ್ನು ಪಾಲಿಸದೆ, ಕೆರೆಯಿಂದ ಹೊರ ಬಂದು ತ್ವರಿತವಾಗಿ ದೇವಾಲಯಕ್ಕೆ ಧಾವಿಸಿದ. ದಾರಿಯ ಎರಡೂ ಬದಿಯುಲ್ಲಿ ಅಂಗಡಿಗಳು. ಅಂಗಡಿಗಳಲ್ಲಿಯ, ರಸ್ತೆಯಲ್ಲಿಯು ಜನ ಗಾಬರಿಸಿದರು, ಸಿಕ್ಕತ್ತ ಓಡಿದರು. ರೋಡು ಇಕ್ಕಟ್ಟಾಗಿದೆ, ದೀಪಸ್ತಂಬದ ಹತ್ತರ ಇನ್ನೂ ಇಕ್ಕಟ್ಟು. ಇಲ್ಲಿ ಎರಡು ಕಾಲುಗಳನ್ನು ಊರಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸರಿಯುತ್ತಿದ್ದವನು ಗುರುವಾಯೂರಪ್ಪನ ಹೆಸರನ್ನು ಹಿಡಿದು ನಾಮ ಸ್ಮರಣೆ ಮಾಡುವುದೊಂದೇ ಈ ಹೆಳವನಿಗೆ ಉಳಿದಿದ್ದ ಮಾರ್ಗ. ಕೇಶವನ್ ದಾಟಿ ಹೋಗಲು ಇಕ್ಕಟ್ಟು, ವಾಪಸ್ಸು, ಮರಳಿ ಹೋಗುವುದು ಕೇಶವನ್ನನ ಜಾಯಮಾನದಲ್ಲಿಯೇ ಇಲ್ಲ. ನಡೆದು

ಹೋದರೆ ಹೆಳವ ಅಪ್ಪಚ್ಚಿಯಾಗಲೇ ಬೇಕು, ನೋಡಿದ ಜನ ಕಿರುಚಿತು. ಗಾಬರಿಸಿತು. ಪರಾಶ್ಚರ್ಯ ಕೇಶವನ್ ತನ್ನ ಸೊಂಡಿಲಿನಿಂದ ಹೆಳವನನ್ನು ಹೂ ಎತ್ತಿ ಪಕ್ಕಕ್ಕೆ ಇಡುವಂತೆ ಎತ್ತಿ, ಆ ಬದಿಗೆ ಇಳಿಸಿ, ತನ್ನ ದಾರಿ ಹಿಡಿದು ಶೀಘ್ರವಾಗಿ ನಡೆದ. ಆನೆಯು ಆತನನ್ನು ಎತ್ತಿ ಬಿಸಾಕುವುದು, ಅವನ ಅಂತ್ಯ ಬಂದಿತೆಂದು ತಿಳಿದ ಜನ ಇದನ್ನು ಕಂಡು ಕೇಶವನನ್ನು ಕೊಂಡಾಡಿದರು, ಕೇಶವನ್ ಯಾವುದನ್ನೂ ಗಮನಿಸದೆ ದೇವಾಲಯಕ್ಕೆ ನೇರವಾಗಿ ಬಂದ.

ಅಪೂರ್ವ ನಿರಾಕರಣೆ

ಇನ್ನೊಂದು ಸಂಧರ್ಬದಲ್ಲಿ ಕೇಶವನನ್ನು ನಿಲಂಬೂರಿಗೆ ಒಯ್ಯಬೇಕಾಗಿತ್ತು. ಅಲ್ಲಿ ಯಾವುದೋ ಉತ್ಸವಕ್ಕೆ ಒಯ್ಯುತ್ತಾರೆಂದು ಭಾವಿಸಿದ್ದ. ಆದರೆ ಪಟ್ಟಾಂಬಿಯ ಉತ್ತರಕ್ಕೆ ಸುಮಾರು 16 ಕಿ.ಮೀ. ದಲ್ಲಿರುವ ಕಟ್ಟುಪ್ಪರ ತಲುಪಿದಾಗ್ಗೆ, ರೋಡಿನ ಪಕ್ಕದ ಗಿಡದ ನೆರಳಿನಲ್ಲಿ ವಿಶ್ರಾಂತಿಗಾಗಿ ನಿಂತಿರುವಾಗ್ಗೆ, ಉತ್ತರ ದಿಕ್ಕಿನಿಂದ ಒಂದು ಕಾರು ಬಂತು. ಅದರಲ್ಲಿ ಗಜಪ್ರಿಯರೊಬ್ಬರು ಕೇಶವನನ್ನು ಗುರ್ತಿಸಿದರು. ಕಾರಿನಿಂದ ಹೊರಬಂದು ಕೇಶವನತ್ತ ನೋಡುತ್ತ ಎಲ್ಲಿಗೆ ಒಯ್ಯುತ್ತಿರುವಿರಿ ಎಂದು ಮಾವುತನನ್ನು ಕೇಳಿದರು. ಟಿಂಬರ್ ಸಾಗಿಸುವುದಕ್ಕಾಗಿ ನಿಲಂಬೂರಿಗೆ ಕೇಶವನನ್ನು ಒಯ್ಯುತ್ತಿರುವುದಾಗಿ ಉತ್ತರಿಸಿದರು. ಇದನ್ನು ಕೇಳಿಸಿಕೊಂಡ ಕೇಶವನಿಗೆ ಕಠಿಣ ಕಾರ್ಯಕ್ಕೆ ತನ್ನನ್ನು ಒಯ್ಯುತ್ತಿರುವುದು ತಿಳಿಯಿತು. ಈ ಕೆಲಸ ಆತನ ಮನಸ್ಸಿಗೆ ಬಾರದು. ಕೆಲವು ವೇಳೆಯ ನಂತರ ಸರಪಳಿ ಬಿಚ್ಚಿ ಆನೆಯನ್ನು ಹೊಡೆಯ ಹತ್ತಿದರು. ಆದರೆ ಕೇಶವನ್ ಮುಂದಕ್ಕೆ ಹೋಗದೆ; ಮಾವುತರ ಮಾತುಗಳನ್ನು ಮೀರಿ ನೇರವಾಗಿ 'ಪ್ಲಥೋಡೆ' ಎಂಬ ಮನೆಯ ಕಂಪೌಂಡಿಗೆ ಬಂದು ಮುಂದಕ್ಕೆ ಒಂದು ಹೆಜ್ಜೆ ಕೂಡ ಇಡಲು ನಿರಾಕರಿಸಿದ. ಸುಮಾರು ಆರು ತಿಂಗಳುಗಳವರೆಗೆ ಆ ಮನೆಯವರ ಅತಿಥಿ ಸತ್ಕಾರವನ್ನು ಅನುಭವಿಸುತ್ತಾ ಸುಖವಾಗಿ ದಿನಗಳೆದ ಈ ಕೇಶವನ್.

ಗಜರಾಜನ್ ಪದವಿ

ಗುರುವಾಯೂರಿನಲ್ಲಿ ಪ್ರಾಯಶಃ ಮೊದಲ ಬಾರಿಗೆ ಆನೆಗಳ ಸೇವೆಯ ಸುವರ್ಣ ಮಹೋತ್ಸವವನ್ನು ಚರಿತ್ರೆಯಲ್ಲಿ ಮೊದಲನೆಯದಾಗಿ ಆಚರಿಸಲಾಯಿತು. ಇದು ನಡೆದದ್ದು 1973ರಲ್ಲಿ ಕೇಶವನ್ ಐವತ್ತು ವರ್ಷ ಸೇವೆ ಸಲ್ಲಿಸಿದ್ದಷ್ಟೇ ಅಲ್ಲದೆ ಆತನ ಷಷ್ಟ್ಯಾಬ್ದಿಪೂರ್ತಿಯ ವರ್ಷವೂ ಆಗಿತ್ತು. ಕೇಶವನನ್ನು ಆತನ ಒಡನಾಡಿಗಳೊಂದಿಗೆ ಸ್ವಚ್ಛಗೊಳಿಸಿ ಅವುಗಳಿಗೆ ಮಾಮೂಲಿ ಎಲೆ ಆಹಾರವಲ್ಲದೆ ಯಥೇಚ್ಛವಾಗಿ ಪಕ್ವಾನ್ನ, ಪಾಯಸ, ಬಾಳೆಹಣ್ಣು, ಹಣ್ಣು ಇತ್ಯಾದಿಗಳನ್ನೂ ಕೊಟ್ಟು ಸಾಲಾಗಿ ನಿಲ್ಲಿಸಲಾಯಿತು. ಒಟ್ಟು 21 ಆನೆಗಳಿದ್ದವು. ಯೋಗ್ಯ ಕ್ರಮದಲ್ಲಿ ಶೃಂಗರಿಸಿ ಸಾಲಾಗಿ ನಿಲ್ಲಿಸಿ ಕೇಶವನಿಗೆ "**ಗಜರಾಜನ್**" ಎಂಬ ಪದವಿಯನ್ನು ಎಲ್ಲಾ ಭಕ್ತಾದಿಗಳ ಆಶಿರ್ವಾದ ಪೂರ್ವಕವಾಗಿ ಅರ್ಪಿಸಲಾಯಿತು. **ಗಜರಾಜನ್** ಎಂದು ಕೆತ್ತಿದ ಚಿನ್ನದ ಶೀಲ್ಡನ್ನು ಆತನ ಹಣೆಗೆ ಶೃಂಗರಿಸಲಾಯಿತು. **ಗಜರಾಜನ್ ಕೇಶವನ್** ಮುಂದಾಳತ್ವದಲ್ಲಿ ಆನೆಗಳ ಮೆರವಣಿಗೆ ನಡೆಯಿತು. ಬಹುಶಃ ಎಲ್ಲಾ ದಿನಪತ್ರಿಕೆಗಳಲ್ಲಿ ಈ ಸಮಾರಂಭವು ಮಹತ್ವದ ವಿಷಯವಾಗಿ ಪ್ರಸಿದ್ಧಿ ಪಡೆಯಿತು.

ಗಜೇಂದ್ರ ಮೋಕ್ಷ


1976ರ ಪ್ರಸಿದ್ಧ **ಗುರುವಾಯೂರಿನ** ಏಕಾದಶಿಯಂದು ಈ ಘಟನೆ ಸಂಭವಿಸಿತು. ನವಮಿಯ ದಿನ ಶುದ್ಧ ತುಪ್ಪದ **ನವಮಿ ಕಾರ್ತಿಕವು** ಅತ್ಯಂತ ಪವಿತ್ರವಾದದ್ದೆಂದು ಭಾವನೆ, ಉತ್ಸವವು ಆಗ ತಾನೆ ಪ್ರಾರಂಭವಾಗಿತ್ತು. ಕೇಶವನ್ ತನ್ನ ತಲೆಯ ಮೇಲೆ ಚಿನ್ನದ ಥಿಡಂಪು ಹೊತ್ತು ರಾರಾಜಿಸುತ್ತಿದ್ದ. ಕೆಲವು ಕಾಲದ ವರೆಗೆ ಮಾತ್ರ ಈ ವಿಜೃಂಬಣೆ ಕಂಡು ಬಂದಿತು. ಮುಂದಿನ ನಿಮಿಷದಲ್ಲಿ ಕೇಶವನ ಇಡೀ ಶರೀರ ಥರಗುಟ್ಟಿ ನಡುಗ ಹತ್ತಿತು. ಪೂರ್ತಿಯಾಗಿ ಆಯಾಸಗೊಂಡವನಂತೆ ಕಂಡು ಬಂದ. ಪಕ್ಕದ ಆನೆಗೆ ಥಿಡಂಪು ವರ್ಗಾಯಿಸಿ, ಮೆಲ್ಲನೆ ಹೊರಕ್ಕೆ ಕೇಶವನನ್ನು ಸರಿಸಲಾಯಿತು. ಪಕ್ಕದ ಕಾಂಪೌಂಡನ ಹತ್ತಿರ, ದೇವಾಲಯದಲ್ಲಿ ನಡೆಯುವ ಉತ್ಸವವನ್ನು

ನೋಡುತ್ತ, ಚಲನೆಯಿಲ್ಲದೆ ನಿಂತುಬಿಟ್ಟ. ಭಗವಾನ್ ಗುರುವಾಯೂರಪ್ಪನ ನಾಮಸ್ಮರಣೆಯಲ್ಲಿ ತಲ್ಲೀನನಾದವನಂತೆ ಕಂಡು ಬಂದಿತು. ಪರಿಣತ ವೈದ್ಯರು ತಕ್ಷಣ ಬಂದು ಚಿಕಿತ್ಸೆ ಪ್ರಾರಂಭಿಸಿದರು. ಎಲ್ಲಾ ಮಾವುತರು ಬಂದು, ಕೇಶವನು ಒಂದಿಷ್ಟು ಏನಾದರೂ ತಿನ್ನಲಿ ಎಂದು ಪ್ರಯತ್ನಿಸಿದರು. ಆದರೆ ಕೇಶವನು ಇದಾವುದನ್ನೂ ಗಮನಿಸಲಿಲ್ಲ, ತನ್ನ ಧ್ಯಾನ ಸ್ಥಿತಿಗೆ ತೊಂದರೆಯಾಗದಿರಲೆಂಬಂತೆ ವರ್ತಿಸಿದ. ಮಾವುತರು ಆನೆಯ ಮುಂದೆ ಬಹಳ ದೊಡ್ಡ ಪಾತ್ರೆ ಇಟ್ಟು ನೀರು ತುಂಬಿದರು–ತನಗೆ ಬೇಕಾದಾಗ ಕುಡಿಯಲೆಂದು. ಆದರೆ ಕೇಶವನ್ ನೀರನ್ನು ಮುಟ್ಟಲಿಲ್ಲ, ಮರುದಿನ ದಶಮಿ, **ಗಜರಾಜನು** ಯಾವುದನ್ನು ಗಮನಿಸದೆ, ಯಾವದೇ ಉಪಚಾರವನ್ನು ಲೆಕ್ಕಿಸದೆ ತನ್ನ ಧ್ಯಾನಾಸಕ್ತ ಸ್ಥಿತಿಯನ್ನೇ ಮುಂದೊರಿಸಿದ. ಕಾತರದ ಜನತೆ ಸರತಿಯಲ್ಲಿ ಆತನನ್ನು ವೀಕ್ಷಿಸ ತೊಡಗಿದರು. **ದಶಮಿ ಕಾರ್ತಿಕವು** ಪೂರ್ಣ ಪ್ರಮಾಣದ ವಿಜೃಂಬಣೆಯಿಂದ ನಡೆದು ಇಡೀ ವಾತಾವರಣವು ಅಮೋಘವಾಗಿತ್ತು. **ದಶಮಿ ಕಾರ್ತಿಕ**ಕ್ಕೆ ಸಂಬಂಧಿಸಿದ ಮೆರವಣಿಗೆ ಆಗ ತಾನೆ ಪ್ರಾರಂಭವಾಗಿತ್ತು. ಮೇಳದ ನಾದ ಕೇಳಿ ಕೇಶವನ್ ಕಣ್ದೆರೆದು ನೋಡಿದ, ಜಾಗೃತನಾದ. ಕಿವಿಗಳನ್ನು ಜಾಡಿಸಿದ. ಕಳೆದ ದಿನ ಇದೇ ಹೊತ್ತಿಗೆ ತಾನು ದೇವಾಲಯದಿಂದ ಹೊರ ಬಂದು ಧ್ಯಾನ ಪ್ರಾರಂಭಿಸಿದ್ದು ಎಂಬುದನ್ನು ಸ್ಮರಿಸಿಕೊಂಡ. ತಾನು ತಯಾರಾಗ ಬೇಕಾದ ಕಾಲ ಬಂದಿತು ಎಂದು ಭಾವಿಸಿದ. ತಕ್ಷಣ ಮುಂದೊರೆದು, ಸೊಂಡಿಲಿನಿಂದ ನೀರೆತ್ತಿದ ಕುಡಿಯಲಿಕ್ಕಲ್ಲ. ಆದರೆ ಶರೀರದ ಮೇಲೆಲ್ಲಾ ಹರಡಿಕೊಂಡ, ಪೂರ್ತಿ ನೀರಿನಿಂದ ಸ್ನಾನ ಮುಗಿಸಿದ. ನಂತರ ದೇವಾಲಯಕ್ಕೆ ಎದುರಾಗಿ, ನಿಶ್ಚಲನಾಗಿ ಭಗವಂತನ ನಾಮಸ್ಮರಣೆಯಲ್ಲಿ ಆತನೊಂದಿಗೆ ಐಕ್ಯವಾಗಲು ತಯಾರಾದ !


ಗುರುವಾಯೂರಿನ ಪವಿತ್ರ ಏಕಾದಶಿ ದಿನ ಬೆಳಗಾಯಿತು. ಅರ್ಜುನನಿಗೆ ಭಗವಂತನು ತನ್ನ **ವಿಶ್ವರೂಪ** ತೋರಿದ್ದು ಇಂದೇ, "ಅಗ್ರೆಪಶ್ಯಾಮಿ" ...ಎಂದು ಮೆಲ್ಪಥುರರು ಹಾಡಿದಾಗ ಪ್ರತ್ಯಕ್ಷವಾದದ್ದೂ ಇದೇ ತಿಥಿಯ ದಿನ, ಈಗ **ಗಜರಾಜ**ನಿಗೆ ಭಗವಂತನು ವಿಶ್ವರೂಪದಲ್ಲಿ ದರ್ಶನ ಕೊಟ್ಟಿರಬೇಕು. ಒಂದು ಕ್ಷಣ ಇಡೀ ಪ್ರಪಂಚ ನಿಚ್ಚಲವಾಯಿತು ! ಏಕದಶಿ ದಿನದ ಗುರು



ಆನೆಯ ಪಂದ್ಯ — ಕೇಶವನ್ ಓಡುತ್ತಿದ್ದಾನೆ



ಭಗವಂತನ ಮೆರವಣಿಗೆ—ಉತ್ಸವ ಕಾಲದಲ್ಲಿ



ಝುಗಝುಗಿಸುವ ದೀಪದ ಮಂಟಪ.



ಭಗವಂತನ ವಿಜೃಂಭಣೆ ರಾತ್ರಿಯಲ್ಲಿ.

ವಾಯೂರಿನ ದೇವಾಲಯದ ಶಂಖದ ಧ್ವನಿ ತೂರಿ ಬರುತ್ತಿದೆ. **ದರ್ಶನ**ಕ್ಕಾಗಿ ಗರ್ಭಗುಡಿಯು ತೆರೆಯಿತು. ಭಗವಂತನತ್ತ ತನ್ನ ಸೊಂಡಿಲನ್ನು ಚಾಚಿ **ಗಜರಾಜನ್** ಮಲಗಿದ್ದಾನೆ. ಭಗವಂತನಿಗೆ ಮಣಿದಿದ್ದಾನೆ. ಈ ನಮಸ್ಕಾರ ಜೀವನದ ಕೊನೆಯ ನಮಸ್ಕಾರ ! **ಗಜರಾಜನ** ಆತ್ಮವು ಈ ವೇಳೆಗಾಗಲೇ **ಭಗವಂತ**ನೊಂದಿಗೆ ಲೀನವಾಗಿತ್ತು, ಆತ್ಮ ಅಜರಾಮರವಾಗಿತ್ತು !

ಪ್ರಕರಣ 10

ನಾರಾಯಣೀಯಮ್ ಮತ್ತು ಜ್ಞಾನಪ್ಪನ್

ನಾರಾಯಣೀಯಮ್ ಮತ್ತು ಜ್ಞಾನಪ್ಪನ್, ಇವೆರಡು ಗುರುವಾಯೂರಪ್ಪನ ಮಹಾತ್ಮೆಯನ್ನು ಕೇರಳದಲ್ಲಿ ಅಷ್ಟೇ ಅಲ್ಲದೆ, ಎಲ್ಲೆಡೆಯೂ ಹರಡಿದ ಉತ್ಕೃಷ್ಟ ಅಮರವಾದ ಕಾವ್ಯಗಳು. ಈ ಮೊದಲೇ ಹೇಳಿದಂತೆ ಮೆಲ್ಪಥುರ್ ನಾರಾಯಣೀಯಮ್ ಕಾವ್ಯವನ್ನು ಆತನು ಭಗವಾನ್ ಗುರುವಾಯೂರಪ್ಪನ ಪೂಜೆಯನ್ನು ಮಾಡುತ್ತಿರುವಾಗ್ಗೆ ಮತ್ತು ಪೂಂಥನಮ್ ಜೀವನ್ಮುಕ್ತ[1]ನಾದಾಗ್ಗೆ ಜ್ಞಾನಪ್ಪನ್ ರಚಿಸಿದನು (ಪ್ರಕರಣ 3)

ನಾರಾಯಣೀಯಮ್

ಮೆಲ್ಪಥುರ್‌ರ ಎಲ್ಲಾ ಗ್ರಂಥಗಳಿಗಿಂತ ಹೆಚ್ಚಾಗಿ ಎಲ್ಲರೂ ಓದುವ ಮೇರು ಕೃತಿಯಾಗಿದೆ ನಾರಾಯಣೀಯಮ್. ಸ್ವತಃ ಕವಿಯೇ ಹೇಳಿದಂತೆ ಇದು ಎರಡು ವಿಧಗಳಲ್ಲಿ '**ನಾರಾಯಣೀಯಮ್**' ದ್ವಂದ[2] ನಾರಾಯಣೀಯಮ್ ನಾರಾಯಣನಿಂದ ಬರೆಯಲ್ಪಟ್ಟ ನಾರಾಯಣನ ಕಥೆಯು, ಕಾವ್ಯ ರಚನೆ. ಉಪಮಾನ ಪದಗಳಿಂದ ಕವಿಯು ಭಗವಾನ್ ಗುರುವಾಯೂರಪ್ಪನನ್ನು ಹೊಗಳಿ

---

1. ಜಗತ್ತಿನ ಬಂಧನಗಳಿಂದ ಮುಕ್ತನಾದವ
2. ದ್ವಂದ ಅಂದರೆ ಎರಡು ರೀತಿಯಲ್ಲಿ **द्वेधा नारायणीयम्** ನಾರಾಯಣೀಯಂ ದಶಕ-100 ಶ್ಲೋಕ-11

ದ್ದಾನೆ. ಸಮ್ಮೋಹನಮ್ ಮೋಹನಲ್, ಕಾಂತಮ್, ಕಾಂತಿನಿಧನತೋಪಿ ಮಧುರಮ್, ಮಾಧುರ್ಯ, ದುರ್ವಾದಪಿ ಸೌಂದರ್ಯಥರತೋಟಿ, ಸುಂದರಾರ್ಥಮ್ ಈ ಎಲ್ಲ ಪದಗಳನ್ನು ಉತ್ಕೃಷ್ಟ ಗ್ರಂಥಕ್ಕೆ ಅನ್ವಯಿಸಲು ಪ್ರತಿಯೊಂದೂ ದ್ವಂದಾರ್ಥವನ್ನು ಕೊಡುತ್ತವೆ. ಮೆಲ್ಪಥುರರಕ್ಕಿಂತ ಪ್ರಾಚೀನ ಕವಿಗಳು ಸ್ತುತಿ ಕಾವ್ಯಕ್ಕೆ ಸರಾಗವಾದ ಪ್ರಬಂಧದ ಅವಶ್ಯಕತೆ ಇದೆ ಎಂಬುದನ್ನು ಗಮನಿಸಿದಂತೆ ಕಂಡು ಬರುವುದಿಲ್ಲ, ಈ ಕ್ಷೇತ್ರದ ಅಗ್ರಗಾಮಿ ಮೆಲ್ಪಥುರ್ ನಾರಾಯಣೀಯಮ್, ಭಾಗವತದ ಕತೆಗಳ ಸಾರ. ಮಹಾ**ಪುರಾಣ**ದ ಸಾರಾಂಶ ಇದು. ವ್ಯಾಸರು ಶ್ರೀಶುಕ ಬ್ರಹ್ಮರ್ಷಿಯನ್ನು ಪುರಾಣಿಕಾರನ್ನಾಗಿ ಪರೀಕ್ಷಿತ ರಾಜನನ್ನು ಕೇಳುವವನ್ನಾಗಿಯೂ ಮೊದಲನೆಯ ಸ್ಕಂದದಲ್ಲಿಯೇ ಬರೆದಿದ್ದರೆ. ನಾರಾಯಣೀಯಮ್‌ದಲ್ಲಿ ಕವಿಯೇ ಹೇಳುವವನು, ಭಗವಾನ್ ಗುರುವಾಯೂರಪ್ಪನೇ ಕೇಳುವವನು. ಹೃದಯಸ್ಪರ್ಶಿಯಾದ ರಾಗದಲ್ಲಿ ಹಾಡಿ ಮೊರೆ ಹೋಗುತ್ತಾನೆ. ತನ್ನ ಕಾಯಿಲೆಯನ್ನು ವಾಸಿಮಾಡಿ ಹರಿಸಬೇಕೆಂದು ಭಗವಂತನನ್ನು ಬೇಡಿಕೊಳ್ಳುತ್ತಾನೆ,

ಭಕ್ತರ ಮಾನಸಿಕ ಮತ್ತು ಶಾರೀರಕ ಕಾಯಿಲೆಗಳನ್ನು ವಾಸಿಮಾಡುವುದರಲ್ಲಿ ನಾರಾಯಣೀಯಮ್‌ದ '**ನಾರಾಯಣ**'ವು ಅಧ್ಭುತವಾದ ಶಕ್ತಿಯಿಂದ ಕೂಡಿದೆ ಎಂದು ನಂಬಲಾಗಿದೆ. ಕವಿಯ ಸ್ವಂತ ಅನುಭವವೇ ಇದು, ಸಂದೇಹಾತೀತ್ಯವೆಂದು ಸಿದ್ಧಪಡಿಸಿದೆ. ನಾರಾಯಣೀಯಮ್‌ನ್ನು ನಿತ್ಯ ಪಠಿಸುವುದರಿಂದ ಭಕ್ತಾದಿಗಳು '**ಆಯುರಾರೋಗ್ಯಸೌಕ್ಯಮ್**' ಪಡೆಯುತ್ತಾರೆ.

---

3. **सम्मोहनं मोहनात्**
कान्त कान्तिं नधा नतोऽपि मधुरं माधुर्यादपि
सौन्दर्योत्तरतोऽपि सुन्दरतरं ನಾರಾಯಣೀಯಮ್ ದಶಕ, 2 ಶ್ಲೋಕಂ 3

ಸಂಸ್ಕೃತದಲ್ಲಿ ದೇವಸ್ತುತಿ ಕಾವ್ಯ ಸಾಮ್ರಾಜ್ಯದಲ್ಲಿ **ನಾರಾಯಣೀಯಮ್** ಅತ್ಯುನ್ನತ ಸ್ಥಾನ ಹೊಂದಿದೆ. ಸಾಹಿತ್ಯ ದೃಷ್ಟಿಯಕ್ಕಿಂತ ಇದನ್ನು ಭಕ್ತಿ ಕಾವ್ಯವಾಗಿ ಪರಿಗಣಿಸಿದಲ್ಲಿ ಇದಕ್ಕೆ ಸರಿಸಾಟಿಯಾದುದೇ ಇನ್ನೊಂದಿಲ್ಲ.

ಕೇರಳದ ಗವರ್ನರಾಗಿದ್ದ ಡಾ.B. ರಾಮಕೃಷ್ಣರಾವ್ ಒಂದು ಬಾರಿ ನಾರಾಯಣೀಯಮ್‌ದ ಪಾರಾಯಣ ಕೇಳಿ, ಅದರ ಮಹತ್ವವನ್ನು ಅರಿತು ತೆಲುಗು ಭಾಷೆಗೆ ಭಾಷಾಂತರಿಸಿ ಆಂಧ್ರದಲ್ಲಿ ಪ್ರಚುರಪಡಿಸುವಂತೆ ಏರ್ಪಡಿಸಿದರು. ನಾರಾಯಣೀಯಮ್ ತಮಿಳಿಗೂ ಸಹ ಭಾಷಾಂತರ ಹೊಂದಿದೆ.

ಭಗವಾನ್ ಗುರುವಾಯೂರಪ್ಪನ ಮಂಗಳ ಸ್ವರೂಪದ ಸ್ತುತಿಯೊಂದಿಗೆ ಸಂದ್ರಾನಂದವ ಬೊಧಾತಕಮ್ ಎಂದು ನಾರಾಯಣೀಯಮ್ ಪ್ರಾರಂಭವಾಗಿ ಕವಿ ತನ್ನ ಸ್ವಂತ ಕಣ್ಣುಗಳಿಂದ ಶ್ರೀ ಕೃಷ್ಣನನ್ನು ಕಣ್ಣಾರೆ ಕಂಡಂತೆ ವರ್ಣಿಸುವಲ್ಲಿಗೆ ಕಾವ್ಯ ಮಂಗಳವಾಗುತ್ತದೆ.

ಜ್ಞಾನಪ್ಪನ್

ಪೂಂಥನಮ್, ಕವಿಯ ಕುಟುಂಬದ ಹೆಸರು. ಆದರೆ ಈತ ಪೂಂಥನಮ್ ವಂಶದಲ್ಲಿ ಹುಟ್ಟಲಿಲ್ಲ. ಕೇರಳದ ಬ್ರಾಹ್ಮಣರ ಒಂದು ವಿಶಿಷ್ಟ ಸಂಪ್ರದಾಯದಂತೆ ತನ್ನ ಮದುವೆಯ ಮೂಲಕ ಪೂಂಥನಮ್ಮ ವಂಶಕ್ಕೆ ಸೇರಿದವ. ಅನೇಕ ದಿನಗಳವರೆಗೆ ಈ ದಂಪತಿಗಳಿಗೆ ಮಕ್ಕಳಾಗಿರಲಿಲ್ಲ. ಗುರುವಾಯೂರಿನಲ್ಲಿ **ಭಜನೆ** ಸಲ್ಲಿಸಿದ ನಂತರ ಒಂದು ಗಂಡು ಮಗುವಾಯಿತು. ಮಗುವಿನ ಅಯುಸ್ಸು ಭಗವಂತನಿಗೆ ಪ್ರಿಯವಾದದ್ದಾಗಿತ್ತು. **ಅನ್ನಪ್ರಸಾನವ್** ನಡೆಯ ಬೇಕಾದ ದಿನವೇ ಮಗುವು ಪರಲೋಕಕ್ಕೆ ಹೋಯಿತು. ದುಃಖದಿಂದ ತಪ್ತನಾದ ಪೂಂಥನವ್ ಹುಚ್ಚನಾದ ಗುರುವಾಯೂರಿಗೆ ಬಂದು, ಸತ್ತ ಮಗ ಮರಳಿ ಬರುವ ಆಶೆಹೊಂದಿ **ಭಜನೆ** ಪ್ರಾರಂಭಿಸಿದ. ಆತನ ನಂಬುಗೆ ಎಷ್ಟು ಪರಿಶುದ್ಧವಾಗಿತ್ತೆಂದರೆ, ಕೊನೆಗೆ ಭಗವಾನ್ ಗುರುವಾಯೂರಪ್ಪನು ಆತನ ಅಮರ ಶಿಶುವಾಗಿ ಕಾಣಿಸಿಕೊಂಡ, ಯಾವಾಗಲೂ ಅಮರವಾದ ಕೂಸು ಮನದಲ್ಲಿ ಪ್ರತ್ಯಕ್ಷವಾಗಲು ಕವಿಯು ಅತ್ಯಂತ ಆನಂದ ಹೊಂದುತ್ತಿದ್ದ.

ಆತನ ನಿಶ್ಚಯವೇನೆಂದರೆ,

"ನಮ್ಮ ಹೃದಯದಲ್ಲಿ ಉನ್ನಿಕೃಷ್ಣ ನೃತ್ಯಮಾಡುತ್ತಿರಲು,
ಇತರ ಕೂಸುಗಳು ನಮ್ಮ ಮಕ್ಕಳಾಗಿರುವ ಅವಶ್ಯಕತೆ ಇದೆಯೇ"

ಹೀಗೆ ಆತನು ಮೋಕ್ಷವನ್ನು ಹೊಂದಿದ ಮತ್ತು ಜೀವನ್ಮುಕ್ತನಾದ. ನಂತರ ಪ್ರಸಿದ್ಧವಾದ **ಜ್ಞಾನಪ್ಪನ್** ರಚಿಸಿದನು.

ಜ್ಞಾನಪ್ಪನ್, ಸರಳ ಮತ್ತು ನೇರವಾದ ಮಲೆಯಾಳಿ ಭಾಷೆಯಲ್ಲಿದೆ. ಎಷ್ಟು ನೇರವಾಗಿ ಸುಲಲಿತವಾಗಿದೆಯೆಂದರೆ ಈ ಕಾವ್ಯ ನೇರವಾಗಿ ಭಕ್ತರ ಹೃದಯ ತಲುಪುತ್ತದೆ, ಆಳವಾಗಿ ಮನಸ್ಸಿನ ಮೇಲೆ ಪರಿಣಾಮ ಬೀರುತ್ತದೆ. ಎಜುತ್‌ಅಚ್ಚನ್ ಇತ್ಯಾದಿ ಕವಿಗಳು ತಮ್ಮ ಮಹಾಗ್ರಂಥಗಳಲ್ಲಿ ಭಕ್ತಿವಿಷಯದ ಬಗ್ಗೆ ಬರೆದಿದ್ದಾರೆ. ಆದರೆ ಪೂಂಥನಮ್ಮನ ರೀತಿಯೇ ಬೇರೆ. ಗುರುವಾಯೂರಪ್ಪನನ್ನು ಬಾಲಕೃಷ್ಣನಂತೆ ಕಂಡಿದ್ದಾನೆ, ಅಮರ ಶಿಶು, ಆತನನ್ನು ಪ್ರೇಮಿಸುತ್ತಾನೆ, ಪೂಜಿಸುತ್ತಾನೆ ಮತ್ತು ಆರೈಕೆಯನ್ನೂ ಸಹ ಮಾಡುತ್ತಾನೆ. ತಂದೆ ಮಗುವನ್ನು ಪೋಷಿಸುವಂತೆ, ತನ್ನ ಮಗು ಕಾಲವಾದ ಕಾರಣ ಕವಿಯ ಮನಸ್ಸಿಗೆ ಕವಿದ ಕರಾಳ ಚಿಂತೆಯಿಂದ ಕಾವ್ಯ ಹೊರಹೊಮ್ಮಿದೆ.

ಇದು ಸರಳ ಮಲಯಾಳಂ ಭಾಷೆಯಲ್ಲಿರುವುದರಿಂದ ಈ ಕಾವ್ಯದ ಕಂಪು ಇತರ ರಾಜ್ಯಗಳಿಗೆ ಹರಡಲಿಲ್ಲ. ಇಡೀ ಜೀವನ ಸಾರವನ್ನೇ ಅತ್ಯಂತ ನೇರ ಮತ್ತು ಸರಳ ರೀತಿಯಲ್ಲಿ ಕವಿ ನಿವೇದಿಸಿದ್ದಾನೆ.

"ನಾವು ಹುಟ್ಟಿದಾಗ ಇಲ್ಲಿ ಯಾರೂ ಇರಲಿಲ್ಲ
ನಾವು ಸತ್ತಾಗ ಅಲ್ಲಿ ಯಾರೂ ಇರುವುದಿಲ್ಲ
ಕಾರಣ ಈ ಮಧ್ಯದಲ್ಲಿ ನಾವು ಭೇಟಿಯಾದಾಗ್ಗೆ
ಅಯ್ಯೋ, ಏಕೇ, ಈ ಮೋಹ !"

ಜ್ಞಾನಪ್ಪನ್ ಮೇಲೆ ಹೇಳಿದಂತಹ ತತ್ವಜ್ಞಾನ ಪದಗಳಿಂದ ತುಂಬಿದೆ. ಪೂಂತನಮ್ಮನಿಗೆ ಭಗವಂತನ ನಾಮಸ್ಮರಣೆ ಒಂದೇ ಜೀವನ್ಮುಕ್ತನಾಗಲು ಸಾಕಾಗಿದೆ. ಹಿಂದುಗಳು ಭಗವಂತನಲ್ಲಿ ನಂಬುವಂತೆ ಮಾಡುವುದಲ್ಲದೆ ವೇಳೆ, ಸ್ಥಳ ಅಥವಾ ಪರಿಸರ ಇವುಗಳನ್ನು ಗಮನಿಸದೆ ನಾಮಸ್ಮರಣೆಯನ್ನು ಮಾಡಬೇಕು ಎಂಬುದು ಈ ಮಹಾಕಾವ್ಯದ ದಿವ್ಯ ಸಂದೇಶ.

ಮಂಗಳ

ಮಂಗಳ ಮಾಡುವಲ್ಲಿ ನಾವು ಸಹ ಪೂಂತನಮ್ಮ ಹೇಳಿದಂತೆ ವೇಳೆ, ಸ್ಥಳ ಅಥವಾ ಪರಿಸರ ಇವುಗಳನ್ನು ಗಮನಿಸದೆ ಭಗವಂತನ ನಾಮಸ್ಮರಣೆಯನ್ನು ಸ್ಮರಿಸೋಣ. ಈ ಭೂಲೋಕ ವೈಕುಂಠಕ್ಕೆ ತಮ್ಮ ಕಷ್ಟಕಾರ್ಪಣ್ಯಗಳನ್ನು ಕಳೆಯಲೆಂದು ಬರುವ ಭಕ್ತಾದಿಗಳು, ಅಮರ ಚೈತನ್ಯದ ಮಹಿಮೆಯನ್ನು ಅರಿತು ಭಗವಾನ್ ಗುರುವಾಯೂರಪ್ಪನ ಅಮರ ಆಶೀರ್ವಾದ ಪಡೆಯಲಿ. ಮೆಲ್ಪಥರರು ಹೇಳಿವಂತೆ ನಾರಾಯಣನು, "ಶ್ರುತಿಷು ಚ ಜನುಷಾ ಸ್ತುತ್ಯತಾವರ್ಣನನ ಸ್ಫೀತಂ ಲೀಲಾವತಾರಾ"[1] ಎಂದು ಬೇಡಿಕೊಳ್ಳೋಣ. ಭಗವಂತನು ಎಲ್ಲರಿಗೂ "ಆಯುರಾರೋಗ್ಯ ಸೌಖ್ಯಮ್" ಒದಗಿಸಲಿ.

ಮಂಗಳಂ

---

4 श्रतिषु च जनुषा स्तुत्यतावर्णनेन
स्फीतं लीलावतारं ನಾರಾಯಣೀಯಂ ದಶಕಮಣಿ 100. ಶ್ಲೋಕ–11